ಸಂಪುಟ 15
ಸಂಚಿಕೆ 08

ಐಕ್ಯರಂಗ

ರೂ. 2.00
21 ಫೆಬ್ರವರಿ 1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐ.ಎಂ.ಎಫ್. ಬಯಕೆಯ ಬಜೆಟ್ ವಿರುದ್ಧ ಮತ

ಸಿ.ಪಿ.ಐ(ಎಂ) ಪೊಲಿಟ್‌ಬ್ಯೂರೋ ಎಚ್ಚರಿಕೆ

ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಸರಕಾರ ತನ್ನ ಆರ್ಥಿಕ ನೀತಿಗಳನ್ನು ಬದಲಿಸದಿದ್ದರೆ ಸಿಪಿಐ(ಎಂ) ಸಂಸತ್ತಿನಲ್ಲಿ ಬಜೆಟ್ ವಿರುದ್ಧ ಮತ ನೀಡುತ್ತದೆ ಎಂದು ನವದೆಹಲಿಯಲ್ಲಿ ಫೆಬ್ರವರಿ 17, 18ರಂದು ಸಭೆ ಸೇರಿದ್ದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ನಿರ್ಧರಿಸಿದೆ ಎಂದು ತಿಳಿದು ಬಂದಿದೆ.

ಈ ಬಗ್ಗೆ ಸಿಐಟಿಯು ಜನರಲ್ ಕೌನ್ಸಿಲ್ ಸಭೆಗಾಗಿ ಬೆಂಗಳೂರಿನಲ್ಲಿರುವ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಇ. ಬಾಲಾನಂದನ್ ಅವರನ್ನು 'ಐಕ್ಯರಂಗ' ಕೇಳಿದಾಗ ಇತ್ತೀಚಿನ ಸರಕಾರದ ಕ್ರಮಗಳನ್ನು ನೋಡಿದರೆ ಅದು ದೇಶ- ವಿರೋಧಿಯಾದ, ಜನ-ವಿರೋಧಿಯಾದ ಐಎಂಎಫ್ ಮಾರ್ಗವನ್ನೇ ಹಿಡಿಯುವ ಎಲ್ಲಾ ಲಕ್ಷಣಗಳು ಇವೆ, ಆದ್ದರಿಂದ ಇಂತಹ ಬಜೆಟನ್ನು ನಮ್ಮೆಲ್ಲಾ ಶಕ್ತಿ ಹಾಕಿ ಪ್ರಚಂಡ ರೀತಿಯಲ್ಲಿ ವಿರೋಧಿಸದಿರಲು ಯಾವುದೇ ಕಾರಣಗಳಿಲ್ಲ ಎಂದು ತಿಳಿಸಿದರು.

ಡಿಸೆಂಬರ್ 6ರ ನಂತರ ಕೋಮುವಾದಿಗಳ ಹೆಚ್ಚುತ್ತಿರುವ ಆಟಾಟೋಪಗಳಿಂದ ಅಪಾಯಕಾರಿಯಾಗಿರುವ ಸನ್ನಿವೇಶದಲ್ಲಿ ಒಂದೆಡೆ ಕೋಮುವಾದದ ವಿರುದ್ಧ ನರಸಿಂಹರಾವ್ ಸರಕಾರದ ನಿಷ್ಕ್ರಿಯತೆ ಮುಂದುವರಿಯುತ್ತಿದ್ದರೆ, ಇನ್ನೊಂದೆಡೆ ದೇಶದ ಆರ್ಥಿಕ ತೊಂದರೆಗಳ ಹೆಸರಲ್ಲಿ ಐಎಂಎಫ್-ವಿಶ್ವಬ್ಯಾಂಕ್ ಆದೇಶದಂತೆ ಚಾಚೂ ತಪ್ಪದೆ ಸಾಗುತ್ತಾ ಇರುವ ಹಿನ್ನೆಲೆಯಲ್ಲಿ ಸಿಪಿಐ(ಎಂ) ಈ ನಿರ್ಧಾರಕ್ಕೆ ಬಂದಿದೆ.

ಬಜೆಟ್ ದೇಶದ ಮುಂದೆ ಬರುವ ಮೊದಲೇ ಈ ಸರಕಾರ ತಾನಾಗಿಯೇ ಬೆಲೆಗಳನ್ನು ಏರಿಸಲು ಆರಂಭಿಸಿಯೇ ಬಿಟ್ಟಿದೆ. ಆದಾಗಲೇ ನರಳುತ್ತಿರುವ ಬಡಜನರ ಬವಣೆಗಳನ್ನು ಕಡಿಮೆ ಮಾಡಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಬದಲು ಸರಕಾರ ಸಕ್ಕರೆ ಬೆಲೆ ಏರಿಸಿ ಇನ್ನೊಂದು ಪ್ರಹಾರ ನೀಡಿದೆ. ಕಳೆದ ವಾರ ಕಲ್ಲಿದ್ದಲು ಮತ್ತಿತರ ಸಾಮಗ್ರಿಗಳ ಬೆಲೆಯೇರಿಸಿ ಮತ್ತಷ್ಟು ಧಾಳಿ ನಡೆಸಿದೆ. ಮಾರುಕಟ್ಟೆಯ ಮಾತನಾಡುವ ಸರಕಾರ ಮಾರುಕಟ್ಟೆಯಲ್ಲಿ ಬೆಲೆ ನಿಗದಿಯಾಗಲು ಬಿಡದೆ ತಾನೇ ಬೆಲೆಯೇರಿಸುತ್ತಿದೆ. ಸಾಲದಕ್ಕೆ ಸೀಮೆಎಣ್ಣೆ, ಅಡಿಗೆ ಅನಿಲ ಮುಂತಾದ ಜೀವನಾವಶ್ಯಕ ವಸ್ತುಗಳ ವಿತರಣೆಯಲ್ಲಿ ದೇಶದ ಹಾಗೂ ವಿದೇಶಗಳ ಖಾಸಗೀ ಕಂಪೆನಿಗಳಿಗೆ ಅವಕಾಶ ಮಾಡಿಕೊಟ್ಟು ಇವುಗಳ ಬೆಲೆಗಳನ್ನು ವಿಪರೀತ ಹೆಚ್ಚಿಸಲು ದಾರಿ ಮಾಡಿಕೊಟ್ಟಿದೆ. ಈ ಮೂಲಕ ದೇಶದ ಪೆಟ್ರೋಲಿಯಂ ಮತ್ತು ಅನಿಲ ಉದ್ದಿಮೆಯನ್ನು ಖಾಸಗೀಕರಿಸುವ ಐಎಂಎಫ್- ವಿಶ್ವಬ್ಯಾಂಕ್ ಪ್ರಭುಗಳ ಆಜ್ಞೆಯನ್ನು ಜಾರಿಗೆ ತರುತ್ತಿದೆ.

ಬಜೆಟ್ ಅಧಿವೇಶನದ ಮೊದಲೇ ಇಂತಹ ಕ್ರಮಗಳನ್ನು ಕೈಗೊಂಡು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆಯೇ ಐಎಂಎಫ್-ವಿಶ್ವಬ್ಯಾಂಕ್‌ನ ಶರತ್ತುಗಳನ್ನು ಜನಗಳ ಮೇಲೆ ಹೊರಿಸುತ್ತಿದೆ.

ಸಾಲಕ್ಕೆ ಕೈಯೊಡ್ಡಿರುವ ನರಸಿಂಹರಾವ್ ತಾನು ಒಪ್ಪಿದ ಕಠಿಣ ಶರತ್ತುಗಳನ್ನೆಲ್ಲಾ ಪಾಲಿಸುತ್ತದೆಯೋ ಇಲ್ಲವೋ ಎಂಬುದರ ಉಸ್ತುವಾರಿ ನಡೆಸಲು ಐಎಂಎಫ್-ವಿಶ್ವಬ್ಯಾಂಕ್‌ನ ಸಾಲ ದೊರೆಗಳು ನವದೆಹಲಿಯಲ್ಲೇ ವಿಶಾಲ ಕಛೇರಿ ಹಾಕಿಕೊಂಡು ಕೂತಿರುವಾಗ, ಮತ್ತೆ ಮತ್ತೆ ಸಾಲದ ಬಗ್ಗೆಯಷ್ಟೇ ಯೋಚಿಸುವ ಸರಕಾರ ಮುಂದುವರೆದ ದೇಶಗಳ ನಡುವೆಯೇ ವ್ಯಾಪಾರ ಯುದ್ಧಗಳು ನಡೆಯುತ್ತಿರುವ, ಅವರು ಒಬ್ಬ ಇನ್ನೊಬ್ಬರ ಮೇಲೆ ಮಿತಿ ಹಾಕಲು, ಅದೇ ರೀತಿ ಭಾರತದ ಮೇಲೂ ಸೂಪರ್ 301 ಮುಂತಾದವುಗಳ ಮೂಲಕ ಹತೋಟಿ ಹಾಕಲು ಪ್ರಯತ್ನಿಸುತ್ತಿರುವ ಸನ್ನಿವೇಶದಲ್ಲಿಯೇ ಉದಾರೀಕರಣ, ವಿಶ್ವ ಮಾರುಕಟ್ಟೆಯ ಭಾಗವಾಗಬೇಕು ಎನ್ನುವ ಮಂತ್ರ ಜಪಿಸುತ್ತಿದ್ದರೆ ಬೇರೇನು ತಾನೇ ಆಗಲು ಸಾಧ್ಯ ಎಂದು ಕಾಂ. ಬಾಲಾನಂದನ್ ಹೇಳಿದ್ದಾರೆ. ಈ ಸನ್ನಿವೇಶದಲ್ಲಿ ಭಾರತದ ಹಿತಾಸಕ್ತಿಗಳನ್ನು ರಕ್ಷಿಸಬೇಕಾದ್ದು ಕೇಂದ್ರ ಸರಕಾರ ಕರ್ತವ್ಯ. ಬದಲಾಗಿ ಅದು ವಿದೇಶಿ ಆರ್ಥಿಕ ಶಕ್ತಿಗಳು ದೇಶದ ಮೇಲೆ ಸವಾರಿ ಮಾಡಲು ತಾನೇ ಅವಕಾಶ ಮಾಡಿಕೊಡುತ್ತಿದೆ. ಇಂತಹ ದೇಶ-ವಿರೋಧಿ ನೀತಿಗಳನ್ನು ಅನುಸರಿಸಿ ಜನಗಳ ಸಂಕಷ್ಟಗಳನ್ನು ಹೆಚ್ಚಿಸುವ ಜನ-ವಿರೋಧಿ ನೀತಿಗಳನ್ನು ಖಂಡತುಂಡವಾಗಿ ವಿರೋಧಿಸದಿರಲು ಸಾಧ್ಯವೇ ಇಲ್ಲ. ಆದ್ದರಿಂದ ಸಿಪಿಐ(ಎಂ) ಈ ನಿರ್ಧಾರಕ್ಕೆ ಬಂದಿದೆ ಎಂದು ಕಾಂ. ಬಾಲಾನಂದನ್ ತಿಳಿಸಿದ್ದಾರೆ.

ತ್ರಿಪುರಾದಲ್ಲಿ ರಾಷ್ಟ್ರಪತಿ ಆಳ್ವಿಕೆ ಸಿಪಿಐ(ಎಂ) ಒತ್ತಾಯ

ಫೆಬ್ರವರಿ 14ರಂದು ಸಭೆ ಸೇರಿದ್ದ ಸಿಪಿಐ(ಎಂ)ನ ತ್ರಿಪುರಾ ರಾಜ್ಯ ಸಮಿತಿ ಚುನಾವಣೆಯಲ್ಲಿ ಕಾನೂನು-ವ್ಯವಸ್ಥೆ ಪರಿಪಾಲನೆ ಮಾಡಲು ಅಸಮರ್ಥ ಎಂದು ಚುನಾವಣಾ ಆಯೋಗ ಕಾಂಗ್ರೆಸ್(ಐ)-ಟಿಯುಜೆಎಸ್ ಸರಕಾರವನ್ನು ಟೀಕೆಗೊಳಪಡಿಸಿರುವುದರಿಂದ ತಕ್ಷಣ ರಾಷ್ಟ್ರಪತಿ ಆಳ್ವಿಕೆ ತರಬೇಕೆಂದು ಒತ್ತಾಯಿಸಿದೆ. ಇದನ್ನು ಒತ್ತಾಯಿಸಿ ರಾಜ್ಯಾದ್ಯಂತ ರಾಜ್ಯ ಸಮಿತಿಯು ಫೆಬ್ರವರಿ 17 ರಂದು ಎಲ್ಲಾ ಸಬ್ ಡಿವಿಜನ್‌ಗಳಲ್ಲಿ ರ‍್ಯಾಲಿ ನಡೆಸಲು ಕರೆ ನೀಡಿತು.

ಏಪ್ರಿಲ್ 3ರಂದು ಮುಕ್ತ-ನ್ಯಾಯ ಚುನಾವಣೆ ನಡೆಸಬೇಕಾದರೆ ಇದು ಅಗತ್ಯ ಎಂದಿರುವ ರಾಜ್ಯ ಸಿಪಿಐ(ಎಂ)ನ ನಿಯೋಗವೊಂದು ಫೆಬ್ರವರಿ 13ರಂದು ತ್ರಿಪುರಾ ರಾಜ್ಯಪಾಲ ರಘುನಾಥರೆಡ್ಡಿಯವರನ್ನು ಭೇಟಿ ಮಾಡಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಸಲಹೆ ನೀಡಬೇಕೆಂದು ಒತ್ತಾಯಿಸಿದೆ.

ಸಂವಿಧಾನ ನೀಡಿದ ಹಕ್ಕುಗಳ ಪಾಲನೆಯನ್ನು ಮಾಡಲಾಗದ, ಕಾನೂನು- ವ್ಯವಸ್ಥೆಯನ್ನು ಪಾಲಿಸಲಾಗದ ಸರಕಾರ ಇನ್ನು ಹದಿನೈದು ದಿನಗಳೊಳಗೆ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವುದೆಂದು ಯಾರೂ ನಿರೀಕ್ಷಿಸಲು ಸಾಧ್ಯವಿಲ್ಲ.

ಬದಲಾಗಿ ಕಳೆದ ಹತ್ತು ದಿನಗಳಲ್ಲಿ ಭಯೋತ್ಪಾದಕತೆ ತೀವ್ರಗೊಂಡಿದೆ. ನೂರಾರು ಸುಳ್ಳು ಕೇಸುಗಳನ್ನು ಮತ್ತೆ ಹಾಕಲಾಗಿದೆ. ಈ ಸರಕಾರ ಮುಂದುವರಿಯಲು ಬಿಟ್ಟರೆ ಚುನಾವಣಾ ಹೋರಾಟದಲ್ಲಿ ಮುಂದೆಯೂ ವಂಚನೆ ನಡೆಸಲು ನೆರವಾಗುವ ಗೂಂಡಾಗಳಿಗೆ ವಿವಿಧ ಸೌಲಭ್ಯಗಳನ್ನು, ಅಧಿಕಾರದ ದುರುಪಯೋಗ ಮಾಡುವುದು ಖಂಡಿತ. ಚುನಾವಣಾ ಆಯೋಗದ ನಿರ್ಣಯದ ವಿರುದ್ಧ ಬಂದ್ ನಡೆಸಿದ ಈ ಶಕ್ತಿಗಳ ಕೈಯಲ್ಲಿ ಅಧಿಕಾರ ಮುಂದುವರಿದರೆ ವಿರೋಧಿಗಳೊಂದಿಗೆ ಹಗೆ ತೀರಿಸಿಕೊಳ್ಳಲು ಅದು ಪ್ರಯತ್ನಿಸುವುದು ಖಂಡಿತ. ಈ ಕಾರಣದಿಂದಾಗಿ ತಕ್ಷಣ ರಾಷ್ಟ್ರಪತಿ ಆಳ್ವಿಕೆ ತರಬೇಕೆಂದು ನಿಯೋಗ ಒತ್ತಾಯಿಸಿತ್ತು.

'ಬನ್ನಿ, ಭಾರತವನ್ನು ಕೊಳ್ಳೆ ಹೊಡೆಯಿರಿ' ಎನ್ನುತ್ತಿದೆ ಮನೆ ಮುರುಕ ಕಾಂಗ್ರೆ ಸರಕಾರ

-ಸುನಿಲ್ ಮೈತ್ರಾ

ನಿರೀಕ್ಷಿಸಿದಂತೆ ಭಾರತ ಬಹುರಾಷ್ಟ್ರೀಯ ಕಂಪೆನಿಗಳ ಗೋಮಾಳವಾಗಿ ಪರಿವರ್ತಿತವಾಗುತ್ತಿದೆ. ಫೆಬ್ರವರಿ 9ರಂದು ಭಾರತ ಸರಕಾರ 35 ದೀರ್ಘ ಬಳಕೆ ವಸ್ತುಗಳಾದ ವಿಡಿಯೋ, ಕ್ಯಾಮೆರಾ, ಟಿವಿ, ರಿಸೀವರ್, ಟೆಲಿಫೋನ್, ಕಂಪ್ಯೂಟರ್‌ಗಳು ಇತ್ಯಾದಿಗಳ ಮೇಲೆ ಆಮದು ಸುಂಕವನ್ನು 255 ಶೇ.ದಿಂದ 150 ಶೇ. ವರೆಗೆ ಇಳಿಸಿದೆ. ಹಾಗೂ ವಿದೇಶಗಳಿಂದ ಬರುವವರು ತಮ್ಮೊಡನೆ ಒಂದೂವರೆ ಲಕ್ಷ ರೂಪಾಯಿಗಳ ಮೊತ್ತದ ವಸ್ತುಗಳನ್ನು ತರಬಹುದೆಂಬ ರಿಯಾಯಿತಿ ನೀಡಿದೆ. ಕಳೆದ ವಾರವಷ್ಟೇ ದೂರದರ್ಶನದ ಕಾರ್ಯಕ್ರಮವೊಂದರಲ್ಲಿ! 'ಇಕಾನಾಮಿಕ್ ಟೈಮ್ಸ್' ಪತ್ರಿಕೆಯ ಸ್ವಾಮಿನಾಥನ್, ಖ್ಯಾತ ಪತ್ರಕರ್ತ ಪ್ರೇಮ್ ಶಂಕರ್ ಝಾ ಮತ್ತು ಹಣಕಾಸು ಮಂತ್ರಾಲಯದ ಕಾರ್ಯದರ್ಶಿ ಮೊಂಟೆಕ್ ಸಿಂಗ್ ಅಹ್ಲೂವಾಲಿಯಾ ಬಳಕೆ ವಸ್ತುಗಳ ಮಾರುಕಟ್ಟೆ ಹಿಂಜರಿತ ಅನುಭವಿಸುತ್ತಿದೆ ಎಂದು ಒಪ್ಪಿಕೊಂಡರು. ಇಂತಹ ಪರಿಸ್ಥಿತಿ ಅರಿವಿದ್ದರೂ ಆಮದು ಸುಂಕ ಕಡಿತ ಕ್ರಮವನ್ನು ಸರಕಾರ ಯಾಕೆ ಕೈಗೊಂಡಿತು. ಪತ್ರಿಕೆಗಳಲ್ಲಿ ಈಗ ವರದಿಯಾಗಿರುವಂತೆ ಸರಕಾರ ಆಮದು ಸುಂಕವನ್ನು ಈಗಿನ ಶೇ. 110 ರಿಂದ ಶೇ. 70ಕ್ಕೆ ಇಳಿಸುವ ನಿರ್ಧಾರ ಕೈಗೊಂಡಿದೆಯಂತೆ. ಈಗಿನ ಸುಧಾರಣೆ ವಿದೇಶದಿಂದ ಭಾರತಕ್ಕೆ ಬರುವವರಿಗೆ ಅನ್ವಯಿಸುತ್ತದೆ. ಬಹುಶಃ ಮುಂದಿನ ಹೆಜ್ಜೆ ಎಲ್ಲರಿಗೂ ಈ ರಿಯಾಯಿತಿಯನ್ನು ಇನ್ನಷ್ಟು ಹೆಚ್ಚಿಸುವುದಿರಬಹುದು!

ಎಂಬತ್ತರ ದಶಕದಿಂದ ಬಂಡವಾಳ ವಸ್ತುಗಳನ್ನು(ಅಂದರೆ ಉತ್ಪಾದನೆಗೆ ಬೇಕಾದ ಬಹುಮುಖ್ಯ ಯಂತ್ರೋಪಕರಣಗಳು) ಆಮದನ್ನು ಮಾತ್ರ ಸೀಡಲಾಗುತ್ತಿತ್ತು. ಈ ಬಂಡವಾಳ ವಸ್ತುಗಳಿಂದ ಬಳಕೆ ವಸ್ತುಗಳ ಉತ್ಪಾದನೆ ಹೆಚ್ಚಿಸುವುದು ಉದ್ದೇಶವಾಗಿತ್ತು. ಈ ಕೆಳಗಿನ ಕೋಷ್ಟಕ ಬಂಡವಾಳ ವಸ್ತುಗಳ ಆಮದು ಬಳಕೆ ವಸ್ತುಗಳ ಉತ್ಪಾದನೆ ಮುಷ್ಟು ಹೇಗೆ ಹೆಚ್ಚಿಸಿತೆಂದು ತೋರಿಸುತ್ತದೆ.

ವಸ್ತು	1984-85	1989-90
ಕಾರುಗಳ ಸಂಖ್ಯೆಯಲ್ಲಿ	74,200	130,000
ರೆಫ್ರಿಜರೇಟರುಗಳು	27,200	90,0000
ಟಿವಿ ರಿಸೀವರುಗಳು (ಬೆಲೆ ಕೋಟಿ ರೂ.ಗಳಲ್ಲಿ)	436	850
ಟೇಪ್ ರೆಕಾರ್ಡ್‌ಗಳು (ಬೆಲೆ ಕೋಟಿ ರೂ.ಗಳಲ್ಲಿ)	50	300
ಕಂಪ್ಯೂಟರ್‌ಗಳು	110	670

ಹೀಗೆ ಬಂಡವಾಳ ವಸ್ತುಗಳ ಮೇಲೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆಮದು ಮಾಡಿಕೊಂಡ ಸರಕಾರ ಈಗ ಆಮದು ಸುಂಕ ಕಡಿತ ಮಾಡಿದೆ. ಈ ವಸ್ತುಗಳನ್ನು ನಮ್ಮ ದೇಶಕ್ಕೆ ರಫ್ತು ಮಾಡುವವರು ಬಹುರಾಷ್ಟ್ರೀಯ ಕಂಪೆನಿಗಳು. ಮೊದಲೇ ಹೇಳಿದಂತೆ ಈ ವಸ್ತುಗಳ ದೇಶೀ ಮಾರುಕಟ್ಟೆ ಹಿಂಜರಿತ ಅನುಭವಿಸುತ್ತಿದೆ(ಅಂದರೆ ವ್ಯಾಪಾರ ವಹಿವಾಟು ಕಡಿಮೆ ಆಗಿದೆ) ಇದನ್ನು ಮನೆಮುರುಕತನವೆನ್ನೋಣವೇ? ಈ ಮನೆಮುರುಕತನದಲ್ಲೂ ಸ್ಪಷ್ಟ ಲಕ್ಷಣಗಳಿವೆ. ಬೇಜವಾಬ್ದಾರಿತನದ ವ್ಯಾಪಾರ ಮತ್ತು ಹಣಕಾಸು ನೀತಿಗಳ ಪರಿಣಾಮಗಳು ಈಗ ಕಾಣಿಸಿಕೊಳ್ಳುತ್ತಿವೆ. ವಿದೇಶೀ ಸಾಲದ ಮೊತ್ತ ನೂರು ಬಿಲಿಯ ಡಾಲರುಗಳಷ್ಟಾಗಿದೆ.(ಸುಮಾರು 3.5 ಲಕ್ಷ ಕೋಟಿರೂ) ನಮ್ಮ ರಫ್ತಿನ ಶೇ. 30 ರಷ್ಟನ್ನು ಈ ಸಾಲದ ಮರುಪಾವತಿಗೇ ಬಳಸಬೇಕಾಗುತ್ತದೆ. ರಫ್ತಿನ ಹೆಚ್ಚಳ ಏಪ್ರಿಲಿನಿಂದ ಡಿಸೆಂಬರ್ 1992ರವರೆಗೆ ಶೇ. 5.8ರಷ್ಟು ಮಾತ್ರ. ಡಿಸೆಂಬರ್ 1992- 1993ರಲ್ಲಿ ಇದು ಶೇ. 3.4ರಷ್ಟು. ಇದಕ್ಕೆ ವ್ಯತಿರಿಕ್ತವಾಗಿ ಆಮದು ಶೇ. 22ರಷ್ಟು ಆಮದು ರಫ್ತಿಗಿಂತ(ಸುಮಾರು 14 ಸಾವಿರ ಕೋಟಿ ರೂ.) ಬಿಲಿಯ ಡಾಲರುಗಳ ಅಂತರವನ್ನು ಉಳಿಸುತ್ತದೆ. ಅಂದರೆ ಆಮದು ಹೆಚ್ಚಾಗಿ ರಫ್ತು ಕಡಿಮೆಯಾಗಿ ನಾವು ಸಾಲಗಾರರಾಗಿಯೇ ಉಳಿಯುತ್ತೇವೆ. ಅಡಕೊತ್ತಿನಲ್ಲಿ ಸಿಕ್ಕಿದಂತಹ ಈ ಪರಿಸ್ಥಿತಿಯಿಂದಾಗಿ ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಮತ್ತು ಇತರ ಅಂತರಾಷ್ಟ್ರೀಯ ಸಂಸ್ಥೆಗಳಿಂದ ಭಾರತ ಹೆಚ್ಚು ಹೆಚ್ಚು ಸಾಲ ಪಡೆಯಬೇಕಾಗುತ್ತದೆ. ಐಎಂಎಫ್ ಆಗಲೇ 5ರಿಂದ 7 ಬಿಲಿಯ ಡಾಲರುಗಳ ಸಾಲ ನೀಡಲು ಒಪ್ಪಿದೆ - ಆದರೆ ಭಾರತ ಆಮದು ಸುಂಕವನ್ನು ಇನ್ನೂ ಹೆಚ್ಚು ಕಡಿತಗೊಳಿಸಬೇಕೆಂಬ ಷರತ್ತಿನೊಂದಿಗೆ.

ನರಸಿಂಹರಾಯರ ಹೊಸ ಆರ್ಥಿಕ ನೀತಿಗಳನ್ನು ತೆರೆದ ತೋಳುಗಳಿಂದ ಸ್ವಾಗತಿಸಿದ ಉದ್ಯಮಿಗಳೂ ಸಹ ಈಗ ಬೆಚ್ಚಿ ಬೀಳುತ್ತಿದ್ದಾರೆ. ಅವರೂ ಜಾಗತೀಕರಣವನ್ನು ಬಯಸಿದ್ದರು. ಆದರೆ ಈಗ ಕಾಣುತ್ತಿರುವುದೇನು? ಭಾರತ ಜಗತ್ತಿನ ಬೇರೆ ಮಾರುಕಟ್ಟೆಗಳಿಗೆ ಹೋಗುವುದಾಗಿಲ್ಲ. ನಮ್ಮ ರಫ್ತು ಪ್ರಮಾಣ ಅದನ್ನು ಹೇಳುತ್ತದೆ. ಆದರೆ ವಿದೇಶೀಯರು ನಮ್ಮ ಮಾರುಕಟ್ಟೆಯನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ನಮ್ಮ ದೇಶದ ಶೇ. 15ರಿಂದ ಶೇ. 20ರಷ್ಟು ಜನ ಮಾತ್ರ ಈ ಶ್ರೀಮಂತರ ವಸ್ತುಗಳನ್ನು ಖರೀದಿಸಬಲ್ಲರು. ನಮ್ಮ ಉದ್ಯಮಿಗಳು ಈಗ ಬಹುರಾಷ್ಟ್ರೀಯ ಕಂಪೆನಿಗಳೊಂದಿಗೆ ಈ ವಸ್ತುಗಳ ಮಾರಾಟಕ್ಕಾಗಿ ಸ್ಪರ್ಧಿಸಬೇಕಾಗುತ್ತದೆ.

ಈಗ ನಾವು ಬಿತ್ತಿದ್ದನ್ನು ಬೆಳೆವ ಪರಿಸ್ಥಿತಿ. ಉದಾರೀಕರಣದ ಪರಿಣಾಮದಿಂದಾಗಿ ಹಲವು ಉದ್ಯಮಗಳು ತಮ್ಮ ಉತ್ಪಾದನೆ ಕಡಿತಗೊಳಿಸಬೇಕಾಗುತ್ತದೆ. ಹಲವರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಬೇಕಾಗುತ್ತದೆ. ಇದರ ಪರಿಣಾಮದಿಂದಾಗಿ ಲಕ್ಷ ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗುತ್ತಾರೆ. ಉದ್ಯಮಗಳನ್ನು ಹಾಳುಗೆಡಹುವ ಕೆಲಸ ಈಗಾಗಲೇ ಬಹು ವೇಗವಾಗಿ ನಡೆಯುತ್ತಿದೆ. ಇದಕ್ಕೆ ಕಾರಣವಾದ ನೀತಿಗಳನ್ನು ಬದಲಾಯಿಸದೆ ಹೋದರೆ ಈ ಪ್ರಕ್ರಿಯೆ ಮುಂದುವರಿಯುತ್ತದೆ. ಭಾರತದ ಉದ್ಯಮಗಳು ನಾಶ ಹೊಂದುತ್ತವೆ.

ಕೋಮುವಾದಿಗಳನ್ನು ಜಾತ್ಯಾತೀತರನ್ನು ಒಂದೇ ತಕ್ಕಡಿಯಲ್ಲಿ ತೂಗುತ್ತಿದೆ ಸರಕಾರ

- ಇ.ಬಾಲಾನಂದನ್ ಖಂಡನೆ
ಪುಟ 3

ಕಾರ್ಮಿಕ ಸಂಘಟನೆ ಬೆಳೆಯಲು ಅಡ್ಡಿಯೇನು?

......ಪುಟ 2 ನೋಡಿ

ವಾರದ ನುಡಿ

ಡಂಕೆಲ್ ಪ್ರಸ್ತಾಪಗಳು ಮೂಲಭೂತ ಮಾನವ ಹಕ್ಕುಗಳ ಮೇಲೊಂದು ನೇರ ಧಾಳಿ. ಏಕೆಂದರೆ ಅದು ವಿಶ್ವಾದ್ಯಂತ ಕಾರ್ಮಿಕರ ಮೂಲಭೂತ ಹಕ್ಕುಗಳಿಗೆ ವಿರುದ್ಧವಾದದ್ದು.

- ಡಾ.ವಾರ್ ಮೋರ್‌ಹೌಸ್, ಅಂತರ್ರಾಷ್ಟ್ರೀಯ ಹಾಗೂ ಸಾರ್ವಜನಿಕ ವ್ಯವಹಾರಗಳ ಅಂತರ್ರಾಷ್ಟ್ರೀಯ ಮಂಡಳಿ, ನ್ಯೂಯಾರ್ಕ್

ಕಾರ್ಮಿಕ ಆಂದೋಲನ: ಸಂಘಟನೆ ಬೆಳೆಯಲು ಅಡ್ಡವಾಗಿರುವುದೇನು?

ಈ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ಸಿಐಟಿಯುವಿನ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆ(ಫೆಬ್ರವರಿ 19-21) ಬೆಂಗಳೂರಿನಲ್ಲಿ ಮುಕ್ತಾಯವಾಗಿರುತ್ತದೆ. ಇದು ಸಂಘಟನೆಯ ಪ್ರಶ್ನೆಗಳಿಗೇ ಮೀಸಲಾದ ವಿಶೇಷ ಅಧಿವೇಶನ. ಈ ವಿಶೇಷ ಸಭೆ ಕರ್ನಾಟಕಕ್ಕೆ, ನಮ್ಮ ರಾಜ್ಯದಲ್ಲಿ ಒಂದು ಪ್ರಬಲ ಕಾರ್ಮಿಕ ಆಂದೋಲನ ಬೆಳೆಸುವ ಪ್ರಯತ್ನದಲ್ಲೂ ಹೇಗೆ ಪ್ರಯೋಜನಕಾರಿ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಇಲ್ಲಿ ಪರಿಶೀಲಿಸಿದ್ದಾರೆ. ಇದು ಜನರಲ್ ಕೌನ್ಸಿಲ್ ಸಭೆಯ ಮೊದಲೇ ಬರೆದ ಲೇಖನ.

ಸಿಐಟಿಯುವಿನ ಅಖಿಲಭಾರತ ಜನರಲ್ ಕೌನ್ಸಿಲ್ ಸಂಘಟನೆ ಕುರಿತಾದ ಒಂದು ವಿಶೇಷ ಅಧಿವೇಶನ ನಡೆಸಲು ನಿರ್ಧರಿಸಿದ್ದು ಅದನ್ನು ಬೆಂಗಳೂರಿನಲ್ಲಿ ನಡೆಸುವ ಅವಕಾಶ ನಮಗೆ ದೊರೆತಿದೆ. ನಮ್ಮ ಸೀಮಿತ ಸಂಪನ್ಮೂಲಗಳಿಂದಾಗಿ ಇದನ್ನು ನಡೆಸಲು ನಾವು ಸ್ವಲ್ಪ ಹಿಂಜರಿದಿದ್ದೆವು. ಮುಖ್ಯವಾಗಿ ನಮ್ಮ ಸಂಘಟನಾ ದೌರ್ಬಲ್ಯತೆಗಳಿಂದಾಗಿ ಈ ಅವಕಾಶವನ್ನು ಸ್ವೀಕರಿಸುವ ಬಗ್ಗೆ ನಾವು ಯೋಚನೆ ಮಾಡಬೇಕಾಗಿತ್ತು. ಆದರೂ ಅಖಿಲ ಭಾರತ ಮಟ್ಟದ ಸಿಐಟಿಯು ಇದನ್ನು ಬೆಂಗಳೂರಿನಲ್ಲಿಯೇ ನಡೆಯಬೇಕೆಂದು ಒತ್ತಾಯ ಮಾಡಿತು. ಬಹುಶಃ ನಮ್ಮ ಈ ಸಂಘಟನಾ ದೌರ್ಬಲ್ಯವನ್ನು ಗಮನಿಸಿಯೇ ಬೆಂಗಳೂರನ್ನು ಅವರು ಆರಿಸಿಕೊಂಡಿರಬೇಕು.

ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು ಸಂಘಟನೆಯ ವಾಸ್ತವಿಕ ವಿಶ್ಲೇಷಣೆ ಮಾಡುವಾಗ ನಮಗೆ ಅಸಮಾನ ಬೆಳವಣಿಗೆ ಕಾಣಬರುತ್ತದೆ. ಕೈಗಾರಿಕಾ ಬೆಳವಣಿಗೆಯಲ್ಲೂ ಕೂಡಾ, ಕಾರ್ಮಿಕ ವರ್ಗದ ಪ್ರಜ್ಞೆಯ ಮಟ್ಟ, ಯೂನಿಯನ್‌ಗಳ ಪ್ರಜ್ಞೆ, ಸಾಮಾಜಿಕ ಪ್ರಕ್ರಿಯೆಲ್ಲಿ ಅವರ ಸಕ್ರಿಯ ಪಾತ್ರ ಹಾಗೂ ಸಿಐಟಿಯು ಸಂಘಟನೆಯಲ್ಲೂ ಈ ಅಸಮಾನ ಬೆಳವಣಿಗೆ ಕಾಣಬರುತ್ತಿದೆ. ರಾಜ್ಯವಾರು, ಕೈಗಾರಿಕಾವಾರು ಹಾಗೂ ವಲಯವಾರು ವಿಶ್ಲೇಷಣೆ ಮಾಡುವಾಗಲೂ ಈ ಅಸಮಾನ ಬೆಳವಣಿಗೆ ಕಾಣುತ್ತದೆ. ಆದರೆ ಈ ವಿಶ್ಲೇಷಣೆಯ ಜೊತೆಗೇ ಇನ್ನೊಂದು ಕಟು ಸತ್ಯವನ್ನೂ ನಾವು ಕಾಣುತ್ತೇವೆ. ಅದೇನೆಂದರೆ ಕೈಗಾರಿಕಾ ಬೆಳವಣಿಗೆ ಹೆಚ್ಚಿರುವಲ್ಲಿಯೂ ಕಾರ್ಮಿಕರು ಹೆಚ್ಚೆಚ್ಚು ಪ್ರಮಾಣದಲ್ಲಿ ಯೂನಿಯನ್‌ಗಳಲ್ಲಿ ಸೇರಿ ಕೊಂಡಿರುವಲ್ಲಿಯೂ ಸಿಐಟಿಯು ಬೆಳವಣಿಗೆ ಹಿಂದೆ ಬಿದ್ದಿದೆ. ಬೆಂಗಳೂರು ಸೇರಿದಂತೆ ಇಡೀ ಕರ್ನಾಟಕ, ಇಡೀ ಪಶ್ಚಿಮ ಭಾರತ ಅಂದರೆ ಮುಂಬೈ, ಮಹಾರಾಷ್ಟ್ರ ಹಾಗೂ ಗುಜರಾತ ರಾಜ್ಯಗಳ ಚಿತ್ರ ಇದಾದರೆ, ಇಡೀ ಉತ್ತರ ಭಾರತದಲ್ಲೂ ಈ ದೌರ್ಬಲ್ಯ ಕಾಣಿಸುತ್ತದೆ. ಆದರೆ ಸದ್ಯ ಭವಿಷ್ಯದಲ್ಲೇ ಅಲ್ಲವಾದರೂ ಬಲಶಾಲಿಆಗಿ ಮೂಡಿಬರುವ ಸಾಮರ್ಥ್ಯವೂ ಕಂಡುಬರುತ್ತದೆ. ಅತ್ಯಂತ ಬಲಶಾಲಿ ಕಾವಲು ಠಾಣೆ ಪಶ್ಚಿಮ ಬಂಗಾಳವೇ ಎಂದು ಬೇರೆ ಹೇಳಬೇಕಾಗಿಲ್ಲ. ಸಿಐಟಿಯುವಿನ ಅರ್ಧ ಪಾಲು ಸದಸ್ಯತ್ವ ಅಲ್ಲಿದ್ದೇ.

ಪಶ್ಚಿಮ ಬಂಗಾಳ ಒಂದು ಬಹಳ ಅಭಿವೃದ್ಧಿ ಹೊಂದಿದ ರಾಜ್ಯವಾಗಿತ್ತು. ಆದರೆ ಅಲ್ಲಿಯ ಕೈಗಾರಿಕೆಗಳು ತೊಂದರೆಗೀಡಾಗಿವೆ. ಅವು ಪಶ್ಚಿಮ ಭಾರತ, ಕರ್ನಾಟಕದಲ್ಲಿನ ಉದ್ದಿಮೆಗಳಷ್ಟು ಗತಿಶೀಲತೆ ತೋರುತ್ತಿಲ್ಲ.

ಪಶ್ಚಿಮ ಬಂಗಾಳದ ನಂತರ ಹೆಚ್ಚು ಬಲವಿರುವುದೆಂದರೆ ಕೇರಳದಲ್ಲಿ. ಈ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಏನೇನೂ ಸಾಲದು. ಇಲ್ಲಿ ಹೆಚ್ಚು ಸಂಘಟಿತರಾಗಿರುವುದು ಅಸಂಘಟಿತ ಉದ್ದಿಮೆಗಳ ಕಾರ್ಮಿಕರೇ. ಇದು ಆ ರಾಜ್ಯದ ಬೆಳವಣಿಗೆಯ ಸ್ವರೂಪದ ಮೇಲೂ ತನ್ನದೇ ಆದ ಪ್ರಭಾವ ಬೀರಿದೆ. ಆದಾಯದ ಹೆಚ್ಚು ನ್ಯಾಯಯುತವಾದ ಹಂಚಿಕೆ ಅಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಈ ಅಂಕಿ-ಅಂಶ ನೋಡಿ - 1989-90ರಲ್ಲಿ ಕರ್ನಾಟಕದ ತಲಾ ಆದಾಯ 4075 ಕೋಟಿ, ಕೇರಳದ್ದು 3389ರೂ. ಆದರೆ ಕರ್ನಾಟಕದಲ್ಲಿ ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ 32 ಶೇ.ವಾದರೆ ಕೇರಳದಲ್ಲಿ ಅದು 17 ಶೇ.ವಷ್ಟೇ.

ಉತ್ತರಭಾರತದಲ್ಲಿ ಕೈಗಾರಿಕಾ ಬೆಳವಣಿಗೆ ಇದಕ್ಕಿಂತ ಉತ್ತಮ. ದಿಲ್ಲಿಯ 1988-89 ರ ಪ್ರಸಿದ್ಧ ಕನಿಷ್ಟ ಕೂಲಿ ಹೋರಾಟದ ನಂತರ ಅಲ್ಲಿ ಇತರೆಡೆಯೂ ಕನಿಷ್ಟ ಕೂಲಿ ಕಾರ್ಮಿಕರ ಹೋರಾಟ ಬೆಳೆದಿದೆ. ಈ ಅನುಭವಗಳಿಂದ ಪಾಠ ಕಲಿತು ನಮ್ಮ ಆಂದೋಲನವನ್ನು ಬೆಳೆಸಿದರೆ ನಾವು ತೀವ್ರ ಗತಿಯಲ್ಲಿ ಮುನ್ನಡೆಯಬಹುದು, ಅಖಿಲ ಭಾರತ ಮಟ್ಟ ತಲುಪಬಹುದು. ಒಂದು ವೇಳೆ ಹಾಗೆ ಮಾಡದಿದ್ದರೆ ಅವಕ್ಕೇ ನಾವೇ ಹೊಣೆಗಾರರಾಗಬೇಕಾಗುತ್ತದೆ.

ಕರ್ನಾಟಕದಲ್ಲಿ ನಮ್ಮ ದೌರ್ಬಲ್ಯ ಏನು?

ನಮ್ಮ ರಾಜ್ಯದಲ್ಲಿ ಕಾರ್ಮಿಕರ ಸಂಖ್ಯೆ 40 ಲಕ್ಷಕ್ಕೂ ಹೆಚ್ಚು. ಆದರೆ ಎಲ್ಲಾ ರಿಜಿಸ್ಟರಾದ ಕಾರ್ಮಿಕ ಸಂಘಗಳ ಸದಸ್ಯತ್ವ ಸಂಖ್ಯೆ ಕೇವಲ ಸುಮಾರು 5 ಲಕ್ಷ. ಇವುಗಳಲ್ಲಿ ಶೇ. 55ರಷ್ಟು ಯಾವುದೇ ಕೇಂದ್ರ ಸಂಘಟನೆಗೆ ಸೇರಿಲ್ಲ. ಉಳಿದವುಗಳಲ್ಲಿ ಸಿಐಟಿಯು ಸದಸ್ಯತ್ವ ಸುಮಾರು 55 ಸಾವಿರ ಮಾತ್ರ. 40 ಲಕ್ಷ ಕಾರ್ಮಿಕರಲ್ಲಿ 8 ಲಕ್ಷ ಮಾತ್ರ ಕೈಗಾರಿಕಾ ಕಾರ್ಮಿಕರು. ಅವರಲ್ಲಿ ಎರಡೂವರೆ ಲಕ್ಷ ದೊಡ್ಡ ಉದ್ದಿಮೆಗಳಲ್ಲಿದ್ದಾರೆ. ನಮ್ಮ ನಾಯಕತ್ವದಲ್ಲಿ(ಸಿಐಟಿಯು ಸೇರಿದ ಮತ್ತು ಸೇರದ ಸಂಘಟನೆಗಳಲ್ಲೆಲ್ಲಾ ಒಟ್ಟಾಗಿ) ಸುಮಾರು 50 ಸಾವಿರ ಕಾರ್ಮಿಕರಿದ್ದಾರೆ. ಅಸಂಘಟಿತ ಕಾರ್ಮಿಕರ ಒಟ್ಟು ಸಂಖ್ಯೆ 30 ಲಕ್ಷದಲ್ಲಿ ನಮ್ಮ ಸದಸ್ಯತ್ವ ಕೇವಲ 30 ಸಾವಿರ. ರಾಜ್ಯದಲ್ಲಿ ಸಿಐಟಿಯುವಿನ ಅರ್ಧಕ್ಕೂ ಹೆಚ್ಚು ಸದಸ್ಯ ಬಲ ಈ ಸಂಘಟಿತ ವಲಯದ್ದು.

ಸಿಐಟಿಯುವಿನ ಹಿಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ(ನವಂಬರ್ 28-29, 1992, ದೆಹಲಿಯಲ್ಲಿ) ಹಲವು ಸಂಗಾತಿಗಳು ಕೈಗಾರಿಕಾ ಬೆಳವಣಿಗೆ ಬಲವಾಗಿರುವ ಪ್ರದೇಶಗಳಲ್ಲಿ, ಉದಾ : ಪಶ್ಚಿಮ ಭಾರತದಲ್ಲಿ ನಮ್ಮ ಆಂದೋಲನ ಬೆಳವಣಿಗೆ ಹೊಂದಿಲ್ಲ ಎಂದು ಹೇಳಿದರು. ಇಂತಹ ಪ್ರದೇಶಗಳ ಪಟ್ಟಿಯಲ್ಲಿ ಅವರು ಬೆಂಗಳೂರು ಮತ್ತು ಕರ್ನಾಟಕವನ್ನು ಸೇರಿಸಿಕೊಂಡಿದ್ದರು. ಬೆಂಗಳೂರಿನಲ್ಲಿ 16 ಲಕ್ಷ ಕಾರ್ಮಿಕರಿದ್ದಾರೆ. ಅವರಲ್ಲಿ ಶೇ. 25ರಷ್ಟು ದೊಡ್ಡ ಉದ್ದಿಮೆಗಳಲ್ಲಿದ್ದಾರೆ. ಬೆಂಗಳೂರಿನಲ್ಲಿ ಕಾರ್ಮಿಕರನ್ನು ಸಂಘಟಿಸಿ ಸಕ್ರಿಯಗೊಳಿಸುವುದು ನಮ್ಮ ರಾಜ್ಯದಲ್ಲಿ ಆಂದೋಲನವನ್ನು ಬೆಳೆಸುವ ಪ್ರಶ್ನೆಯ ಒಂದು ಮುಖ್ಯ ಅಂಶ. ಈ ದೊಡ್ಡ ಪ್ರಮಾಣದ ಉದ್ದಿಮೆಗಳಲ್ಲಿ ಈಗಾಗಲೇ ಬೇರು ಬಿಟ್ಟಿರುವ ಕಾರ್ಮಿಕ ಮುಖಂಡರೊಂದಿಗೆ ಐಕ್ಯತೆ ಹಾಗೂ ಹೋರಾಟಕ್ಕೆ ಸೂಕ್ತವಾದ ಒಂದು ವಿಧಾನವನ್ನು ರೂಪಿಸುವುದರೊಂದಿಗೇ ನಮ್ಮದೇ ದೌರ್ಬಲ್ಯಗಳನ್ನು ನೀಗಿಸಿಕೊಳ್ಳುವತ್ತ ಕೂಡಾ ನಾವು ಗಮನ ಹರಿಸಬೇಕಾಗಿದೆ. ಒಂದೆಡೆ ವೈಯಕ್ತಿಕವಾದ, ಇನ್ನೊಂದೆಡೆ ಸ್ವಾರ್ಥಸಾಧನೆಗಾಗಿ ಗುಂಪುಗಾರಿಕೆ- ಇವೆರಡೂ ಕ್ರಾಂತಿಕಾರಿ ಸಿದ್ಧಾಂತದ ಮುಖವಾಡ ಧರಿಸಿರುವುದು ನಮ್ಮ ಬೆಳವಣಿಗೆಯನ್ನು ಕುಂಠಿತಗೊಳಿಸಿದೆ.

ನಮ್ಮ ರಾಜ್ಯ ಸಮ್ಮೇಳನ ಈಗಾಗಲೇ ಈ ಸಮಸ್ಯೆಗಳನ್ನು ವಿವರವಾಗಿ ವಿಶ್ಲೇಷಿಸಿದೆ. ಮತ್ತೆ ಅದನ್ನಿಲ್ಲಿ ನಾವು ಪರಿಶೀಲಿಸುವುದಿಲ್ಲ. ಆದರೂ ನಮ್ಮ ರಾಜ್ಯದಲ್ಲಿ ಸಿಐಟಿಯುವನ್ನು ಬೆಳೆಸುವ ಬಗ್ಗೆ ಗಂಭೀರ ಆಸಕ್ತಿಯಿರುವವರೆಲ್ಲರೂ ಅವಿರೋಧವಾಗಿ ಅಂಗೀಕರಿಸಲ್ಪಟ್ಟ ಸಮ್ಮೇಳನದ ವರದಿಯನ್ನು ಅಧ್ಯಯನ ಮಾಡಿ ಅನುಸರಿಸಬೇಕು ಎಂಬತ್ತ ಗಮನ ಸೆಳೆಯಬಯಸುತ್ತೇನೆ.

ನಮ್ಮ ಸಮಸ್ಯೆಗಳಷ್ಟೇ ಅಲ್ಲ

ನಾವು ಗಮನಿಸಿರುವ ಒಂದು ಅಂಶವೆಂದರೆ ಇದು ಕೇವಲ ನಮ್ಮ ರಾಜ್ಯದ ಅನುಭವವಷ್ಟೇ ಅಲ್ಲ - ಮೇಲೆ ಹೇಳಿದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಬಿಹಾರದ ಸಂಗಾತಿಯೊಬ್ಬರು ಮಾತನಾಡುತ್ತಾ ಕಾರ್ಮಿಕ ಸಂಘಗಳ ಮುಖಂಡರು 'ಬಾಬು'('ಜಂಟಲ್‌ಮನ್')ಗಳಾಗಿದ್ದಾರೆ ಎಂದರೆ ಒರಿಸ್ಸಾದ ಸಂಗಾತಿಯೊಬ್ಬರು ಕಾರ್ಮಿಕ ಸಂಘಗಳ ಮುಂದಾಳುಗಳು ತಮ್ಮ ಸ್ವಂತದ ಅಭಿವೃದ್ಧಿ ಬಗ್ಗೆಯೇ ಕಾಳಜಿ ವಹಿಸುವ ಬಗ್ಗೆ ಮಾತನಾಡಿದರು. ಪಶ್ಚಿಮ ಬಂಗಾಳದ ಹಿರಿಯಸಂಗಾತಿಯೊಬ್ಬರು ನಮ್ಮ ಸಂಗಾತಿಗಳು ಹಿಂದಿನಂತೆ ಫ್ಯಾಕ್ಟರಿ ಗೇಟುಗಳತ್ತ ಹೋಗದೆ ಕಚೇರಿಗಳಿಂದಲೇ ಯೂನಿಯನ್ ನಡೆಸುತ್ತಿದ್ದಾರೆ ಎಂದರು. ಕೇವಲ ಸ್ವಂತದ ಉನ್ನತ, ಪ್ರಯೋಜನಕ್ಕಷ್ಟೇ ಕೆಲಸ ಮಾಡುವ ಈ ಪ್ರವೃತ್ತಿಯ ಅಪಾಯವನ್ನು ಎಲ್ಲಾ ಮಟ್ಟಗಳಲ್ಲಿ ಎದುರಿಸಬೇಕಾಗಿದೆ.

ಕಾರ್ಮಿಕ ಆಂದೋಲನದ ಗುರಿ, ಧ್ಯೇಯೋದ್ದೇಶಗಳಿಗೆ ಬದ್ಧರಾಗಿದ್ದರೆ ಇಂತಹ ಸ್ವಾರ್ಥಸಾಧನೆಯ ಪ್ರವೃತ್ತಿ ಬರುವುದಿಲ್ಲ. ಸಮಾಜವಾದ ನಮ್ಮ ಗುರಿ ಎಂದು ಹೇಳಿದರಷ್ಟೇ ಸಾಲದು. ಆಚರಣೆ ಅದಕ್ಕೆ ವಿರುದ್ಧವಾಗಿದ್ದರೆ? ಆಳುವ ವರ್ಗಗಳ ಧೋರಣೆಗಳನ್ನು ವಿವರಿಸಿ, ಅವನ್ನು ಸೋಲಿಸದೆ ಸಮಾಜವಾದ ಸಾಧನೆ ಸಾಧ್ಯವಿಲ್ಲ. ಕಾರ್ಮಿಕ ಸಂಘಟನಾ ಮಟ್ಟದಲ್ಲಿ ಇದರಲ್ಲಿ ನಾವು ಯಶಸ್ವಿಯಾಗುವುದು ಹೇಗೆ ಎಂದಷ್ಟೇ ಇಲ್ಲಿ ನೋಡೋಣ.

ಸಂಘಟನೆಯ ಕುರಿತಾದ ನಿರ್ಣಾಯಕ ಪ್ರಶ್ನೆ

ಅಖಿಲಬಾರತ ಮಟ್ಟದಲ್ಲಿ ಸಿಐಟಿಯುನ ಯಶಸ್ಸು ಅದು ದೇಶದ ಕಾರ್ಮಿಕ ವರ್ಗದ ಪರಿಣಾಮಕಾರಿ ಸಂಘಟನೆಗಳಲ್ಲಿ ಒಂದು ಅಥವಾ ಬಹುಶಃ ಅತ್ಯಂತ ಪರಿಣಾಮಕಾರಿ ಸಂಘಟನೆ ಎಂದು ಗುರುತಿಸುವಂತಾಗಿದೆ. ಆದರೆ ಇಡೀ ಕಾರ್ಮಿಕ ವರ್ಗ ನಮ್ಮ ಸಂಘಟನೆಯನ್ನೇಕೆ ಸೇರುವುದಿಲ್ಲ ಅಥವಾ ಇಡೀ ವರ್ಗದ ನೇತೃತ್ವ ನೀಡುವಲ್ಲಿ ನಮ್ಮ ಸಂಘಟನೆಗೆ ಅಡ್ಡಿಯಾಗಿರುವ ಸಮಸ್ಯೆಗಳೇನು ಎಂಬುದು ನಾವು ಪರಿಹರಿಸಬೇಕಾದ ನಿರ್ಣಾಯಕ ಪ್ರಶ್ನೆ.

ಪುಟ 8ಕ್ಕೆ

ದೇಶದ ಮೇಲೆ ಹದ್ದುಗಳು ಹಾರಾಡುತ್ತಿವೆ

ಬ್ರಿಟನ್ನಿನ ಪ್ರಧಾನಿ ಜಾನ್ ಮೇಜರ್‌ನ ಭಾರತ ಭೇಟಿ ನೆನಪಿದೆಯೇ? ಮೊನ್ನೆ ಮೊನ್ನೆ ಮೇಜರ್ ಉದ್ಯಮಿಗಳ ತಂಡವನ್ನೇ ಕಟ್ಟಿಕೊಂಡು ಬಂದು ಹೋದರು.

ಈಗ ಸ್ಪೇನಿನ ಪ್ರಧಾನಿ ಫಿಲಿಪ್ ಗೊನ್ಸಾಲ್ವೆಜ್ ಬಂದು ಹೋಗಿದ್ದಾರೆ. ನಮ್ಮ ಪ್ರಧಾನಿ ಭಾರತದ ಆರ್ಥಿಕ ಉದಾರೀಕರಣದ ನೀತಿ ಮುಂದುವರೆಯುತ್ತೆ ಎಂಬ ಭರವಸೆಯನ್ನು ಸಹ ನೀಡಿದ್ದಾರೆ. ಉದಾರೀಕರಣದ ಹಿನ್ನೆಲೆಯಲ್ಲಿ ಭಾರತಕ್ಕೆ ಬೇಟಿ ನೀಡುತ್ತಿರುವ ಈ ಪಾಶ್ಚಾತ್ಯ ರಾಷ್ಟ್ರಗಳ ಮುಖಂಡರುಗಳ ಏಕೈಕ ಉದ್ದೇಶ ಭಾರತವನ್ನು ಕೊಳ್ಳೆ ಹೊಡೆಯುವುದು. ಭಾರತದ ವಿಶಾಲ ಮಾರುಕಟ್ಟೆ ಇಲ್ಲಿನ ಕಡಿಮೆ ಬೆಲೆಯ ಕಾರ್ಮಿಕ ಶಕ್ತಿ ಇಲ್ಲಿನ ಅಮೂಲ್ಯ(ಆದರೂ ಕಡಿಮೆ ಬೆಲೆಗೆ ದೊರೆವ) ಕಚ್ಚಾ ಸಾಮಗ್ರಿ ಇವೆಲ್ಲವುಗಳ ಲಾಭ ಪಡೆಯುವುದೇ ಅವರ ಉದ್ದೇಶ. ಈ ಪ್ರಕ್ರಿಯೆಯಲ್ಲಿ ಅವರ್ಣನೀಯ ನೋವು ಅನುಭವಿಸುವುದು ಭಾರತದ ಬಹುಸಂಖ್ಯಾತ ಬಡಜನತೆ. ಹೇಳಿ ಈ ವಿದೇಶಿ ಮುಖಂಡರು ಹದ್ದುಗಳಲ್ಲವೇ?

ಬರಲಿದ್ದಾರೆ ಅಮೇರಿಕದ ಅಡುಗೆ ಭಟ್ಟರು

ಆಹಾರ ತಯಾರಿಕೆಯಲ್ಲಿ ಮತ್ತು ವ್ಯಾಪಾರದಲ್ಲಿ ಹೆಸರು ಪಡೆದಿರುವ ಅಮೇರಿಕದ ಮ್ಯಾಕ್ ಡೊನಾಲ್ಡ್ ಎಂಬ ಕಂಪೆನಿ ಭಾರತಕ್ಕೆ ಬರಲಿದೆ. ನೂರ ಅರವತ್ತೆರಡು ಕೋಟಿ ರೂಪಾಯಿಗಳ ದೊಡ್ಡ ಯೋಜನೆಯೊಂದಿಗೆ ಬರಲಿರುವ ಈ ಕಂಪೆನಿ ಭಾರತದಲ್ಲಿ ...ಲವು ರೆಸ್ಟೋರೆಂಟ್‌ಗಳನ್ನು ತೆರೆಯಲಿದೆ. ವಿದೇಶಿ ...ಡಿಕೆಗಳ ಮೇಲಿನ ಸಮಿತಿ ಈ ಕಂಪನಿಯ ಪ್ರಸ್ತಾ...ಗಳನ್ನು ಒಪ್ಪಿಕೊಂಡಿದೆ.

ದೇಶದ ಕೋಟಿ ಕೋಟಿಗಟ್ಟಲೆ ಜನ ಒಪ್ಪೊತ್ತಿನ ...ಗೂ ಗತಿಯಿಲ್ಲದೆ ನರಳುವಾಗ, ತಿನ್ನುವ ಆಹಾ...ದಲ್ಲಿ ಪೌಷ್ಟಿಕಾಂಶಗಳ ಕೊರತೆ ತೀವ್ರವಾಗಿ ಆದರಿಂದ ...ರ ಆರೋಗ್ಯ ಸಮಸ್ಯೆ ಬೃಹದಾಕಾರವಾಗಿ ಬೆಳೆದಿ...ಗ ದುಡ್ಡಿರುವ ಕೆಲವೇ ಶ್ರೀಮಂತರ ಸಲುವಾಗಿ ...ಹ ಒಂದು ಕಂಪೆನಿ ಬರುತ್ತಲಿದೆ. ಲಾಭಕ್ಕಾಗಿ ಬರುವ ಈ ಕಂಪೆನಿ ದೇಶದ ಬಡಜನತೆಯ ಆಹಾರ ಸಮಸ್ಯೆಗೆ ಏನು ಮಾಡೀತು? ಇದು ಉದಾರೀಕರಣ!!!

ಕೃಷಿ ಕ್ಷೇತ್ರಕ್ಕೂ ಬರಲಿರುವ ವಿಶ್ವಬ್ಯಾಂಕ್ ನೆರವು


ವಿಶ್ವಬ್ಯಾಂಕ್ ಭಾರತದ ಕೃಷಿಗೂ ನೆರವು ನೀಡುವ ಮಾತನಾಡುತ್ತಿದೆ. ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಅರ್ನೆಸ್ಟ್ ಸ್ಟರ್ನ್ ಮಹಾಶಯರು ಭಾರತ ನಡೆಸುತ್ತಿರುವ ಉದಾರೀಕರಣವನ್ನು ಹೊಗಳುತ್ತ ಈ ಮಾತನ್ನಾಡಿದ್ದಾರೆ. ಬಾರತಕ್ಕೆ ಭೇಟಿ ನೀಡಿರುವ ಈತ ಹೊಸ ಹೊಸ ಷರತ್ತುಗಳನ್ನು ಕೇಂದ್ರ ಕೃಷಿ ಮಂತ್ರಿ ಬಲರಾಮ್ ಜಾಖಡ್ ಕಿವಿಯಲ್ಲಿ ಉಸಿರಿರುವಂತೆ ಕಾಣುತ್ತದೆ.

ಒಂದು ಕಡೆಯಿಂದ ಡಂಕೆಲ್ ಪ್ರಸ್ತಾಪಗಳ ಮೂಲಕ ನಮ್ಮ ಕೃಷಿ ವ್ಯವಸ್ಥೆಯನ್ನೇ ಬುಡಮೇಲು ಮಾಡ ಹೊರಟಿರುವ ಇವರುಗಳು ನೆರವು ನೀಡುವ ಮಾತನಾಡುವದು ಕುಚೋದ್ಯವಲ್ಲವೇ?

ದೇಶದ ಆರ್ಥಿಕ ಸಂಕಟಗಳಿಗೆ ಮುಂಬಯಿ ಸೂಚಕ

ದೇಶದ ಔದ್ಯಮಿಕ ಕೇಂದ್ರವಾದ ಮುಂಬಯಿಯನ್ನೊಳಗೊಂಡಿರುವ ಮಹಾರಾಷ್ಟ್ರ ನಮ್ಮ ಆರ್ಥಿಕ ಸಂಕಟಗಳ ಸೂಚನೆ ನೀಡುತ್ತದೆ. ಅತ್ಯಂತ ಹೆಚ್ಚಿನ ಔದ್ಯಮಿಕ ಅಶಾಂತಿಯನ್ನು ತೋರುತ್ತಿರುವ ಮುಂಬಯಿಯಲ್ಲಿ 1991 ರಲ್ಲಿ 140 ಮುಷ್ಕರಗಳಾಗಿವೆ. ಸುಮಾರು 42,200 ಕಾರ್ಮಿಕರನ್ನೊಳಗೊಂಡ ಈ ಮುಷ್ಕರಗಳಿಂದಾಗಿ 13.5 ಲಕ್ಷ ಮಾನವ ದಿನಗಳ ಹಾನಿಯಾಗಿವೆ. 1992 ರಲ್ಲಿ 132 ಮುಷ್ಕರಗಳಾಗಿದ್ದು 9.19 ಲಕ್ಷ ಮಾನವ ದಿನಗಳ ಹಾನಿಯಾಗಿದೆ. ಕಾರ್ಮಿಕರು ಈ ಮುಷ್ಕರಗಳಿಂದ 11.30 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ.

ಮುಂಬರುವ ದಿನಗಳಲ್ಲಿ ದೇಶಕ್ಕೆ ಅತಿ ದೊಡ್ಡ ಪ್ರಮಾಣದಲ್ಲಿ ಬರಲಿರುವ ಸಂಕಟಗಳ ದಿಕ್ಸೂಚಿಯಾಗಿದೆ ಇದು .



ವಿದೇಶಿ ನೆರವಿನ ಧಾರೆ ಬತ್ತಬಹುದು

ವಿಶ್ವಬ್ಯಾಂಕ್‌ನ ಉಪಾಧ್ಯಕ್ಷ ಡಾ. ರಾಜಗೋಪಾಲನ್ ಇದನ್ನು ಹೇಳಿದ್ದಾರೆ. ಭಾರತ ಸರ್ಕಾರ ವಿಶ್ವಬ್ಯಾಂಕ್ ಐ.ಎಂ.ಎಫ್‌ಗಳ ಅಣತಿಯಂತೆ ಉದಾರೀಕರಣದಲ್ಲಿ ತೊಡಗಿದ್ದಾಗ ಉದಾರವಾಗಿ ಎಂಬಂತೆ ಹರಿದು ಬರುತ್ತಿರುವ ಈ ನೆರವು ಕಡಿಮೆಯಾಗುವುದರ ಪರಿಣಾಮ ಬಹಳ ದುರಂತಮಯವಾಗಬಹುದು.

ಇಂದು ವಿದೇಶಿ-ಅದರಲ್ಲೂ ಐ.ಎಂ.ಎಫ್. ವಿಶ್ವಬ್ಯಾಂಕ್- ನೆರವಿನ ಮೇಲೆ ನಾವು ಎಷ್ಟು ಅವಲಂಬಿತವಾಗಿದ್ದೇವೆಂದರೆ ಅದಿಲ್ಲದೇ ನಮ್ಮ ಆರ್ಥಿಕವೇ ಕುಸಿಯಬಹುದು. ಇಂತಹ ಪರಾವಲಂಬನೆಯನ್ನು ನಮ್ಮ ಕೇಂದ್ರ ಸರ್ಕಾರ ಸೃಷ್ಟಿಸಿದೆ.

ಕ್ಯೂಬಾದಂತಹ ಪುಟ್ಟದೇಶ ತನ್ನ ಸೌರ್ವಭೌಮತ್ವದ ಪ್ರಶ್ನೆ ಬಂದಾಗ 'ಸಮಾಜವಾದ ಅಥವಾ ಸಾವು' ಎಂಬ ಘೋಷಣೆಯೊಂದಿಗೆ ಅಮೇರಿಕದಂತಹ ದೇಶಕ್ಕೆ ಸೆಡ್ಡು ಹೊಡೆದು ನಿಂತಿದೆ. ಅಲ್ಲಿಯ ಪ್ರತಿಯೊಬ್ಬ ಪ್ರಜೆ ಈ ಹೋರಾಟಕ್ಕಾಗಿ ಮಾನಸಿಕವಾಗಿ ಮತ್ತು ಭೌತಿಕವಾಗಿ ಸಿದ್ಧನಾಗಿದ್ದಾನೆ. ಆದರೆ ನಮ್ಮ ದೇಶದ ಪ್ರಜೆಗಳನ್ನು ಅಂತಹ ಹೋರಾಟದ ಬದಲು ಮರಣಾಂತಿಕವಾದ ಅವಲಂಬನೆಗೆ ನಮ್ಮ ಸರ್ಕಾರ ಸಿದ್ಧಗೊಳಿಸಿದೆ. ಮುಂಬರುವ ದಿನಗಳು ಈ ದೃಷ್ಟಿಯಿಂದ ಅತ್ಯಂತ ನೋವಿನ ದಿನಗಳಾಗುವ ಚಿಹ್ನೆಗಳು ಕಾಣುತ್ತಿವೆ.

ದೇಶದಿಂದ ಹೊರಕ್ಕೆ ಹಾರಿದ ಹಣ

ಹರ್ಷದ್ ಮೆಹ್ತ ಮತ್ತು ಇತರರು ಸ್ವಿಟ್ಜರ್ಲ್ಯಾಂಡಿನ ಬ್ಯಾಂಕಿನಲ್ಲಿ ತೆರೆದ ಖಾತೆಗಳನ್ನು ಅಲ್ಲಿನ ಅಧಿಕಾರಿಗಳು ನಿರ್ಜೀವಗೊಳಿಸಿದ್ದಾರೆ. ಸಿಬಿಐ ಬರೆದ ಪತ್ರಗಳಿಗೆ ಪ್ರತಿಕ್ರಿಯೆಯಾಗಿ ಈ ಕ್ರಮ ಬಂದಿದೆ. ಅಂದರೆ ಈ ಹಗರಣಕಾರರು ವಿದೇಶಗಳಲ್ಲಿ ಹಗರಣದ ದೊಡ್ಡ ಮೊತ್ತದ ಹಣ ಇಟ್ಟಿದ್ದಾರೆಂಬುದು ಸ್ಪಷ್ಟವಾಯಿತು. ಸಿಬಿಐ ಜರ್ಮನಿ, ಬ್ರಿಟನ್, ಸ್ಪೇನ್, ದುಬಾಯಿಗಳಿಗೂ ಪತ್ರಗಳನ್ನು ಬರೆದಿದೆ.

ಬಹುಶಃ ಹರ್ಷದ್ ಮೆಹ್ತನ ಅಭಿಮಾನಿಗಳಿಗೆ ತಮ್ಮ (ಚೋರ) ನಾಯಕನ ಬಗೆಗಿನ ಅಭಿಮಾನ ಇನ್ನೂ ಹೆಚ್ಚಾಗಿ ಆತನ ಮೆರವಣಿಗೆ ಮಾಡುವರೇನೋ?

ಮನಮೋಹನ್‌ಸಿಂಗ್ ಮತ್ತು ಶಂಕರಾನಂದರಿಗೆ ಪ್ರಶ್ನಾವಳಿ

ಸಂಸದೀಯ ಸಮಿತಿ ಕೇಂದ್ರ ಹಣಕಾಸು ಸಚಿವ ಮನಮೋಹನಸಿಂಗ್ ಮತ್ತು ಹಿಂದಿನ ಪೆಟ್ರೋಲಿಯಂ ಮತ್ತು ತೈಲ ಅಭಿವೃದ್ಧಿ ಸಚಿವ ಶಂಕರಾನಂದರಿಗೆ ಸಾಕ್ಷ ನೀಡಲು ಪ್ರಶ್ನಾವಳಿಯೊಂದನ್ನು ಕಳುಹಿಸಿದೆ. ಈ ಇಬ್ಬರು ಸಚಿವರುಗಳು ಸಮಿತಿಯ ಮುಂದೆ ಹೇಳಿಕೆ ನೀಡಬೇಕಾಗುತ್ತದೆಂಬ ವರದಿಗಳು ಬಂದ ನಂತರ ಸಮಿತಿಯ ಅಧ್ಯಕ್ಷ ರಾಮ್ ನಿವಾಸ್ ಮಿರ್ಧಾ ಈ ವರದಿಗಳನ್ನು ಅಲ್ಲಗಳೆದು ಪ್ರಶ್ನಾವಳಿಯ ಬಗೆಗೆ ಹೇಳುತ್ತಿರುವುದು ಕುತೂಹಲಕಾರಿಯಾಗಿದೆ. ತೆರೆಯ ಮರೆಯಲ್ಲಿ ಏನು ನಡೆಯುತ್ತಿದೆ ಎಂಬ ಪ್ರಶ್ನೆಯನ್ನು ಬಹುಶಃ ಈ ಸಂಸದೀಯ ಸಮಿತಿಗೂ ಕೇಳಬೇಕಾಗಬಹುದು?

ಸಿಬಿಐ ಬಗ್ಗೆ ಮಾಧವನ್ ಅಸಮಾಧಾನ

ಮಾಧವನ್ ಸಂಸದೀಯ ಸಮಿತಿಯ ಮುಂದೆ ಹೇಳಿಕೆ ನೀಡಿ ತಮ್ಮ ರಾಜೀನಾಮೆ ಹಿನ್ನೆಲೆ ಹೇಳಿದ್ದು ನೆನಪಿದೆ ತಾನೆ? ನಂತರ ಸಿಬಿಐ ನಿರ್ದೇಶಕ ವತ್ತಾ ಮಾಧವನ್‌ರ ಈ ಹೇಳಿಕೆಗಳನ್ನು ನಿರಾಕರಿಸಿದ್ದರು. ಮಾಧವನ್ ಈಗ ಸತ್ಯವನ್ನು ಜನರ ಮುಂದಿಡಲು ತಾನು ಪತ್ರಿಕಾ ಹೇಳಿಕೆ ನೀಡಲು ಅನುಮತಿ ನೀಡಬೇಕೆಂದು ಜಂಟಿ ಸಂಸದೀಯ ಸಮಿತಿಯನ್ನು ಕೇಳಿದ್ದಾರೆ. ಸಮಿತಿಯ ಅಧ್ಯಕ್ಷರು ಹಿಂದೆ ಮುಂದೆ ನೋಡುತ್ತಿದ್ದಾರೆ. ಸತ್ಯ ಹೊರಬಂದರೆ ಆ ಸತ್ಯದ ಬೆಳಕಿನಲ್ಲಿ ಸರ್ಕಾರದ ಹೊಲಸು ಕೈಗಳು ಜನರಿಗೆ ಕಾಣಬಹುದಾದ ಭಯ ಸರ್ಕಾರಕ್ಕಿರಬಹುದೆ ?



ಈಗಲೇ ಎದ್ದು ಬಾ..

ಏಳುವುದಿದ್ದರೆ
ಈಗಲೇ ಎದ್ದು ಬಿಡು!
ನಡುಹಗಲು ಬದುಕು ಸುಡುವುದರ
ವಾಸನೆ ಬಡಿದು
ಜೀವಗಳು ಬೇಯುತ್ತಿರುವಾಗ;
ಬೆಳಕು ಪಾರದರ್ಶಕ:
ದೇಹ-ಮನಗಳೆರಡೂ ಹಾಯಬಹುದು ;
ಮಲಗಿ ಬಿಡು, ಎದ್ದೇನು ಮಾಡುವೆ!
ನಡುರಾತ್ರಿ
ಶವಗಳ ಜಾತ್ರೆಯಲ್ಲಿ
ಕತ್ತಲ ಗೋಡೆಯ ಬಂಧಿ-
ಕಣ್ಣ ಹನಿಗೂ
ಹೃದಯದ ಮಾರ್ದವಕ್ಕೂ
'ಅಯ್ಯೋ' ಎಂಬ ಕೂಗಿಗೂ
ಯಾವ ಅರ್ಥವೂ ಇರುವುದಿಲ್ಲ.
ಕೊಂದವರು ಕೊಲ್ಲಲ್ಪಡುತ್ತಿರೆ!
ಎದುರಿಸದವರು ಜೀವನ ಮೆರೆಯುತ್ತಾರೆ!
ನಿದ್ದೆಯಿಂದ
ಅಕಾಲಕ್ಕೆದ್ದವ ನಿನ್ನೊಬ್ಬ
ಬದುಕಿಲ್ಲ-ಸಾವಿಲ್ಲ
ಅನಿಷ್ಟ ಚಿರಂಜೀವಿ!

ಬಾ,
ಕೈ ಕೊಡು,
ಹೋರಾಟಕ್ಕೆ ಶುಭ ಮಹೂರ್ತವೆಂಬುದಿಲ್ಲ.

-ಫರಾಜ್-

ಕೋಮುವಾದಿಗಳು ಮತ್ತು ಕೋಮುವಾದ-ವಿರೋಧಿಗಳನ್ನು ಒಂದೇ ತಕ್ಕಡಿಯಲ್ಲಿ ತೂಗುತ್ತಿದೆ ಸರಕಾರ

ಕಾಂ. ಬಾಲಾನಂದನ್ ಖಂಡನೆ

ಬಿಜೆಪಿಯ ಫೆಬ್ರುವರಿ 25ರ ರ್‍ಯಾಲಿಯಿಂದ ದಿಲ್ಲಿಯಲ್ಲೂ ಮುಂಬೈ ರೀತಿಯ ಸರ್ವನಾಶದ ಪುನರಾವರ್ತನೆಯಾಗಬಹುದೆಂಬ ಸಂದೇಹ ಜನರಲ್ಲಿ ಹರಡಿತ್ತು. ನರಸಿಂಹರಾವ್ ಸರಕಾರ ರ್‍ಯಾಲಿಯನ್ನು ನಿಷೇಧಿಸಿತು. ಅದರೊಂದಿಗೇ ಅವರು ಎಲ್ಲಾ ರ್‍ಯಾಲಿಗಳ ಮೇಲೆ ನಿಷೇಧ ಹಾಕಿದರು. ಇದರಿಂದಾಗಿ ಮಾರ್ಚ್ 30ರಂದು ರಾಷ್ಟ್ರೀಯ ಏಕತಾ ಆಂದೋಲನ ನಡೆಸಬೇಕೆಂದಿರುವ ಬೃಹತ್ ರ್‍ಯಾಲಿಯ ಮೇಲೂ ಕಲ್ಲು ಹಾಕುವ ಪ್ರಯತ್ನ ಮಾಡಿದೆ. ಈ 'ನಿಷ್ಪಕ್ಷಪಾತತೆ'ಯ ಮೂಲಕ ದೇಶದ ಜಾತ್ಯಾತೀತತೆ ಹಾಗೂ ಐಕ್ಯತೆಯನ್ನು ಎತ್ತಿ ಹಿಡಿಯುವ ಕೋಮುವಾದ- ವಿರೋಧಿ ರ್‍ಯಾಲಿಯನ್ನು ಸಂಘ ಪರಿವಾರದಂತಹ ಕೋಮುವಾದಿ ಶಕ್ತಿಗಳನ್ನು ಈ ಸರಕಾರ ಒಂದೇ ತಕ್ಕಡಿಯಲ್ಲಿ ತೂಗಿದೆ. ಇದು ಖಂಡನಾರ್ಹ. ಹಿಂದೂ ಕೋಮುವಾದಿ ಶಕ್ತಿಗಳು ಮುಂದೊತ್ತಿ ಬರುತ್ತಿದ್ದರೂ ಕಾಂಗ್ರೆಸ್(ಐ) ಪಕ್ಷ ಮತ್ತು ಕೇಂದ್ರ ಸರಕಾರ ಅಡ್ಡಗೋಡೆಯ ಮೇಲೆಯೇ ಕೂತಿವೆ ಎಂದು ಸಿಐಟಿಯು ಅಧ್ಯಕ್ಷ ಕಾಂ. ಇ.ಬಾಲಾನಂದನ್ ಹೇಳಿದ್ದಾರೆ.

ಅವರು ಫೆಬ್ರುವರಿ 19ರಂದು ಬೆಂಗಳೂರಿನಲ್ಲಿ ಸಿಐಟಿಯುನ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯ ಅಧ್ಯಕ್ಷ ಭಾಷಣ ಮಾಡುತ್ತಿದ್ದರು. ಡಿಸೆಂಬರ್ 6ರ ಘಟನೆಗಳಿಂದ ಉಂಟಾದ ಉದ್ವಿಗ್ನ ಪರಿಸ್ಥಿತಿಯಿಂದಾಗಿ ಮುಂದೂಡಲಾಗಿತ್ತು. ಆದ್ದರಿಂದ ಸಹಜವಾಗಿಯೇ ಕಾಂ.ಬಾಲಾನಂದನ್‌ರವರ ಅಧ್ಯಕ್ಷ ಭಾಷಣದಲ್ಲಿ ಕೋಮುವಾದಿ ಶಕ್ತಿಗಳು ದುಡಿಯುವ ಜನಗಳ ಹಾಗೂ ದೇಶದ ಐಕ್ಯತೆಗೆ ಒಡ್ಡಿರುವ ತೀವ್ರ ಅಪಾಯ ಮುಖ್ಯ ಅಂಶವಾಗಿತ್ತು. ಈ ಗಲಭೆಗಳ ಹಿನ್ನೆಲೆ, ಪರಿಣಾಮಗಳನ್ನು ಪರಿಶೀಲಿಸುತ್ತಾ ಕಾಂ. ಬಾಲಾನಂನ್ 10 ದಿನಗಳ ಕಾಲ ಭಾರತದ ಕೈಗಾರಿಕಾ ರಾಜಧಾನಿ ಮುಂಬೈಯನ್ನು ತಲ್ಲಣಗೊಳಿಸಿದ ಗಲಭೆಗಳ ಬಗ್ಗೆ ವಿವರವಾಗಿ ಮಾತನಾಡಿದರು. ಇಂದು ಫ್ಯಾಸಿಸ್ಟ್ ಪಡೆಗಳು ದೇಶದಲ್ಲಿ ಸಂವಿಧಾನವನ್ನು, ಪ್ರಜಾಪ್ರಭುತ್ವನ್ನು ಬುಡಮೇಲು ಮಾಡುತ್ತಿವೆ. ಈ ಪ್ರಯತ್ನದಲ್ಲಿ ಇತ್ತೀಚಿಗಿನ ಪ್ರಯತ್ನವೆಂದರೆ ಶಿವಸೇನೆಯ 'ಭಾರತೀಯ ಕಾಮ್‌ಗಾರ್ ಯೂನಿಯನ್' ಮುಸ್ಲಿಂ ಕಾರ್ಮಿಕರನ್ನು ಕೆಲಸಕ್ಕೆ ಬರದಂತೆ ಮಾಡುತ್ತಿರುವುದು, ಮರಾಠಿಯೇತರರನ್ನು 'ಹೊರಗಿನವರು' ಎಂದು ಹೇಳಿ ಹೊರಗಟ್ಟುತ್ತಿರುವುದು. ದುರಂತದ ಸಂಗತಿಯೆಂದರೆ ಕಾರ್ಮಿಕ ಸಂಘಗಳು, ಪ್ರಜಾಪ್ರಭುತ್ವ ಶಕ್ತಿಗಳು ಈ ಫ್ಯಾಸಿಸ್ಟ್ ಧಾಳಿಯನ್ನು ಒಗ್ಗಟ್ಟಿನಿಂದ ಎದುರಿಸುವ ಶಕ್ತಿ ಮೈಗೂಡಿಸಿಕೊಳ್ಳುವಲ್ಲಿ ವಿಫಲರಾದರು ಎಂದು ಕಾಂ. ಬಾಲಾನಂದನ್ ಖೇದ ವ್ಯಕ್ತಪಡಿಸಿದರು.

ಸರಕಾರ ರ್‍ಯಾಲಿಗೆ ನಿಷೇಧ ಹಾಕಿದರೂ ಮಾರ್ಚ್ 30ರ ರ್‍ಯಾಲಿಗೆ ಸರ್ವ ಸಿದ್ಧತೆ ನಡೆಯುತ್ತಿದೆ. ಇದನ್ನು ನವದೆಹಲಿಯ ಅತ್ಯಂತ ದೊಡ್ಡ ರ್‍ಯಾಲಿಯನ್ನಾಗಿಸಬೇಕೆಂದು ಬಾಲಾನಂದನ್ ಕರೆ ನೀಡಿದರು.

ಆರ್ಥಿಕ ರಂಗದಲ್ಲಿ ಸರಕಾರದ ಜನ-ವಿರೋಧಿ, ದೇಶ-ವಿರೋಧಿ ನೀತಿಗಳು ಮುಂದುವರಿಯುತ್ತಲೇ ಇವೆ. ಆದ್ದರಿಂದ ನವಂಬರ್ 25ರ ರ್‍ಯಾಲಿಯ ಘೋಷಣೆ ಹೇಳಿದಂತೆ ಇಡೀ ಕಾರ್ಮಿಕ ವರ್ಗವನ್ನು, ಜನಸಾಮಾನ್ಯರನ್ನು ಈ ಧೋರಣೆಗಳ ವಿರುದ್ಧ ಸಮರದಲ್ಲಿ ಸಂಘಟಿಸುವುದು ಅತೀ ಮುಖ್ಯ ಎಂದು ಕಾಂ. ಬಾಲಾನಂದನ್ ಹೇಳಿದರು. ಅಂತರ್ರಾಷ್ಟ್ರೀಯ ರಂಗದಲ್ಲೂ ಬಂಡವಾಳಶಾಹಿ ಪ್ರಗತಿ ಇರುತ್ತದೆ ಎಂಬುದು ಎಲ್ಲಿಯೂ ಕಂಡುಬಂದಿಲ್ಲ. ಬದಲಾಗಿ ಅದು ಜನಸಾಮಾನ್ಯರ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ ಎಂದೇ ಕಂಡು ಬರುತ್ತದೆ. ಬಿಕ್ಕಟ್ಟಿಲ್ಲದೆ ಬಂಡವಾಳಶಾಹಿ ಇಲ್ಲ ಎಂಬುದು ಈಗ ಮತ್ತೊಮ್ಮೆ ಸಾಬೀತಾಗುತ್ತಿದೆ ಎಂದರು.

ನಮ್ಮ ದೈನಂದಿನ ಕಾರ್ಯಕ್ರಮದಲ್ಲಿ ಆಕ್ರಮಣಕಾರೀ ಕೋಮುವಾದದ ವಿರುದ್ಧ ಹೋರಾಟ, ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಮಾರಿಕೊಳ್ಳುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ಹೋರಾಟ, ಸಮಾಜವಾದಕ್ಕಾಗಿ ಹೋರಾಟ, ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟ ಹಾಗೂ ಕಾರ್ಮಿಕ ವರ್ಗದ ಐಕ್ಯತೆಯನ್ನು ಹಾಗೂ ಕಾರ್ಮಿಕ ವರ್ಗದ ಪ್ರತಿನಿಧಿಯಾಗಿ ಸಿಐಟಿಯುವನ್ನು ಬಲಪಡಿಸುವ ಹೋರಾಟವನ್ನು ಗಂಭೀರವಾಗಿ ತೆಗೆದುಕೊಳ್ಳಿ ಎಂದು ಕಾಂ. ಬಾಲಾನಂದನ್ ಸಲಹೆ ನೀಡಿದರು.

ಸಭೆ ಕೋಮುವಾದದ ವಿರುದ್ಧ ಕಾರ್ಮಿಕ ವರ್ಗ ಹೋರಾಟ ನಡೆಸಬೇಕೆಂದು ಕರೆ ನೀಡಿದ ನಿರ್ಣಯವನ್ನು ಅಂಗೀಕರಿಸಿತು. ಸಿಐಟಿಯು ಉಪಾಧ್ಯಕ್ಷ ಕಾಂ.ಸಮರ್ ಮುಖರ್ಜಿ ಇದನ್ನು ಮಂಡಿಸಿದರು. ಇನ್ನೊಬ್ಬ ಅಖಿಲ ಭಾರತ ಉಪಾಧ್ಯಕ್ಷರಾದ ಕಾಂ. ಸೂರ್ಯನಾರಾಯಣರಾವ್ ಅನುಮೋದಿಸಿ ಮಾತನಾಡಿದರು.

ಬಾಪೂಜಿ ಹಂ ಶರ್ಮಿಂದಾ ಹೈ - ತೇರೆ ಖಾತಿಲ್ ಜಿಂದಾ ಹೈ!

ಸಾಧಾರಣ ಐದು ಸಾವಿರದಷ್ಟು ಜನಸ್ತೋಮ. ಅದರಲ್ಲಿ ನಾಲ್ಕು ಸಾವಿರದಷ್ಟು ಹೈಸ್ಕೂಲ್-ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರು. ಅವರೆಲ್ಲ ತಂತಮ್ಮ ಸ್ಕೂಲ್ ಡ್ರೆಸ್ಸಿನಲ್ಲಿ ಕೋಮು ಸೌಹಾರ್ದತೆಯ ಘೋಷಣೆ ಕೂಗುತ್ತ ನಗರದ 5 ಕಡೆಗಳಿಂದ ಮೆರವಣಿಗೆಯಲ್ಲಿ ಬಂದು ಬಿಜಾಪುರದ ನೆಹರೂ ಸ್ಟೇಡಿಯಂನಲ್ಲಿ ಸೇರಿದ್ದಾರೆ. ರಾಜ್ಯ ಸರಕಾರ ಸಂಘಟಿಸಿದ್ದ "ಕೋಮು ಸೌಹಾರ್ದತಾ ಸಪ್ತಾಹ"ದ ಅಂಗವಾಗಿ ಸಂಜೆ 5 ಗಂಟೆಗೆ ರಾಷ್ಟ್ರದ ಏಕತೆಗಾಗಿ ಕೋಮು ಸಾಮರಸ್ಯ ಕಾಪಾಡಿ ಬಲಪಡಿಸಲು ಬದ್ಧವಾಗಿದ್ದೇನೆಂದು ಪ್ರತಿಜ್ಞೆ ಸ್ವೀಕರಿಸುವ ಕಾರ್ಯಕ್ರಮ. ಸಿಪಿಐ(ಎಂ) ಸಿಪಿಐ ಪಕ್ಷಗಳ ಸಲಹೆಯಂತೆ ವೀರಪ್ಪ ಮೊಯಿಲಿ ಸರಕಾರ ಕರ್ನಾಟಕ ರಾಜ್ಯದಲ್ಲಿ ಜ. 25 ರಿಂದ 30 ರವರೆಗೆ ಕೋಮು ಸೌಹಾರ್ದತಾ ಸಪ್ತಾಹ ಆಚರಿಸುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಅದರ ಅಂಗವಾಗಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗಾಗಿ ವಾಕ್ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಪೈಂಟಿಂಗ್ ಸ್ಪರ್ಧೆಗಳನ್ನು ಏರ್ಪಡಿಸುವುದು ಮಾನವಸರಪಳಿ ನಿರ್ಮಿಸುವುದು, ಸಾಮೂಹಿಕವಾಗಿ ಪ್ರತಿಜ್ಞೆ ಸ್ವೀಕರಿಸುವ ಮೂಲಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದು ಆ ಕಾರ್ಯಕ್ರಮದ ಅಂಗವಾಗಿತ್ತು.

ಲೋಕಸಭೆ ಸದಸ್ಯ ಬಿ.ಕೆ. ಗುಡದಿನ್ನಿಯವರಿಂದ ಸಾಮೂಹಿಕವಾಗಿ ಪ್ರತಿಜ್ಞೆ ಪಠಣದ ನಂತರ ಸ್ವಾತಂತ್ರ್ಯ ಹೋರಾಟಗಾರ ಸಿಪಿಐ(ಎಂ) ಸೆಕ್ರೆಟಾರಿಯೇಟ್ ಸದಸ್ಯ ಎಸ್.ಕೆ. ಉಪಾಧ್ಯಾಯರ ಭಾಷಣ. "ಇಂದು ಮಹಾತ್ಮಗಾಂಧಿಯವರ ಕೊಲೆಯಾದ ದಿನ. ಜನವರಿ 30 ರಂದು ಆರ್.ಎಸ್.ಎಸ್. ಸಂಘಟನೆಯ ನಾಥು ರಾಮ್ ಗೋಡ್ಸೆ ಪ್ರಾರ್ಥನೆ ನಡೆಯುತ್ತಿದ್ದಾಗ ಮಹಾತ್ಮಗಾಂಧಿಯವರನ್ನು ಗುಂಡಿಟ್ಟು ಕೊಂದ ದಿನ. ಈ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸುತ್ತಿದ್ದೇವೆ. "ಬಾಪೂಜಿ ಹಂ ಶರ್ಮಿದೇ ಹೈ ತೇರೆ ಖಾತಿಲ್ ಜಿಂದಾ ಹೈ". ಬಾಪೂಜಿ ನಮಗೆ ನಾಚಿಕೆಯಾಗುತ್ತಿದೆ. ನಿಮ್ಮ ಕೊಲೆಗಾರ ಜೀವಂತ ಇದ್ದಾನೆ. ನಿಮ್ಮನ್ನು ಕೊಲೆ ಮಾಡಿದ ನಾಥು ರಾಮ್ ಗೋಡ್ಸೆಯ ವಂಶಜರೇ ಡಿ. 6 ರಂದು ಬಾಬ್ರಿಮಸೀದಿಯನ್ನು ಕೆಡವಿದ್ದಾರೆ. ಸಂವಿಧಾನವನ್ನು ಅಪಮಾನಗೊಳಿಸಿದ್ದಾರೆ. ಧರ್ಮವನ್ನು ನಾಶಮಾಡಿದ್ದಾರೆ. ಹಿಂದೂ-ಮುಸ್ಲಿಂ ಐಕ್ಯತೆಗೆ ಭಂಗ ತಂದಿದ್ದಾರೆ. "ಬಾಪೂಜಿ ಹಂ ಶರ್ಮಿಂದಾ ಹೈ - ತೇರೇ ಖಾತಿಲ್ ಜಿಂದಾ ಹೈ". ಮುದ್ದು ಮಕ್ಕಳೇ 45 ವರ್ಷಗಳ ಹಿಂದೆ ನಾಥುರಾಂ ಗೋಡ್ಸೆ ಮಹಾತ್ಮಗಾಂಧಿಯವರನ್ನು ಕೊಲೆಮಾಡಿರುವ ವಿಷಯ ನಿಮಗೆ ಅರ್ಥವಾಗಲಿಕ್ಕಿಲ್ಲ. ಆದರೆ ಮುಂದೆ 45 ವರ್ಷಗಳಲ್ಲಿ ಮತೀಯ ಶಕ್ತಿಗಳು ಡಿ. 6 ರಂದು ಅಯೋಧ್ಯೆಯಲ್ಲಿ ರಾಮನ ಹೆಸರಿನಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿ ದೇಶಾದ್ಯಂತ ಕೋಮು ದಳ್ಳುರಿ ಎಬ್ಬಿಸಿ ನಿರಪರಾಧಿಗಳ ಜೀವ ಹಾನಿಗೆ ಕಾರಣೀಭೂತರಾಗಿರುವ ಸಂಗತಿ ನಿಮ್ಮ ಮನಸ್ಸಿನಲ್ಲಿ ನಿಚ್ಚಳವಾಗಿ ಉಳಿಯುತ್ತದೆಂದು ಆಶಿಸುತ್ತೇನೆ. ಎಲ್ಲಾ ಧರ್ಮಗಳ ತವರು ಹಿಂದೂ ಧರ್ಮ ಹಿಂದೂ-ಮುಸ್ಲಿಂ ಧರ್ಮಗಳು ಭಾರತ ದೇಶದ ಎರಡು ಕಣ್ಣುಗಳು ಎಂದು ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದ ವೈಭವನ್ನು ಸಹಿಷ್ಣುತೆಯನ್ನು ಪ್ರದರ್ಶಿಸಿದ್ದಾರೆ. ಚಿಕಾಗೋದಲ್ಲಿ ವಿಶ್ವದ ಸರ್ವಧರ್ಮ ಸಮ್ಮೇಳನದಲ್ಲಿ ಸಹೋದರ ಸಹೋದರಿಯರೇ ಎಂದು ಸಭಿಕರನ್ನುದ್ದೇಶಿದಾಗ, ಇಡೀ ಸಭಾಂಗಣ ಪುಳಕಿತಗೊಂಡಿದನ್ನು ನೆನಪಿಸಿ, ನಾವೀಗ ಮತೀಯ ಶಕ್ತಿಗಳಾದ ಬಿ.ಜೆ.ಪಿ., ಆರ್.ಎಸ್.ಎಸ್., ವಿ.ಹೆಚ್.ಪಿ.,ಗಳನ್ನೂ ದೂರ ಸರಿಸಿ ಎಲ್ಲಾ ಧರ್ಮದವರೂ ಸಹೋದರ ಸಹೋದರಿಯರಂತೆ ಜೀವಿಸಬೇಕೆಂದು ಕರೆ ನೀಡಿದ್ದರು. ಹಾಗೆಯೇ ಮತ್ತೊಮ್ಮೆ "ಬಾಪೂಜಿ ಹಂ ಶರ್ಮಿಂದ್ ಹೈ- ತೇರೆ ಖಾತಿಲ್ ಜಿಂದಾ ಹೈ" ಎಂದು ಪುನರುಚ್ಚರಿಸಿ, 45 ವರ್ಷಗಳಲ್ಲಿ ಗಾಂಧಿಯವರನ್ನು ಕೊಲೆಮಾಡಿದ ಮತೀಯ ಶಕ್ತಿಗಳನ್ನು ನಾಶಮಾಡುವಲ್ಲಿ ನಾವೆಲ್ಲ ಅಸಮರ್ಥರಾಗಿರುವುದರಿಂದ ಈಗಲಾದರೂ ಅಂಥ ಶಕ್ತಿಗಳ ವಿರುದ್ಧ ಹೋರಾಡಲು ಎಲ್ಲರೂ ಪಣ ತೊಡಬೇಕೆಂದು ಒತ್ತಿ ಹೇಳಿದಾಗ ಸಭಿಕರಲ್ಲಿಯ ಬಹಳಷ್ಟು ಮಕ್ಕಳು "ಬಾಪೂಜಿ ಹಮ ಶರ್ಮಿಂದಾ ಹೈ- ತೇರೆ ಖಾತಿಲ್ ಜಿಂದಾ ಹೈ. ಮಗರ ಬಾಪೂಜಿ ಸುನೋ ಹಮಾರಾ ವಾದ ಆಪಕಾ ಖಾತಿಲ್ ನಹಿಂ ಹೇ ಹಾ ಜಿಂದಾ" ಎಂಬ ಉದ್ಗಾರ ಉಪಸ್ಥಿತ ಸಭಿಕರನ್ನೆಲ್ಲಾ ಪುಳಕಿತಗೊಳಿಸಿರುವುದನ್ನು ಮಕ್ಕಳ, ಶಿಕ್ಷಕರ, ಸಾರ್ವಜನಿಕರ ಪ್ರತಿಕ್ರಿಯೆ ಜಾತಿಯ ಮತೀಯ ಶಕ್ತಿಗಳ ವಿರುದ್ಧವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ.

ಕೋಮುದಳ್ಳುರಿಗೆ ತುತ್ತಾದ ಜನರನ್ನು ನೆನಸುತ್ತಾ. "ಹೇ ಮೇರೇ ವತನ್ ಕೇ ಲೋಗೋ, ಜರಾ ಆಂಖ ಮೇ ಭರ್‌ಲೋ ಪಾನೀ ಜೋ ಶಹೀದ್ ಹುಯೇ ಹೈ ಉನಕೀ, ಝುರಾ ಯಾದ ಕರೋ, ಕುರುಬಾನೀ....." ಎಂಬ ದ್ವಿಪದಿಯನ್ನು ಎಸ್.ಕೆ.ಯವರು ಸಭೆಯಲ್ಲಿ ಓದಿ ವಿವರಿಸಿದಾಗ ಮಕ್ಕಳ ಕಣ್ಣಿಂದ ಹನಿ ಉದರಲಾರಂಭಿಸದವು

ಕವಿಯ ಕಾತರ,
"ನಾನೀ ಎಂದು
ಹಿಗ್ಗಿ ನುಗ್ಗಿ ಬರುತ್ತಿದ್ದ
ನನ್ನ ಶಬ್ದಗಳೇ,
ನೀವೂ ಚೂರಿ ಇರಿತಕ್ಕೆ ಸಿಕ್ಕು
ವಿಲಿವಿಲಿ ಒದ್ದಾಡುತ್ತಿದ್ದೀರಾ"

ಕವಿ ಚೆನ್ನವೀರ ಕಣವಿಯವರು ಬಿಜಾಪುರ ಜಿಲ್ಲಾ ಸಾಹಿತ್ಯಸಮ್ಮೇಳನದ ಕವಿಗೋಷ್ಠಿ ಉದ್ಘಾಟನೆ ಪ್ರಾರಂಭಿಸಿದ ಸಾಲುಗಳು.

ಜನವರಿ 25 ರಂದು ಬಿಜಾಪುರ ಜಿಲ್ಲೆಯ ಇಂಡಿಯಲ್ಲಿ ಮಧುರ ಚೆನ್ನ ಮಂಟಪದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಪ್ರಸಕ್ತ ದೇಶದಲ್ಲಿ ಎದ್ದಿರುವ ಕೋಮು ಗಲಭೆ ವಿರಸಗಳಿಗೆ ಸ್ಪಂದಿಸಿದ ಬಹುತೇಕ ಕವಿಗಳ ಕಾವ್ಯದಲ್ಲಿ ಪರಸ್ಪರ ಪ್ರೇಮ, ಮಾನವೀಯತೆ, ಕೋಮು ಸೌಹಾರ್ದತೆ ಸಾರುವ, ಮೌಲ್ಯಗಳನ್ನು ಪ್ರತಿಪಾದಿಸುವ ಕವಿತೆಗಳೇ ಕೇಳಿ ಬಂದಿವೆ.

ಏಕತಾ ಆಂದೋಳನ ಸಮಿತಿಯ ಕರೆಯ ಮೇರೆಗೆ ನವಕಾಲಿಯಲ್ಲಿ ನಡೆದ ಕೋಮು ಗಲಭೆ ವಿರುದ್ಧ 13-1-1948 ರಂದು ಮಹಾತ್ಮಾಗಾಂಧಿಯವರು ಉಪವಾಸ ಸತ್ಯಾಗ್ರಹ ಕೈಗೊಂಡ ದಿವಸ. ಬಿ.ಜೆ.ಪಿ., ಆರ್.ಎಸ್.ಎಸ್., ವಿ.ಹೆಚ್.ಪಿ., ಮೊದಲಾದ ಮತೀಯ ಶಕ್ತಿಗಳ ವಿರುದ್ಧ ಧರಣಿ ಮತ್ತು ರಾಷ್ಟ್ರಾಧ್ಯಕ್ಷರಿಗೆ ಅರ್ಪಿಸುವ ಮನವಿಯಲ್ಲಿ ಸಹಿ ಸಂಗ್ರಹ ಉದ್ಘಾಟನೆಯನ್ನು ನೇರವೇರಿಸುತ್ತಾ ಸ್ವಾತಂತ್ರ್ಯ ಯೋಧರಾದ ಶರಣಯ್ಯ ವಸ್ತ್ರದ ಸ್ವಾಮಿಯವರು ಹಿಂದೂ ಧರ್ಮದ ರಾಮಮಂದಿರದ ಹೆಸರಿನಲ್ಲಿ ಬಿ.ಜೆ.ಪಿ.ಯವರು ನಡೆಸಿರುವ ಅಪಪ್ರಚಾರದ ವಿರುದ್ಧ, ಮತೀಯ ಗಲಭೆಗಳನ್ನು, ದ್ವೇಷವನ್ನು ಹುಟ್ಟುಹಾಕಿ ಅಶಾಂತಿ ಉಂಟುಮಾಡುವುದರ ವಿರುದ್ಧ ಹೋರಾಡ ಬೇಕೆಂದೂ, ಎಲ್ಲಾ ಧರ್ಮಗಳ ಮಾನವೀಯತೆಯ ರಕ್ಷಣೆ ಮಾಡುತ್ತಿವೆಂದೂ ಹೇಳಿದರು.

ಜನವರಿ 26 ರಂದು ಗಣರಾಜ್ಯೋತ್ಸವದ ದಿವಸ ಮಾನವ ಸರಪಳಿ ನಿರ್ಮಿಸಿದಾಗ "ನಾವು ಸ್ವಾಮಿಗಳು ಹಿಂದುತ್ವದ ಪ್ರತಿಪಾದಕರಲ್ಲ. ಬಸವಣ್ಣನವರು ಧರ್ಮ ಸಹಿಷ್ಣುತೆಯನ್ನು ಪ್ರತಿಪಾದಿಸಿದವರು. ಸಮತಾವಾದಿ ವ್ಯವಸ್ಥೆಯನ್ನು ನಾವು ಇಚ್ಚಿಸುತ್ತೇವೆ. ಧರ್ಮ-ದೇವರು, ಜಾತಿಗಳ ಹೆಸರಲ್ಲಿಯ ಶೋಷಣೆಯನ್ನು ವಿರೋಧಿಸುತ್ತೇವೆಂದು ಸಾರಿದವರು ಕಡಕಚಿಂಚೋಳಿಯ ನೀಲಗುಂದ ಸ್ವಾಮಿಗಳು."

- ಎಸ್.ಕೆ.ಉಪಾಧ್ಯಾಯ

ಎಂ.ವಿ. ಕಾಮತರ 'ಉಜ್ವಲತೆ' ದೇಶವನ್ನು ದಹಿಸುತ್ತದೆ


ಓದುಗರ ಪತ್ರ

ಪ್ರಖ್ಯಾತ ಪತ್ರಕರ್ತ ಎಂ.ವಿ. ಕಾಮತ್‌ರವರು ಇತೀಚೆಗೆ ಉಡುಪಿಯಲ್ಲಿ ಮಾಡಿದ ಒಂದು ಭಾಷಣದಲ್ಲಿ ಡಿಸೆಂಬರ್ 6 ಮುಸ್ಲಿಂರಿಗೆ ಒಂದು ಉಜ್ವಲ ದಿನವೆಂದು ವರ್ಣಿಸಿದ್ದಾರೆ. ಕಾಮತ್‌ರ ವರ್ಣನೆ ಎಷ್ಟು ಸರಿಯಾಗಿದೆ ಎಂದು ಡಿಸೆಂಬರ್ 6 ರ ನಂತರದ ಘಟನೆಗಳು ಸ್ಪಷ್ಟಪಡಿಸುತ್ತವೆ.

ವಾಜಪೇಯಿಯವರ "ಹೇಯ ಘಟನೆ"ಯ, ಜೋಶಿಯವರ "ದುರದೃಷ್ಟಕರ"ದ, ಅಡ್ವಾಣಿಯವರ "ದೈವಚಿತ್ತ"ದ, ಸಿಂಘಾಲ್‌ರವರ "ಸ್ವಾಭಿಮಾನ"ದ ಹಾಗೂ ಬಾಳಸಾಹೇಬ್ ಠಾಕ್ರೆಯವರ "ಅತ್ಯಂತ ಸಂತೋಷ" ದಿನವಾದ ಡಿಸೆಂಬರ್ 6 ಕಾಮತ್‌ರು ಕಂಡಂತೆ ಮುಸ್ಲಿಮರಿಗೂ ಉಜ್ವಲ ದಿನವಾಗಿರಬಹುದು. ಆದರೆ ಆ ಉಜ್ವಲ ದಿನದ ಪ್ರಕಾಶ ಎಷ್ಟೆಂದರೆ ಡಿಸೆಂಬರ್ 5 ಮತ್ತು 6 ರಂದು ಅಯೋಧ್ಯೆಯ ಆಸುಪಾಸಿನಲ್ಲಿ ತಮ್ಮ ತಲೆಯ ಮೇಲಿನ ಸೂರು ಹೊತ್ತಿ ಉರಿದು ನಿರ್ಗತಿಕರಾಗಿ ಓಡಿ ಹೋದ ನಂತರ ದೇಶದಾದ್ಯಂತ ದಹಿಸಲ್ಪಟ್ಟ, ಅತ್ಯಾಚಾರ, ಅತಿರೇಕಗಳಿಗೆ ಒಳಗಾಗಿ ಒಂದು ಪಂಗಡದ ಜನ ಅನುಭವಪಟ್ಟಿದ್ದಾರೆ. ಈವರೆಗೆ ಯಾವುದೇ ಭೇದ ಭಾವವಿಲ್ಲದೆ ಗ್ರಾಮ ಗ್ರಾಮಗಳಲ್ಲಿ ಸಹೋದರರಂತೆ ಬದುಕುತ್ತಿದ್ದ ಜನ ಈಗ ಧರ್ಮದ ಹೆಸರಿನಲ್ಲಿ ಗುರುತಿಸಲ್ಪಟ್ಟು ಕತ್ತಿ ಹಿಡಿದು ಕಾದಾಡುವುದು ಸಾಮಾನ್ಯವಾಗಿರುವಾಗ ಇದರಿಂದಾಗಿ ವ್ಯವಹಾರಗಳು ಸ್ತಬ್ಧವಾಗಿ, ಆರ್ಥಿಕ ವ್ಯವಸ್ಥೆಯೇ ಏರುಪೇರಾಗುವಾಗ ಪ್ರತಿ ಪಟ್ಟಣಗಳೂ ರಣರಂಗವಾಗುತ್ತಿರುವಾಗ, ಲೆಬನಾನ್, ಸೋಮಾಲಿಯಾ, ಕ್ರೋಷಿಯಾದಲ್ಲಾಗುವ ಮಾರಾಮಾರಿಗಳನ್ನು ಟಿ.ವಿ.ಯಲ್ಲಿ ನೋಡಿ ಮುಸಿ ಮುಸಿ ನಗುತ್ತಿದ್ದ ಭಾರತೀಯರಿಗೆ ಅವುಗಳನ್ನು ತಮ್ಮ ಕಣ್ಣೆದುರಿಗೇ ಪ್ರತ್ಯಕ್ಷ ನೋಡಬೇಕಾದ ಸಂದರ್ಭ ಬಂದಾಗ "ಉಜ್ವಲ ದಿನ"ದ ಮಹಾತ್ಮೆ ಅರಿವಾಗುತ್ತಿದೆ.

ಉರಿದು ಕಪ್ಪಾಗಿ ಒಳಗಾಗಿ ಕೂಲಿ ಕೆಲಸ ಮಾಡಿ ಬದುಕುತ್ತಿರುವ ಬಡ ಭಾಗ್ಯಮ್ಮ ಕೂಲಿ ಸಿಗದೆ ಗಂಜಿಗಾಗಿ ತನ್ನನ್ನೇ ಕಿತ್ತು ತಿನ್ನುವಂತೆ ರೋದಿಸುತ್ತಿರುವ ಎಳೆಯ ಕಂದಮ್ಮಗಳ ಮುಖ ನೋಡಲಾರದಾಗದೆ, 'ದೇವರು ನನ್ನನ್ನಾಯಾಕೆ ಕರೆದುಕೊಂಡಿಲ್ಲ' ಎಂದು ಅಳುವಾಗ, ಖರ್ಚು ಮಾಡಲು ಹಣವಿದ್ದರೂ ಕೊಂಡು ಕೊಳ್ಳಲು ಮಾರ್ಕೆಟ್ ಸ್ತಬ್ಧವಾಗಿರುವಾಗ ಅಡುಗೆ ಮಾಡಲಾರದೆ ಪರದಾಡುತ್ತಿರುವ ಮಧ್ಯಮ ವರ್ಗದ ನೌಕರ ಇವರೆಲ್ಲರಿಗೂ ಡಿಸೆಂಬರ್ 6 ಪ್ರಜ್ವಲವೇ ; ಕಾಮತ್‌ರ ನೆಲೆವೀಡು ಮುಂಬಯಿಯಲ್ಲಿ ಅವರ ಮೂಗಿನ ನೇರಕ್ಕೆ ಗಲ್ಲಿಗಲ್ಲಿಯೂ ಉರಿಯುತ್ತಿರುವಾಗ (ಬಹುಶಃ ಅವರು ಆಗ ಉಡುಪಿ ಹಾಗೂ ಇತರ ಊರುಗಳಲ್ಲಿ ಬುದ್ಧಿವಾದ ಹೇಳುತ್ತಾ ಭಾಷಣ ಮಾಡುತ್ತಿರಬೇಕು.) ಉಜ್ವಲತೆಯ ಬಿಸಿ ಸ್ವಲ್ಪ ಮಟ್ಟಿಗೆ ಮುಟ್ಟಿರಬಹುದು. (ಅತ್ತ ಸಾಕ್ಷಿಗೆ ಸರಿಯಾಗಿ ಚಿಂತಿಸಿದರೆ).

— ಗಣೇಶ್ ಪಿ. (ಕೃಪೆ : ಮುಂಗಾರು)



ಬಿಜೆಪಿ ಅಧ್ಯಕ್ಷ ಜೋಷಿಯವರು ಬಾಯಿ ಮುಚ್ಚಿಕೊಂಡರೇಕೆ?



ವರ್ಷ 1992. ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಬಿಜೆಪಿ ಅಧ್ಯಕ್ಷ ಜೋಷಿಯವರು ತಮ್ಮ ಎಂದಿನ ಶೈಲಿಯಲ್ಲಿ ಶುರು ಮಾಡಿದರು. ಕಾಶ್ಮೀರದಲ್ಲಿ ಇತ್ತೀಚೆಗೆ ಕೂಡಾ 42 ದೇವಸ್ಥಾನಗಳನ್ನು ನಾಶ ಮಾಡಿದಾಗ ನೀವು ಎಲ್ಲಿದ್ದಿರಿ.... ಎಂದು ಕೇಳಲು ಶುರು ಮಾಡಿದಾಗ ಒಬ್ಬ ವ್ಯಕ್ತಿ ತಕ್ಷಣ ಎದ್ದು ನಿಂತು ಅವರ ಮಾತನ್ನು ಅಲ್ಲಿಗೇ ತಡೆಯುತ್ತಾ ಕೇಳಿದರು. 'ಯಾವ ದೇವಸ್ಥಾನ? ನೀವು ಅಲ್ಲಿಗೆ ಹೋಗಿದ್ದೀರಾ? ಒಂದು ದೇವಸ್ಥಾನದ ಹೆಸರನ್ನಾದರೂ ಹೇಳಬಲ್ಲಿರಾ?' ಜೋಷಿಯವರ ಬಳಿ ಉತ್ತರವಿರಲಿಲ್ಲ. ಆದರೆ ಡಿಸೆಂಬರ್ 6ರ ನಂತರ ಮತ್ತೆ ಅದೇ ರಾಗ. ಅಡ್ವಾಣಿಯವರು 'ಖೋಟಾ ಜಾತ್ಯಾತೀತವಾದಿ'ಗಳು ಬಿಜೆಪಿಗಳ ಈ ಪ್ರಶ್ನೆಗೆ ಉತ್ತರ ಕೊಡುತ್ತಿಲ್ಲ ಎಂದರು. ಈ ಸುಳ್ಳು ಮುಂದುವರಿಯುತ್ತಲೇ ಇರುವುದನ್ನು ಕಂಡ ಹಿಂದೆ 1991ರಲ್ಲಿ ಎರಡು ಬಾರಿ ಲೇಖನ ಬರೆದ ಖ್ಯಾತ ಪತ್ರಕರ್ತ ಬಿ.ಜಿ. ವರ್ಗೀಸ್ ಇದೇ ಫೆಬ್ರವರಿ 7ರಂದು ಇನ್ನೊಂದು ಲೇಖನ ಬರೆದಿದ್ದಾರೆ. 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾದ ಲೇಖನದ ಕೆಲವು ಅಂಶಗಳು ನಮ್ಮ ಓದುಗರಿಗಾಗಿ ಇಲ್ಲಿದೆ.

"ಸಂಘ ಪರಿವಾರ"ದ ಪ್ರಚಾರದ ಪ್ರಕಾರ "ಸಂಪೂರ್ಣ ಸುಟ್ಟುಹೋಗಿರುವ" ದಶನಾಮಿ ಅಖಾಡದ ಇತ್ತೀಚಿನ ಫೋಟೊ. ಇಂಡಿಯಾ ಟುಡೆ ಪತ್ರಿಕೆಯ 28-2-93ರ ಸಂಚಿಕೆ ಇಂತಹ ಇನ್ನೂ 4 ಪ್ರಸಿದ್ಧ ದೇವಸ್ಥಾನಗಳು ಈವಾಗಲೂ ಸುಸ್ಥಿತಿಯಲ್ಲಿರುವ ಚಿತ್ರಗಳನ್ನು ಪ್ರಕಟಿಸಿದೆ

ಕಾಶ್ಮೀರದಲ್ಲಿ ದೇವಸ್ಥಾನಗಳ 'ಧ್ವಂಸ'ದ ಕಾವಿಪಡೆಗಳ ಪ್ರಚಾರ ಶುದ್ಧ ಸುಳ್ಳು

ಕಾಶ್ಮೀರದಲ್ಲಿ ಹಿಂದೂ ದೇವಸ್ಥಾನಗಳನ್ನು ಹಿಂದೆಯೂ ಧ್ವಂಸ ಮಾಡಲಾಗಿತ್ತಷ್ಟೇ ಅಲ್ಲ, ಈಗಲೂ ಕೂಡಾ ಧ್ವಂಸ ಕಾರ್ಯಗಳು ನಡೆಯುತ್ತಲೇ ಇವೆ ಎಂಬುದು ಬಿಜೆಪಿ-ವಿಹೆಚ್‌ಪಿ--ಆರ್‌ಎಸ್‌ಎಸ್‌ಗೆ ದೇಶದಲ್ಲಿ ಒಂದು ನಿರಂತರ ಕೋಮು ಧ್ರುವೀಕರಣ ಸಾಧಿಸುವ ದ್ವೇಷಮಯ ಪ್ರಚಾರದ ಕೇಂದ್ರ ಅಂಶವಾಗಿ ಮೂಡಿಬಂದಿದೆ. ಇದೊಂದು ಅಪಾಯಕಾರಿ ವಿಷ. ದೇವಸ್ಥಾನ ಒಡೆದ ಈ ಆಪಾದನೆಗಳಲ್ಲಿ ಕೆಲವದರ ಬಗ್ಗೆ ತನಿಖೆ ನಡೆಸಿ "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯಲ್ಲಿ ಮೇ 8, 1991 ಹಾಗೂ ಜೂನ್ 10, 1991ರಂದು ಎರಡು ಲೇಖನಗಳನ್ನು ಬರೆದಿದ್ದೆ ನಾನು. ಈಗ 18 ತಿಂಗಳ ನಂತರ, ಅದರಲ್ಲೂ ಅಯೋಧ್ಯಾ ಘಟನಾಕ್ರಮದ ನಂತರ ಅದನ್ನು ಖಂಡಿಸಲಾಗುತ್ತಿರುವುದನ್ನು ಕಂಡು ನನಗೆ ಆಶ್ಚರ್ಯವಾಗಿದೆ.

ಈ ವಿಷಯದಲ್ಲಿ ನನ್ನ ಆಸಕ್ತಿ 1990ರ ವೇಳೆಯದ್ದು. ಒಂದೆಡೆ ವಿಹೆಚ್‌ಪಿ-ಬಿಜೆಪಿ-ಆರ್‌ಎಸ್‌ಎಸ್ ಕೂಟ, ಇನ್ನೊಂದೆಡೆ ಬಾಬ್ರಿ ಮಸೀದಿ ಗುಂಪು ಇವುಗಳ ನಡುವೆ ಮಧ್ಯಸ್ಥಿಕೆ ನಡೆಸುವ ಎರಡು ಪ್ರತ್ಯೇಕ ಗುಂಪುಗಳೊಂದಿಗೆ ನನ್ನ ಒಡನಾಟದ ಸಮಯದ್ದು. ಈ ಪ್ರಯತ್ನಗಳ ಸಂಬಂಧವಾಗಿ ನಾನು ಹಲವು ವಿಹೆಚ್‌ಪಿ, ಬಿಜೆಪಿ ಆರ್‌ಎಸ್‌ಎಸ್ ವಕ್ತಾರರೊಂದಿಗೆ ಬೇರೆ ಬೇರೆ ಸಮಯದಲ್ಲಿ ಮಾತನಾಡಿದೆ. ಅವರೆಲ್ಲರ ಮಾತಿನಲ್ಲೂ ಹಿಂದೂ ದೇವಸ್ಥಾನಗಳ ಧ್ವಂಸ ಈಗಲೂ ನಡೆಯುತ್ತಲೇ ಇದೆ ಎಂಬ ಸೂಚನೆ ಮತ್ತೆ-ಮತ್ತೆ ಕಂಡು ಬಂತು.

1986 ರಲ್ಲಿ ಕಾಶ್ಮೀರದಲ್ಲಿದ್ದ ಕೋಮುಗಲಭೆ ಪೀಡಿತ ವಾತಾವರಣದಲ್ಲಿ ಕೆಲವು ದೇವಸ್ಥಾನಗಳಿಗೆ ನಷ್ಟವಾದದ್ದು ನಿಜ. ಆದರೆ ರಾಜ್ಯ ಸರಕಾರ ಇದನ್ನು ಸ್ಥಳೀಯರ ಸರಕಾರದಿಂದ ಸರಿಪಡಿಸಿದ್ದರಿಂದ, ಅದು ಅಲ್ಲಿಗೆ ಮುಗಿದ ಅಧ್ಯಾಯ. ಕೋಮು ದಂಗೆಗಳು ನಡೆದಾಗ ಎಲ್ಲಾ ಕೋಮಿನ ಗೂಂಡಾ ವ್ಯಕ್ತಿಗಳು ವಿಕೃತ ಕೃತ್ಯಗಳನ್ನು ನಡೆಸುವುದನ್ನು ನಾವು ಕಂಡಿದ್ದೇವೆ. ಅವನ್ನು ಮತ್ತೆ-ಮತ್ತೆ ಎತ್ತುವುದರಲ್ಲಿ ಅರ್ಥವಿಲ್ಲ. ಆದರೆ 1986 ನಂತರವೂ ಇಂತಹ ಧ್ವಂಸ ಕಾರ್ಯ ನಡೆದಿದೆ ಎನ್ನುವುದು ಒಂದು ಗಂಭೀರ ಆಪಾದನೆ. ಕೋಮು ಭಾವೋದ್ರೇಕ ಎಬ್ಬಿಸಬಹುದಾದ ಆಪಾದನೆ ನನ್ನ ತನಿಖೆಗಳ ಪ್ರಕಾರ ಇವೆಲ್ಲಾ ಸುಳ್ಳು ಸುದ್ದಿಗಳಾಗಿದ್ದವು. ಹೀಗೆಂದು ನಾನು ಹಲವು ಸಭೆಗಳಲ್ಲಿ ಹೇಳುತ್ತಾ ಇಂತಹ ಧ್ವಂಸ ಕಾರ್ಯ ನಡೆದಿದ್ದರೆ ಅವುಗಳ ಪಟ್ಟಿಕೊಟ್ಟರೆ ವಸ್ತುನಿಷ್ಠ ತನಿಖೆ ಮಾಡಬಹುದು ಎಂದು ಹೇಳಿದ್ದೆ.

ಸತತ ಪ್ರಯತ್ನಗಳ ನಂತರ ನನಗೆ ಇಂತಹ ಎರಡು ಪಟ್ಟಿಗಳು ದೊರೆತವು. ಒಂದು ಒಬ್ಬ ಹಿರಿಯ ಆರ್.ಎಸ್.ಎಸ್. ಮುಖಂಡ ನೀಡಿದ್ದ ಪಟ್ಟಿ. ಇದರಲ್ಲಿ 62 ದೇವಸ್ಥಾನಗಳ ಹೆಸರು ಇದ್ದು ಅವುಗಳ ಹೆಸರುಗಳ ಎದುರು "ಸಂಪೂರ್ಣ ಭಸ್ಮ ಮಾಡಿದರು" "ಧ್ವಂಸ ಮಾಡಿದರು", "ಮೂರ್ತಿಯನ್ನು ಅಪವಿತ್ರ ಗೊಳಿಸಿದರು.", "ಲೂಟಿ ಮಾಡಿದರು" ಇತ್ಯಾದಿ ಟಿಪ್ಪಣಿಗಳಿದ್ದ ಒಂದು ದೀರ್ಘ ಪಟ್ಟಿ.

ಇನ್ನೊಂದು ಜಮ್ಮುವಿನ 'ಸನಾತನ ಧರ್ಮ' ಎಂಬ ಸಂಘಟನೆಯಿಂದ ದೊರೆಯಿತು. ಅದರಲ್ಲಿ ಆರು ದೇವಸ್ಥಾನಗಳ ಹೆಸರಿತ್ತು. ಬಿ.ಜೆ.ಪಿಯ ಜಮ್ಮು ಘಟಕದ ಅಧ್ಯಕ್ಷ ಚಮನ್‌ಲಾಲ್ ಗುಪ್ತಾ 200 ಕ್ಕೂ ಹೆಚ್ಚು ದೇವಸ್ಥಾನಗಳು ಧ್ವಂಸವಾಗಿವೆ ಎಂದರು. ನಾನು ಈ ಬಗ್ಗೆ ವಿವರ ನೀಡುವ ಪಟ್ಟಿ ಕೊಡಿ ಎಂದೆ. ಇದುವರೆಗೂ ಅವರಿಂದ ಇಂತಹ ಪಟ್ಟಿ ದೊರೆತಿಲ್ಲ.

ಇರಲಿ, ನನಗೆ ದೊರೆತ ಎರಡು ಪಟ್ಟಿಗಳನ್ನು ಹಿಡಿದುಕೊಂಡು ನನಗೆ ಸಾಧ್ಯವಾದ ರೀತಿಯಲ್ಲೆಲ್ಲಾ ತನಿಖೆ ನಡೆಸಿದೆ. ಸರಕಾರೀ ಮೂಲಗಳು, ದೇವಸ್ಥಾನಗಳ ಪೂಜಾರಿಗಳ ಸಂದರ್ಶನ ಇತ್ಯಾದಿ ಹಲವು ವಿಧಾನಗಳಿಂದ. ಹಬ್ಬಕಡಲ್‌ನ ಶೀತಲನಾಥ ಮಂದಿರ ಮಾತ್ರವೇ ನವಂಬರ್ 13, 1990 ರಂದು ಭಾಗಶಃ ನಷ್ಟವಾಗಿತ್ತು. ಅದು ಕೂಡಾ "ಆಕಸ್ಮಿಕ ಬೆಂಕಿ ಪ್ರಕರಣ" ದಿಂದ ಎಂದು ಹೇಳಲಾಯಿತು.

ಇದರ ಆಧಾರದ ಮೇಲೆ ನಾನು ಮೇ 8, 1991ರಲ್ಲಿ "ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ಮೊದಲ ಲೇಖನ ಬರೆದೆ. ಇದನ್ನೋದಿದ ಕೆಲವು ಓದುಗರು ನಾನು ಖೋಟಾ ಜಾತ್ಯಾತೀತವಾದಿ, ದೇವಾಲಯಗಳನ್ನು ಸ್ವತಃ ನೋಡದೆ ಬರೆದ ಆರಾಮ ಕುರ್ಚಿ ಲೇಖಕ ಎಂದು ದೂಷಿಸಿದರು. ಶ್ರೀನಗರದಲ್ಲಿ ಸ್ವತಃ ನಾನೇ ಇನ್ನೊಬ್ಬ ಪತ್ರಕರ್ತ ಮಿತ್ರ ಹಾಗೂ ಅಧಿಕೃತ ಗೈಡ್‌ನೊಂದಿಗೆ ಕೆಲವು ದೇವಾಲಯಗಳಿಗೆ ಭೇಟಿ ನೀಡಿದೆ. ಪೂಜಾರಿಗಳನ್ನು ಭಕ್ತರನ್ನು ವಿಚಾರಿಸಿದೆವು. ಅವರಿಂದ ಏನೊಂದೂ ದೂರುಗಳು ಸಿಗಲಿಲ್ಲ. ಆರ್.ಎಸ್.ಎಸ್.ನ ಪಟ್ಟಿಯಲ್ಲಿ "ಧ್ವಂಸ ಮಾಡಲಾಗಿದೆ" ಎಂದು ವರ್ಣಿಸಲ್ಪಟ್ಟ ಪ್ರಸಿದ್ಧ ಗಣಪತ್ಯಾರ್ ದೇವಸ್ಥಾನ ಹಾಗೂ "ದೇವಸ್ಥಾನ ಭಸ್ಮ ಮಾಡಿದರು, ಧರ್ಮಶಾಲೆಯನ್ನು ಸುಟ್ಟರು" ಎಂದು ನಮೂದಿಸಿದ್ದ ದಶ್ನಮಿ ಅಖಾಡಾ ಈ ಎರಡು ಕಾಶ್ಮೀರದ ಪ್ರಸಿದ್ಧ ಪೂಜಾಸ್ಥಳಗಳನ್ನು ನೋಡಿದೆವು (ದಶ್ನಮಿ ಅಖಾಡಾ ಎಂದರೆ ಪ್ರತಿವರ್ಷ ನಡೆಯುವ ಅಮರನಾಥ ಯಾತ್ರೆಯ ಸಮಯದಲ್ಲಿ ಒಯ್ಯುವ ಪ್ರಸಿದ್ಧ 'ಛಡಿ' ಇರುವ ಸ್ಥಳ) ಎರಡಕ್ಕೂ ಏನೂ ತೊಂದರೆಯಾಗಿರಲಿಲ್ಲ. ಎರಡೂ ಕಡೆ ಎಂದಿನಂತೆ ಚಟುವಟಿಕೆ ನಡೆಯುತ್ತಿತ್ತು. ಎರಡೂ ಕಡೆ ದೇವಸ್ಥಾನಗಳ ಆವರಣದೊಳಗೆ ಸಿ.ಆರ್.ಪಿ.ಎಫ್ (ಕೇಂದ್ರ ರಿಝರ್ವ್ ಪೋಲೀಸ್ ಪಡೆ) ತುಕಡಿಗಳ ಕ್ಯಾಂಪ್ ಇತ್ತು. 'ಇತರ ಪೋಲೀಸ್ ಕ್ಯಾಂಪುಗಳಂತೆ ಉಗ್ರಗಾಮಿಗಳ ಬಂದೂಕುಗಳು ಇವಕ್ಕೂ ಗುರಿಯಿಟ್ಟಿದ್ದವು. ಇದರಿಂದ ದೇವಸ್ಥಾನಗಳ ಗೋಡೆಗಳ ಮೇಲೆ ಅಲ್ಲಲ್ಲಿ ಬುಲೆಟ್ ಗುರುತುಗಳು ವಿನಹ ಬೇರೇನೂ ಇರಲಿಲ್ಲ, ಈ ಬುಲೆಟ್‌ಗಳು ಪೋಲೀಸ್ ಪಡೆಗಳಿಗೆ ಗುರಿಯಿಟ್ಟವುಗಳೇ ಹೊರತು ದೇವಸ್ಥಾನಕ್ಕಲ್ಲ ಎಂದು ಸಿಆರ್‌ಪಿಎಫ್ ಕಮಾಂಡರ್ ಹಾಗೂ ಸ್ಥಳೀಯ ಪೂಜಾರಿಗಳು ಕೂಡಾ ಹೇಳಿದರು.

ಶ್ರೀನಗರದಿಂದ 23 ಕಿ.ಮೀ. ದೂರದಲ್ಲಿರುವ ಮಾತಾ ಖೀರ್ ಭವಾನಿ ಎಂಬ ಪ್ರಸಿದ್ಧ, ಪ್ರಾಚೀನ ದೇವಾಲಯದಲ್ಲೂ ನಮಗೆ ಇದೇ ಉತ್ತರ ದೊರೆಯಿತು. ಇತರ ಭದ್ರತಾ ಪಡೆಗಳ ಕಾವಲು ಇಲ್ಲದ ದೇವಸ್ಥಾನಗಳನ್ನು ಯಾರೂ ಮುಟ್ಟಿಲ್ಲ ಎಂದು ಆ ದೇವಸ್ಥಾನಗಳ ಪೂಜಾರಿಗಳೇ ಹೇಳಿದರು.

ನಾವು ಹಲವಾರು ಸರಕಾರಿ ಅಧಿಕಾರಿಗಳು, ಎಲ್ಲಾ ಮಟ್ಟಗಳಲ್ಲಿನ ಭದ್ರತಾ ಪಡೆಗಳು, ಪತ್ರಕರ್ತರು, ರಾಜಕೀಯ ಕಾರ್ಯಕರ್ತರು ಮತ್ತಿತರೊಡನೆ ವ್ಯಾಪಕ ತನಿಖೆ ನಡೆಸಿದೆವು.

ಅನಂತನಾಗ್‌ನಲ್ಲಿ 1986ರಲ್ಲಿ ನಡೆದ ಘಟನೆಯ ನಂತರ ಕಾಶ್ಮೀರದಲ್ಲಿ ದೇವಸ್ಥಾನಗಳ ಮೇಲೆ ಉದ್ದೇಶಪೂರ್ವಕವಾದ ಧಾಳಿ ನಡೆದ ಬಗ್ಗೆ ಯಾವುದೇ ವರದಿ ಸಿಗಲಿಲ್ಲ. ಈ ವೈಯಕ್ತಿಕ ಭೇಟಿಯ ಆಧಾರದ ಮೇಲೆ ನಾನು ಜೂನ್ 10, 1991ರ ಎರಡನೇ ಲೇಖನ ಬರೆದೆ.

ಪ್ರಶ್ನಿಸಿದರೇ ಹೊರತು ಉತ್ತರಕ್ಕಾಗಿ ಕಾಯಲಿಲ್ಲ

ನವಂಬರ್ 13, 1992ರ ಆರಂಭದಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿ ...

ರಾಷ್ಟ್ರವಾದಿಯೆನಿಸಬೇಕೇ? ಕಾವಿ ಜನಗಳ ಸರ್ಟಿಫಿಕೇಟ್ ಬೇಕು ಜೋಕೆ!

ಕಲ್ಯಾಣ್‌ಸಿಂಗ್ ಸರಕಾರ ಧ್ವಂಸದ ನಂತರ ರಾಜೀನಾಮೆ ನೀಡಿತು. ಇಂದಿರಾಗಾಂಧಿ ಕೊಲೆಯ ನಂತರ 3000 ಸಿಖ್ಖರನ್ನು ಜೀವಂತ ಸುಟ್ಟಾಗ ಗೃಹಮಂತ್ರಿಯಾಗಿದ್ದ ನರಸಿಂಹರಾಯರು ರಾಜೀನಾಮೆ ನೀಡಿದರೇ, ಹೇಳಿ - ಇದು ಅಡ್ವಾಣಿಯವರ ಸವಾಲು(ಇಂಡಿಪೆಂಡೆಂಟ್ ದೈನಿಕದ ಸಂದರ್ಶನದಲ್ಲಿ)

* * * * * * * * * *

ನಿಜ. ನರಸಿಂಹರಾವ್ ರಾಜೀನಾಮೆ ನೀಡಬೇಕಾಗಿತ್ತು.

ಆದರೆ ಕಲ್ಯಾಣ್‌ಸಿಂಗ್ ರಾಜೀನಾಮೆ ನೀಡಿದ್ದೇಕೆ ಅಯ್ಯೋ ಪಾಪ, ಬಾಬ್ರಿ ಮಸೀದಿ ಧ್ವಂಸವಾಯಿತೆಂದೇ? ಹಾಗಿದ್ದರೆ ಮೊನ್ನೆ--ಮೊನ್ನೆ ಕಲ್ಕತ್ತೆಯಲ್ಲಿ ಅದೇ ಕಲ್ಯಾಣ್‌ಸಿಂಗ್ ಕಾಂಟ್ರಾಕ್ಟರುಗಳು ತಿಂಗಳುಗಳಲ್ಲಿ ಮಾಡದ್ದನ್ನು ಕರಸೇವಕರು ಕೆಲವೇ ಗಂಟೆಗಳಲ್ಲಿ ಮಾಡಿದರು ಎಂದು ಶಬ್ಬಾಸ್‌ಗಿರಿ ಕೊಟ್ಟರಂತಲ್ಲ.

ಅಷ್ಟೇ ಅಲ್ಲ ಫೆಬ್ರವರಿ 25ರಂದು ಧ್ವಂಸ ಕಾರ್ಯದಲ್ಲಿಪಾಲುಗೊಂಡ ಯುವಕರು ದೆಹಲಿಯ ಬೋಟ್ ಕ್ಲಬ್ ತಲುಪುವಂತೆ ಮಾಡುವ ಯೋಜನೆ ಸಿದ್ಧವಾಗಿದೆಯಂತೆ(ಟೈಮ್ಸ್ ಆಫ್ ಇಂಡಿಯಾ, ಫೆ. 17)

ಧ್ವಂಸ ಮಾಡಿದ್ದಕ್ಕೆ ವೀರ ಪಟ್ಟವೇ? 1984ರಲ್ಲಿ 3000 ಸಿಖ್ಖರ ಆಹುತಿಯಾದಾಗಿನ ಪ್ರಧಾನಮಂತ್ರಿ ರಾಜೀವ್‌ಗಾಂಧಿ ದೊಡ್ಡ ಮರ ಬಿದ್ದಾಗ ಭೂಕಂಪನವಾಗುವುದು ಸಹಜ ಎಂದಿದ್ದರು. ನೇರವಾಗಿ ಶಾಭಾಸ್‌ಗಿರಿ ಕೊಟ್ಟಿರಲಿಲ್ಲ. ಈ ದೃಷ್ಟಿಯಲ್ಲೂ ಬಿಜೆಪಿಯದ್ದ ಒಂದು ಕೈ ಮೇಲು!

* * * * * * * * * *

"ಮುಸ್ಲಿಮರು ತಮ್ಮ ನಂಬಿಕೆಯುಳ್ಳವರಾಗಿ ಕೊಳ್ಳಲಿ. ಆದರೆ ಭಾರತದಲ್ಲಿ ಭಾರತೀಯನಾಗಿ ಇರಲಿ. ನಕಲಿ ಅರಬರಂತೆ, ನಕಲಿ ತುರುಕರಂತೆ ಇರುವುದು ಬೇಡ. ಆಗ ಎಲ್ಲವೂ ಸರಿಯಾಗುತ್ತದೆ ಎಂದರಂತೆ ಬಿಜೆಪಿ ಉಪಾಧ್ಯಕ್ಷ ಕೆ.ಆರ್. ಮಲ್ಕಾನಿ ಒಂದು ಪತ್ರಿಕಾ ಹೇಳಿಕೆ ನೀಡುತ್ತಾ. ಒಬ್ಬ ಪತ್ರಕರ್ತರು ಆಗ ಭಾರತೀಯ ಮುಸ್ಲಿಮರು ನಕಲಿ ಅರಬರಂತೆ, ನಕಲಿ ತುರುಕರಂತೆ ಇರುವ ಒಂದು ಉದಾಹರಣೆ ಕೊಡುತ್ತೀರಾ ಎಂದು ಕೇಳಿದರಂತೆ. ಮಲ್ಕಾನಿ ಬಳಿ ಉತ್ತರವಿರಲಿಲ್ಲ ಭಾರತೀಯ ಮುಸ್ಲಿಮರು ಅರಬ್ಬೀ, ತುರ್ಕಿ ಭಾಷೆ ಮಾತಾಡುವುದಿಲ್ಲ. ಉರ್ದು, ಬಂಗಾಳಿ, ಮಲೆಯಾಳಿ, ತಮಿಳು, ಕನ್ನಡ ಮಾತನಾಡುತ್ತಾರೆ. ಅರಬ್ಬೀ ಆಹಾರ ತಿನ್ನುವುದಿಲ್ಲ, ಭಾರತೀಯ ಆಹಾರ ತಿನ್ನುತ್ತಾರೆ ಅಲ್ಲವೇ ಎಂದು ಒಂದು ಬೆದರಿಕೆಯೇ?" ಎಂದು ಪ್ರಶ್ನಿಸಿದರಂತೆ(ದಿ ಹಿಂದೂ, ಫೆ. 18)

* * * * * * * * * *

ಕಾಶ್ಮೀರದಲ್ಲಿ ದೇವಸ್ಥಾನಗಳನ್ನು ನಾಶ ಮಾಡಲಾಗಿದೆ ಎಂಬ ಬಿಜೆಪಿ ಪ್ರಚಾರವನ್ನು ಸ್ವತಃ ತನಿಖೆ ಮಾಡಿ ಬಂದ ಪತ್ರಕರ್ತ ಹರಿಂದರ್ ಬವೇಜಾ ಅಡ್ವಾಣಿಯವರಿಗೆ ಫೋನ್ ಮಾಡಿ ಕೇಳಿದರು.(ಇಂಡಿಯಾ ಟುಡೇ, ಫೆ. 28).

ಪ್ರ: ಕಾಶ್ಮೀರಕ್ಕೆ ಸ್ವತಃ ಹೋಗಿ ಯಾರಾದರೂ ಪರೀಕ್ಷಿಸಿ 40 ದೇವಸ್ಥಾನಗಳು ನಾಶ- ಕೇಳಿದರಂತೆ ಆ ಪತ್ರಕರ್ತರು.

ಇನ್ನೊಬ್ಬ ಪತ್ರಕರ್ತರ ಪ್ರಶ್ನೆ - "......ಆಗ ಎಲ್ಲವೂ ಸರಿಯಾಗುತ್ತದೆ ಎಂದಿದ್ದೀರಿ. ಇಲ್ಲವಾದರೆ ಸರಿಯಾಗುವುದಿಲ್ಲ ಎಂದರ್ಥವೇ? ಇದುವಾಗಿಲ್ಲ ಎಂದರೆ ನಿಮ್ಮ ನಿಲುವೇನು?

ಅಡ್ವಾಣಿ : ಸಂಖ್ಯೆ ಸ್ವಲ್ಪ ಹೆಚ್ಚಿಸಬಹುದು ಸ್ವಲ್ಪ ಕಡಿಮೆಯಿರಬಹುದು. ನನ್ನ ದೂರು ಮುಖ್ಯವಾಗಿ ಇಬ್ಬಂದಿತನದ ಬಗ್ಗೆ. ನೋಡಿ ಒಂದು ಕಟ್ಟಡವನ್ನು ಅದೂ ನಿರ್ಜನ ಕಟ್ಟಡವನ್ನು ಬೀಳಿಸಿದ್ದಕ್ಕೆ ಎಂತಾ ಗದ್ದಲ.

ಪ್ರ : ಆದರೆ.........

ಅಡ್ವಾಣಿ : ಇನ್ನೇನೂ ಹೇಳಲಿಕ್ಕೆ ಇಲ್ಲ. ಈ ಸಂಭಾಷಣೆ ಮುಂದುವರಿಸಲು ನನಗೆ ಸಾಧ್ಯವಿಲ್ಲ.

ಅಡ್ವಾಣಿಯವರು ಅವರೇ ಒಪ್ಪಿಕೊಂಡಂತೆ ಸುಳ್ಳನ್ನು ಮುಂದುವರಿಸುವುದು ಹೇಗೆ ಸಾಧ್ಯ?

* * * * * * * * * *

ಹೌದು. ಅವರ ಕಾವಿ ನಾಟಕದ ಬಂಟನ ಪಾತ್ರಧಾರಿಗಳಿಗೂ ಜನಗಳಿಗೆ ನಿಜ ತಿಳಿಯಲಾರಂಭಿಸಿದೆ ಎಂದು ಸ್ವಲ್ಪ ಅರ್ಥವಾಗಲಾರಂಭಿಸಿದೆ. ಆದರೆ ಬಂಟತನ ಬಿಡಲು ಇನ್ನೂ ಮನಸ್ಸಿಲ್ಲ.

* * * * * * * * * *

ಪಾಶ್ಚಿಮಾತ್ಯ ಮಾಡೆಲ್‌ಗಳನ್ನು ತ್ಯಜಿಸಿ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಗೋವಿಂದಾಚಾರ್ಯಯರು ಇಂದೂರಿನಲ್ಲಿ ಮೊನ್ನೆ ಮತ್ತೊಮ್ಮೆ ಹೇಳಿದರು. ಟೋಯೆಟಾ ರಾಮರಥ ಸ್ವದೇಶಿಯೋ ಗೊತ್ತಿಲ್ಲ.

* * * * * * * * * *

ಇತ್ತ 'ತರಂಗ'ದ ಸಂಪಾದಕರಿಗೂ(ಫೆ. 21) ಸೆಕ್ಯುಲರಿಸಂ ಇಂದಿಗೂ ಭಾರತದ ಯಾವ ಭಾಷೆಯಲ್ಲೂ ಇದು ಹೀಗೆ ಎಂದು ಸ್ಪಷ್ಟವಾಗಿ ವಿವರಿಸಲಾಗದ ಪದ ಎಂಬ ಕಷ್ಟ ಪಾಪ! ಅಲ್ಪಸಂಖ್ಯಾತರು, ಹಿಂದುಳಿದವರು ಇತ್ಯಾದಿ ಅಸಮಾನತೆಯ ತತ್ವಗಳು! ಸಹಜವಾಗಿಯೇ ಸ್ವಾಮಿ ವಾಮದೇವರಾದಿಯಾಗಿ ಸಾಧು-ಸಂತರು ಬಯಸುವ ಮನುಸ್ಮೃತಿ ಆಧಾರಿತ ಸಂವಿಧಾನ ಬ್ರಾಹ್ಮಣ-ಶೂದ್ರ-ಮಹಿಳೆ ಇತ್ಯಾದಿ ಸಮಾನತೆಯ ತತ್ವಗಳಿಂದ ಕೂಡಿದ್ದೆಂದು ಭಾವಿಸಬೇಕೇ? ಏಕೆಂದರೆ ಸಾದು- ಸಂತರು ಆಟಾಟೋಪಗಳ ಬಗ್ಗೆ 'ತರಂಗ'ದ ಸಂಪಾದಕರ ಚಕಾರವಿಲ್ಲ. ಇರಲಿ ಅವರು ಹೇಳಿದ್ದನ್ನು ಅಥವಾ ಹೇಳಲಾಗದ್ದನ್ನು ಇಲ್ಲಿ ಚರ್ಚಿಸುವುದು ಬೇಡ.

* * * * * * * * * *

ಫ್ಯಾಸಿಸಂ ಎಂಬುದು ಕೂಡಾ ಭಾರತದ ಯಾವ ಭಾಷೆಯಲ್ಲೂ ವಿವರಿಸಲಾಗದ ಪದವಾಗಿ ಇಂತಹವರಿಗೆ ಕಾಣಬಹುದು. ಆದರೆ 50ವರ್ಷಗಳ ಹಿಂದೆ ಇವರೆಲ್ಲರ ಪರಮ ಪೂಜ್ಯ ಗುರು ಗೋಲ್ವಾಲ್ಕರ್ ಪಾಶ್ಚಿಮಾತ್ಯ ಹಿಟ್ಲರ್‌ನನ್ನು ಮೆಚ್ಚಿಕೊಂಡಿದ್ದನ್ನು, ಜನಾಂಗ ಹೆಮ್ಮೆ



ಯಲ್ಲಿ ಬಿ.ಜೆ.ಪಿ. ಅಧ್ಯಕ್ಷ ಮುರಳಿ ಮನೋಹರ ಜೋಷಿ ಕಾಶ್ಮೀರದಲ್ಲಿ ದೇವಸ್ಥಾನಗಳ ಧ್ವಂಸದ ಆಪಾದನೆಯನ್ನು ಪುನರುಚ್ಚರಿಸಿದರು. ಈ ನಿಯೋಗದ ಮಂಡಳಿಯ ಸದಸ್ಯನಾದ ನಾನು ತಕ್ಷಣ ಅವರ ಹೇಳಿಕೆಗೆ ಸವಾಲು ಹಾಕಿದೆ. ನಿರ್ದಿಷ್ಟವಾಗಿ ಯಾವ ದೇವಸ್ಥಾನಗಳು ಧ್ವಂಸವಾಗಿವೆ ಅಥವಾ ಯಾವ ದೇವಸ್ಥಾನಗಳ ಮೇಲೆ ಹಲ್ಲೆ ನಡೆದಿದೆ ತಿಳಿಸಿ ಎಂದೆ. ಅವರು ನಿರ್ದಿಷ್ಟ ಉದಾಹರಣೆ ಕೊಡಲು ಅಸಮರ್ಥರಾದರು. ಆಗಷ್ಟೇ ಅವರು ಶ್ರೀನಗರಕ್ಕೆ "ಏಕತಾ ಯಾತ್ರೆ" ಎಂದು ಹೇಳಿಕೊಂಡು ಭೇಟಿ ನೀಡಿ ಬಂದಿದ್ದರು. ಆದರೆ ಧ್ವಂಸವಾಗಿದೆಯೆಂದ ಯಾವುದೇ ದೇವಸ್ಥಾನಕ್ಕೆ ಭೇಟಿ ನೀಡುವುದು ಅಗತ್ಯ ಎಂದು ಅವರಿಗನಿಸಲಿಲ್ಲ. ಏಕೆ? ಬಿ.ಜೆ.ಪಿ. ಯ ಪ್ರಚಾರದ ಮುಖ್ಯ ಅಂಶವಾದ ಈ ಸಂಗತಿ ಬಗ್ಗೆ ಸತ್ಯವೇನು ಎಂದು ಸುಲಭವಾಗಿ ಅವರು ಕಂಡು ಹಿಡಿಯಬಹುದಾಗಿತ್ತು. ಅವರು ಸತ್ಯ ಏನೆಂದು ಕೇಳಿದರೇ ಹೊರತು ಅದರ ಉತ್ತರಕ್ಕೆ ಕಾಯಲಿಲ್ಲ.

ಶ್ರೀನಗರದ ಗಣಪತ್ಯಾರ್ ಮತ್ತು ಶೀತಲನಾಥ್ ಮಂದಿರವೂ ಸೇರಿದಂತೆ 38 ಧಾರ್ಮಿಕ ಸ್ಥಳಗಳಿಗೆ ನಷ್ಟವಾಗಿರುವುದು ನಿಜ ಎಂದು ನನ್ನ ಇತ್ತೀಚಿನ ತನಿಖೆಗಳಿಂದ ಸ್ಪಷ್ಟವಾದೆ. ಉಳಿದ 36 ಸ್ಥಳಗಳು ಬೆಂಕಿ ಪ್ರಕರಣಗಳಲ್ಲಿ ಧ್ವಂಸವಾದವು - 1989 ರಲ್ಲಿ ಸೋಪೋರ್‌ನಲ್ಲಿ ನಡೆದ ಬೆಂಕಿ ಅನಾಹುತದ ರೀತಿಯಲ್ಲಿ. ಯಾವ ದೇವಸ್ಥಾನಕ್ಕೂ ಗುರಿಯಿಟ್ಟು ಹಲ್ಲೆ ಮಾಡಲಾಗಿಲ್ಲ. ಸೋಪೋರ್‌ನಂತಹ ಬೆಂಕಿಯಿಂದ ಸಂಪೂರ್ಣ-ಭಸ್ಮಗೊಂಡಲ್ಲಿ ಕೂಡಾ. ಇನ್ನೂ ಕೆಲವೆಡೆ ಉಗ್ರಗಾಮಿಗಳ ಸ್ಫೋಟ ಇತ್ಯಾದಿಗಳಿಂದ ಉಳಿದ ಆಸ್ತಿಪಾಸ್ತಿಗಳಂತೆ ದೇವಸ್ಥಾನಗಳಿಗೆ ನಷ್ಟವಾಗಿದೆ. ಒಟ್ಟಿನಲ್ಲಿ 22 ಹಿಂದೂ ದೇವಸ್ಥಾನಗಳಿಗೆ ಹಾನಿ ತಟ್ಟಿದೆ. ಉಳಿದ 16 ಧಾರ್ಮಿಕ ಸ್ಥಳಗಳೆಂದರೆ ಶ್ರೀನಗರ ಮತ್ತು ರಾಜ್ಯದ ಇತರೆಡೆಯಿರುವ ಮಸೀದಿಗಳು, ಈದ್‌ಗಾಗಳು ಹಾಗೂ ಮುಸ್ಲಿಂ ಸಂತರ ದರ್ಗಾಗಳು. ಯಾವ ಕಾರಣಗಳಿಂದ ದೇವಸ್ಥಾನಗಳಿಗೆ ಹಾನಿ ತಟ್ಟಿತೋ ಅವೇ ಕಾರಣಗಳಿಂದ ಇವಕ್ಕೂ ಹಾನಿ ತಟ್ಟಿತು- ಬೆಂಕಿ ಅನಾಹುತ, ಹತ್ತಿರದ ಸಿಆರ್‌ಪಿಎಫ್ ಕ್ಯಾಂಪ್‌ನಲ್ಲಿ ಬಾಂಬ್‌ಸ್ಫೋಟ, ಉಗ್ರಗಾಮಿಗಳು ಹಾಗೂ ಭದ್ರತಾ ಪಡೆಗಳ ನಡುವಿನ ಗುಂಡಿನ ಚಕಮಕಿ ಅಥವಾ ದಾರಿ ತಪ್ಪಿದ ರಾಕೆಟ್ ಹಲ್ಲೆ ಮುಂತಾದ ಕಾರಣಗಳಿಂದ.

ಡಿಸೆಂಬರ್ 6 ರ ಘಟನೆಯ ನಂತರ ಜಮ್ಮು-ಕಾಶ್ಮೀರದಲ್ಲಿ ದೇವಸ್ಥಾನಗಳಿಗೆ ನಷ್ಟವಾದ ಸುದ್ದಿಗಳಿವೆ. ಅಧಿಕೃತ ಮೂಲಗಳ ಪ್ರಕಾರ ಪುಟ್ಟ, ನಿರ್ಜನ ಪ್ರದೇಶಗಳಲ್ಲಿರುವ 2 ಧಾರ್ಮಿಕ ಸ್ಥಳಗಳ ಮೇಲೆ ಕತ್ತಲ ಮರೆಯಲ್ಲಿ ಧಾಳಿ ನಡೆದು ಅಲ್ಪ ಸ್ವಲ್ಪ ನಷ್ಟವಾಗಿದೆ. ಇಂತಹ 38 ಘರ್ಷಣೆಗಳು ಕಾಶ್ಮೀರ ಕಣಿವೆಯಲ್ಲಿ ನಡೆದಿವೆ. ಆದರೆ ಇತರೆಡೆ ಅಯೋಧ್ಯಾ ಗಲಭೆಗಳ ನಂತರ ಮಂದಿರ, ಮಸೀದಿಗಳ ಮೇಲೆ ನಡೆದಂತೆ ಇಲ್ಲಿ ದೇವಸ್ಥಾನಗಳ ಮೇಲೆ ಕೋಮು ಭಾವೋದ್ರಿಕ್ತ ಗುಂಪುಗಳು ಧಾಳಿ ಮಾಡಿದ ಸುದ್ದಿಗಳಿಲ್ಲ.

1986 ಕಾಶ್ಮೀರದಲ್ಲಿ ಒಟ್ಟು 38 ಧಾರ್ಮಿಕ ಸ್ಥಳಗಳಿಗೆ ನಷ್ಟವಾಗಿದೆ. ಇದರಲ್ಲಿ 22 ಹಿಂದೂ ಪೂಜಾಸ್ಥಳಗಳಾದರೆ 16 ಮುಸ್ಲಿಂ ಪೂಜಾಸ್ಥಳಗಳು. ಎಲ್ಲಕ್ಕೂ ನಷ್ಟವಾಗಲು ಕಾರಣ ಒಂದೇ - ಉಗ್ರಗಾಮಿ ಚಟುವಟಿಕೆ - ಸಿ.ಆರ್.ಪಿ.ಎಫ್. ಕ್ಯಾಂಪ್‌ಬಳಿ ಬಾಂಬ್‌ಸ್ಫೋಟ, ಉಗ್ರಗಾಮಿಗಳು ಹಾಗೂ ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ಅಥವಾ ದಾರಿ ತಪ್ಪಿದ ರಾಕೆಟ್ ಧಾಳಿ. ಡಿಸೆಂಬರ್ 6 ರ ನಂತರ ಇಲ್ಲಿ ದೇವಸ್ಥಾನಗಳ ಮೇಲೆ ಕೋಮು ಗುಂಪುಗಳ ಧಾಳಿಯ ಪ್ರಕರಣಗಳೇ ವರದಿಯಾಗಿಲ್ಲ.- ಇದು ವರ್ಗೀಸ್‌ರವರ ಇತ್ತೀಚಿನ ತನಿಖೆಯ ಫಲಿತಾಂಶ. ಶಾವಿ ಪಡೆಯ ಸುಳ್ಳಿನ ಯಂತ್ರ ಈಗ ಹೊಸದೇನಾದರೂ ಸೃಷ್ಟಿಸಬೇಕಲ್ಲವೇ?

ಪ್ರತಿದಿನ ಸಾವಿರಾರು ಜನ ನೋಡುವಂತಹ ಗಣಪತ್ಯಾರ್ ಅಥವಾ ದಶಮನಿ ಅಖಾಡಾದಂತಹ ಪ್ರಖ್ಯಾತ ಸ್ಥಳಗಳು "ಧ್ವಂಸವಾಗಿವೆ", "ಭಸ್ಮಗೊಂಡಿವೆ" ಎಂದು ಯಾರಾದರೂ ಹೇಳುತ್ತಾರೆಂದರೆ ಆಶ್ಚರ್ಯವಾಗುತ್ತದೆ. ಏಕೆಂದರೆ ಇಂತಹ ಘಟನೆ ನಿಜವಾಗಿಯೂ ನಡೆದಿದ್ದರೆ ತಕ್ಷಣ ಎಲ್ಲರಿಗೂ ತಿಳಿಯುವಂತಹ ಸನ್ನಿವೇಶದಲ್ಲಿರುವ ಸ್ಥಳಗಳಿವು. ಉದಾಹರಣೆಗೆ ದಿಲ್ಲಿಯ ಲಕ್ಷ್ಮಿನಾರಾಯಣ ಮಂದಿರ ಅಥವಾ ಜುಮ್ಮಾ ಮಸೀದಿ ಮೇಲೆ ಒಂದೊಮ್ಮೆ ಅಕಸ್ಮಾತ್ ಹಲ್ಲೆ ನಡೆದರೆ ಅದು ದೇಶಕ್ಕೆ ತಿಳಿಯದೇ ಇರುತ್ತದೆಯೇ? ಅಂತಹ ಪ್ರಸಿದ್ಧ ದೇವಸ್ಥಾನಗಳಿವು. ಕಳೆದ ವರ್ಷ 53 ಸಾವಿರ ಯಾತ್ರಾರ್ಥಿಗಳು ಅಮರನಾಥ ದೇವಸ್ಥಾನಕ್ಕೆ ಬಂದು ಹೋದರು. ಖಂಡಿತವಾಗಿಯೂ ಅಲ್ಲಿಗೆ ಹೋಗುವ ದಾರಿಯಲ್ಲಿರುವ ಈ ಎರಡು ಪ್ರಸಿದ್ಧ ಮಂದಿರಗಳ ಮೇಲೆ ಏನಾದರೂ ಇಂತಹ ದೊಡ್ಡ ಹಲ್ಲೆಯಾಗಿದ್ದರೆ ತನಿಖೆ ಹಾಗೂ ಸೂಕ್ತ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಬರುತ್ತಿರಲಿಲ್ಲವೇ? ಅಂತಹ ಒತ್ತಾಯವೇನಾದರೂ ಬಂದಿದೆಯೇ?

ಬಿ.ಜೆ.ಪಿ. ವಿ.ಹೆಚ್.ಪಿ. ಆರ್.ಎಸ್.-

ಪುಟ 8ಕ್ಕೆ

...ಹೋರುವ ಜರ್ಮನ್ ಫ್ಯಾಸಿಸ್ಟರ ಮಾದರಿಯನ್ನು ಭಾರತೀಯರು(ಅಲ್ಲ, ಹಿಂದೂವಾದಿಗಳು) ಅನುಕರಿಸಬೇಕು ಎಂದಿದ್ದನ್ನು ಇಲ್ಲಿ ನೆನೆಸಿಕೊಳ್ಳುವುದೂ ಬೇಡವೇ?

* * * * * * * * * *

50 ವರ್ಷಗಳ ಹಿಂದೆ ಏಕೆ ಹೋಗೋಣ ಇದೇ ಎರಡು ತಿಂಗಳ ಹಿಂದೆ ಡಿಸೆಂಬರ್ 8ರಂದು ಬಿಜೆಪಿ ಅಮೇರಿಕಾದಲ್ಲಿರುವ ತನ್ನ ಭಾರತೀಯ ಬೆಂಬಲಿಗರು "ಅಪಪ್ರಚಾರ" ದಿಂದ ತಮ್ಮನ್ನು ಸಮರ್ಥಿಸಿಕೊಳ್ಳಲು ನೆರವಾಗಲೆಂದು ಕಳಿಸಿದ ಒಂದು ಫ್ಯಾಕ್ಸ್ ಸಂದೇಶವನ್ನೇ ನೋಡೋಣ : "ಅಮೇರಿಕಾದಲ್ಲಿ ಪ್ರೋಟೆಸ್ಟಂಟ್ ಧರ್ಮ, ಜಪಾನಿನಲ್ಲಿ ಬೌದ್ಧ ಧರ್ಮ ಮಾಡಿದಂತೆ ಭಾರತದಲ್ಲಿ ಹಿಂದೂ ಧರ್ಮದ ಶಕ್ತಿಯನ್ನು ಸಂಪತ್ತಾಗಿ ಪರಿವರ್ತಿಸಬಹುದು...." ಎಂದಿತ್ತು ಈ ಸಂದೇಶ. ಇಲ್ಲಿ ಏಕೆ ಪಾಶ್ಚಿಮಾತ್ಯ ಮಾದರಿಗಳು.

* * * * * * * * * *

ಆದರೆ ಈ ಉದಾಹರಣೆಗಳೂ ತಪ್ಪು ಎನ್ನುತ್ತಾರೆ ಪತ್ರಕರ್ತ ಗೌತಮ್ ಅಧಿಕಾರಿ(- ಟೈಮ್ಸ್ ಆಫ್ ಇಂಡಿಯಾ, ಫೆ. 18) ಏಕೆಂದರೆ ಪ್ರೊಟೆಸ್ಟೆಂಟ್ ಧರ್ಮ ಚರ್ಚ್ ಮತ್ತು ಪ್ರಭುತ್ವದ ನಡುವೆ ಕಂದಕ ಹೆಚ್ಚಿಸಿತು. ಜಪಾನೀಯರ ಯಶಸ್ಸಿಗೆ ಬೌದ್ಧ ಧರ್ಮ ಕಾರಣವಲ್ಲ ಎನ್ನುತ್ತಾರೆ ಅವರು.

* * * * * * * * * *

ಇರಲಿ. ಕೊನೆಗೂ 'ತರಂಗ'ದ ಸಂಪಾದಕರ ಇನ್ನೊಂದು ಉದಾರ ನುಡಿಮುತ್ತು ನೋಡಿ. "ಈ ದೇಶ ಹಿಂದುಗಳಿಗೆ ಎಷ್ಟು ಸೇರಿದೆಯೋ, ಇಲ್ಲಿ ಹುಟ್ಟಿ ಇಲ್ಲೇ ಮಣ್ಣಾಗುವ ಮುಸ್ಲಿಮರಿಗೂ ಅಷ್ಟೇ ಸೇರಿದೆ" ಎಂದು ಕೂಡಲೇ ಮುಂದುವರಿದು "ಪ್ರತಿಯೊಬ್ಬ ಮುಸ್ಲಿಮನೂ ತಾನು ರಾಷ್ಟ್ರವಾದಿ ಎಂಬುದನ್ನು ತನ್ನ ನಡೆನುಡಿಯಿಂದ ಸಾಬೀತುಪಡಿಸಬೇಕಾಗಿದೆ" ಎನ್ನಲು ಮರೆಯುವುದಿಲ್ಲ. ಅದೇಕೆ? ಹಿಂದೂಗಳು ಕ್ರಿಶ್ಚಿಯನ್ನರು ಇತರರು ಸಾಬೀತು ಪಡಿಸಿಕೊಳ್ಳಬೇಕಾಗಿಲ್ಲವೇ? 10 71ರ ಭಾರತ-ಪಾಕಿಸ್ತಾನದ ಯುದ್ಧದ ಸಮಯದಲ್ಲಿ ಪಾಕಿಸ್ತಾನಕ್ಕೆ ಯುದ್ಧದ ಸಮಯದಲ್ಲಿ ಪಾಕಿಸ್ತಾನಕ್ಕೆ ಗುಪ್ತ ಮಾಹಿತಿ ನೀಡಿದರೆಂಬ ಆಪಾದನೆಗೊಳಗಾದ ಹಿಂದೂ, ಕ್ರಿಶ್ಚಿಯನ ಸೇನಾಧಿಕಾರಿಗಳು, ಯುರೋಪಿನ ಬ್ಯಾಂಕುಗಳಿಗೆ ಕಳ್ಳತನದಿಂದ ಹಣ ರವಾನಿಸುವ ಹಿಂದೂ ಶ್ರೀಮಂತರು, ಅಷ್ಟೇ ಏಕೆ, ಇಲ್ಲಿ ನಮ್ಮ ತೆರಿಗೆ ಹಣದಿಂದ ಉಚ್ಚ ಶಿಕ್ಷಣ ಪಡೆದು ಅಮೇರಿಕಾದಲ್ಲಿ ಅದರ ಅದ್ಭುತ ಪ್ರತಿಫಲವನ್ನು ಕೇವಲ ತಾವೇ ಪಡೆಯುವ "ಉಚ್ಚ ಕುಲೀನ" ಇಂಜಿನಿಯರ್, ಡಾಕ್ಟರು, ತಂತಾನೇ ರಾಷ್ಟ್ರವಾದಿಯಾಗುತ್ತಾನೆಯೇ?

ನಿಜ ಸೆಕ್ಯುಲರಿಸಂ, ಫ್ಯಾಸಿಸ್ಟ್ ಅರ್ಥವಾಗದವರು ಬೇರೇನು ತಾನೇ ಹೇಳಿಯಾರು?

"ಧರ್ಮದ ಹೆಸರಿನಲ್ಲಿ ದೇಶ ಉರಿಸುವ ಭಕ್ತರಿಂದ ಶ್ರೀರಾಮನೇ ಕಾಪಾಡಬೇಕು"

ಧರ್ಮಕೇ ನಾಮ್ ಪರ್ ದೇಶ್ ಜಲಾನಾ
ಐಸೇ ಭಕ್ತೋಂಸೇ ರಾಮ್ ಬಚಾನಾ

ಕಳೆದ ಜನವರಿ 22ರಂದು ದೇಶದ ರಾಜಧಾನಿಯಲ್ಲಿ ಕೇಳಬಂದ ಘೋಷಣೆಯಿದು. ಇದರ ವಿಶೇಷತೆಯೆಂದರೆ ಇದು ಮಹಿಳೆಯರು ಹಾಗೂ ಮಕ್ಕಳ ಕಂಠಗಳಿಂದ ಹೊರಹೊಮ್ಮಿದ್ದ ಘೋಷಣೆ.

ಮಕ್ಕಳ ಸವಾಲು
ಧರ್ಮದ ಹೆಸರಲ್ಲೇಕೆ
ನಮ್ಮ ಜೀವದ ಬಲಿ?

ಕೋಮುದಂಗೆಗಳಾದಾಗ, ಕರ್ಫ್ಯೂಗಳಾದಾಗ ಅತ್ಯಂತ ಹೆಚ್ಚು ತಲ್ಲಣಗೊಳ್ಳುವವರು ಮಹಿಳೆಯರು. ಆದ್ದರಿಂದ ದೇಶವನ್ನೆಲ್ಲಾ ಅಲುಗಾಡಿಸಿರುವ ಕೋಮು ಗಲಭೆಗಳ ಬಗ್ಗೆ ಇವನ್ನು ತಡೆಯಲಾರದ ಸರಕಾರದ ಹೇಡಿತನದ ಬಗ್ಗೆ ತಮ್ಮ ಸಿಟ್ಟನ್ನು ಪ್ರದರ್ಶಿಸಲು ಸುಮಾರು 2 ಸಾವಿರ ಮಹಿಳೆಯರು, ಮಕ್ಕಳ ಸಹಿತ ರಾಜಧಾನಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಎ.ಐ.ಡಿ.ಡಬ್ಲ್ಯು.ಎ. ಹಾಗೂ ಇತರ ಐದು ಮಹಿಳಾ ಸಂಘಟನೆಗಳ ಕರೆಯ ಮೇರೆಗೆ ಈ ಮೆರವಣಿಗೆ ನಡೆಯಿತು. ಮೆರವಣಿಗೆಯ ನಂತರ ಸಲ್ಲಿಸಿದ ಮನವಿ ಪತ್ರದಲ್ಲಿ ಕಾನೂನುಪಾಲನೆ ಮಾಡಲಾಗದ ಆಡಳಿತವನ್ನು ತರಾಟೆಗೆ ತಗೊಂಡು ಮತಾಂಧರ, ಕಾನೂನುಮುರುಕರ ಹಲ್ಲೆಗಳಿಂದ ಹೆಂಗಸಲು, ಮಕ್ಕಳನ್ನು ರಕ್ಷಿಸುವವರಾರು ಎಂದು ಮಹಿಳೆಯರು ಪ್ರಶ್ನಿಸಿದ್ದಾರೆ.



ಕೋಮುವಾದದ ಕಾಲದಲ್ಲಿ ಸಾಹಿತ್ಯ-ಸಾಹಿತಿ

ಭಾರತದಲ್ಲಿ ಮತ್ತು ಕರ್ನಾಟಕದಲ್ಲೂ ಸಾಹಿತ್ಯ ಮತ್ತು ಸಾಮಾಜಿಕ ಕುರಿತಂತೆ ಸಾಕಷ್ಟು ಚರ್ಚೆಗಳಾಗಿವೆ. ಪರಸ್ಪರ ತೀವ್ರ ವೈರುಧ್ಯಗಳಿಂದ ಕೂಡಿದಂತಹ ನಿಲುವುಗಳು ಪ್ರತಿಪಾದಿತವಾಗಿವೆ. ಸಾಹಿತಿಗೆ ಸಾಮಾಜಿಕ ಬದ್ಧತೆಯ ತೀವ್ರವಾದ ಅವಶ್ಯಕತೆಯಿಲ್ಲ; ತನ್ನ ಅನುಭವಕ್ಕೆ ದೊರಕಿದ ಸಾಮಾಜಿಕ ಚಿತ್ರವನ್ನು ಸಾಹಿತಿ ಕ್ರಿಯಾಶೀಲತೆಯಿಂದ ಮಾರಬಲ್ಲ; ರಾಜೀಕೀಯ-ಸಾಮಾಜಿಕ ಚಳುವಳಿಗಳೊಡನಿನ ಸಾಹಿತಿಯ ಸಂಬಂಧ ಅವನ ಕೃತಿಗಳನ್ನು ತೆಳುಮಾಡಿಬಿಡುತ್ತದೆ. ಎಂಬಂಥವರವರೆಗೂ ವಾದಗಳೂ ಬೆಳೆದಿವೆ. ಈ ಕಾರಣವಾಗಿಯೇ ರಾಜಕೀಯ, ಸಾಮಾಜಿಕ ಚಳುವಳಿಗಳಲ್ಲಿ ನೇರವಾಗಿ ತೊಡಗಿರುವಂತಹವರ ಕೃತಿಗಳನ್ನು ಅನುಮಾನದಿಂದಲೇ ನೋಡಲಾಗುತ್ತದೆ. ವ್ಯಕ್ತಿ ತನ್ನನ್ನು ತಾನು ತೊಡಗಿಸಿಕೊಂಡಿರುವ ಚಳುವಳಿ ಎಷ್ಟೋ ಪ್ರಗತಿಪರ ಆಶಯಗಳನ್ನು, ಕ್ರಾಂತಿಕಾರಿ ಧೋರಣೆಗಳನ್ನು ಹೊಂದಿದ್ದರೂ, ಅಂತಹ ವ್ಯಕ್ತಿಯಿಂದ ಹೊಮ್ಮುವಂತಹ ಸಾಹಿತ್ಯವನ್ನು ಪೂರ್ವ ಅನುಮಾನಗಳಿಂದಲೇ ಗ್ರಹಿಸುವಷ್ಟು ಪ್ರಬಲವಾದ ಧೋರಣೆಗಳು ಬೆಳೆದು ಬಂದಿವೆ. ಇದು ಒಂದು ಅತಿ ಅಷ್ಟೇ ಅತಿಯಾದ ಮತ್ತೊಂದು ಧೋರಣೆಯು 70-80 ದಶಕದಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ಧ್ವನಿತವಾಯ್ತು ; ನೇರವಾಗಿ ಸಾಮಾಜಿಕ ಬದ್ಧತೆಯನ್ನು ಘೋಷಿಸದ ಕೃತಿ ಪ್ರತಿಗಾಮಿಯಾದುದು ಎಂಬವಾದವದು. ರಾಜಕೀಯ-ಸಮಾಜ ಶಾಸ್ತ್ರಗಳ ಶಾಸ್ತ್ರಬದ್ಧ ಧೋರಣೆಗಳಿಗನುಸಾರವಾಗಿ ನೇಯುವ ಎಲ್ಲವೂ ನೈತಿಕವಾದುದು, ಮೌಲಿಕವಾದುದು, ಪ್ರಗತಿಪರವಾದುದು ಎಂಬ ಸಿದ್ಧ ಸೂತ್ರಗಳು ಸಾಕಷ್ಟು ಗಟ್ಟಿಯಾಗಿಯೇ ಬೇರು ಬಿಟ್ಟಂತಹ ಕಾಲವಿದು. ಆದರೆ ಇವೆರಡು ವಿರುದ್ಧ ಧ್ರುವಗಳ ನಡುವಿನ ಸಂಘರ್ಷದಿಂದ ಸಾಕಷ್ಟು ಶಕ್ತಿ ಉತ್ಪಾದನೆಯಾಗಿದೆ. ಈ ಸಂಘರ್ಷ ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಚಾಲನೆಯನ್ನೇ ಕೊಟ್ಟಿವೆ. ರಾಜಕೀಯ-ಸಾಮಾಜಿಕ ವಾಸ್ತವಗಳೊಡನೆ ತಮ್ಮನ್ನು ತಾವು ತೊಡಗಿಸಿಕೊಳ್ಳದೆ, ಜೀವನದ ಅನುಭವ ಗಟ್ಟಿಗೊಳ್ಳಲಿಕ್ಕಿಲ್ಲ ಎಂಬ ಅರಿವು; ಅದರೊಟ್ಟಿಗೆ ಇಂತಹ ಅನುಭವಗಳನ್ನು ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯ ಹಿನ್ನೆಯಲ್ಲಿಟ್ಟು, ಸ್ವಂತ ಅನುಭವನ್ನಾಗಿಸಿಕೊಂಡು ಬರೆಯುವ ಸೃಜನಶೀಲತೆ, ನಿಧಾನವಾಗಿಯಾದರೂ ಇಲ್ಲಿ ಕಾಲಿಡುತ್ತಿದೆ. ಎಡ ಚಳುವಳಿಗಳನ್ನು ತಮ್ಮ ಅನುಭವ ಕೇಂದ್ರವಾಗಿಸಿಕೊಂಡೇ, ಇಡೀ ಸಾಹಿತ್ಯ ಪರಂಪರೆಯೊಟ್ಟಿಗೆ ತಮ್ಮನ್ನು ಗುರುತಿಸಿಕೊಂಡು, ವಾಹಿನಿಯನ್ನು ಮುಂದುವರೆಸುವುದು ಹೇಗೆಂದು ತುಮುಲ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸದ್ಯ ಬರೆಯುತ್ತಿರುವವರೆಲ್ಲರನ್ನು ಕಾಡಿದೆ.

ಈ ಹಿನ್ನೆಲೆಯೇ, ಕೋಮುವಾದ ತನ್ನ ಕರಾಳ ಕೈಗಳಿಂದ ಜೀವನದ ಕತ್ತು ಹಿಸುಕಲು ಮುಂದಾಗುತ್ತಿರುವಾಗ, ಸೃಜನಶೀಲ ಸಾಹಿತಿಗಳಲ್ಲಿ ದರ ವಿರುದ್ಧ ನೇರವಾಗಿ ಎದ್ದು ನಿಲ್ಲುವುದಕ್ಕೆ ಕಾರಣವಾಗಿದೆ. ಬಹಳಷ್ಟು ಸಾಹಿತಿಗಳು ತಮ್ಮ ಸಾಮಾಜಿಕ ಸ್ಥಾನದಿಂದ ಕೋಮುವಾದವನ್ನು ಪರಿಣಾಮಕಾರಿಯಾಗಿಯೇ ಎದುರಿಸುತ್ತಿದ್ದಾರೆ ; ಖಡಾಖಂಡಿತ ಶಬ್ದಗಳಲ್ಲಿ ತಮ್ಮ ಉದ್ದೇಶಗಳನ್ನು ಸಾರುತ್ತಿದ್ದಾರೆ.

ಸಹಜವಾಗಿಯೇ ಬಿ.ಜೆ.ಪಿ., ವಿ.ಹೆಚ್.ಪಿ., ಆರ್.ಎಸ್.ಎಸ್.ಗಳ ದುಷ್ಟಕೂಟ, ಸಾಹಿತಿಗಳನ್ನು ತನ್ನ ವೈರಿಗಳ ಪಟ್ಟಿಯಲ್ಲಿ ಸೇರಿಸಿಕೊಂಡಿದೆ. ಅವರು ಏನನ್ನು ಬರೆಯಬೇಕು, ಯಾವುದನ್ನು ಬರೆಯಬಾರದು ಎಂಬ ಬಗ್ಗೆ 'ಸಂಹಿತೆ'ಗಳನ್ನು ಘೋಷಿಸುವಷ್ಟು ಉದ್ಧಟತನಕ್ಕೆ 'ಸಂಘಪರಿವಾರ' ಕೈ ಹಾಕುತ್ತಿದೆ. (ಗಮನಿಸಿ ರಾಮನ ಬಗೆಗಿನ, ಲಂಕೇಶ ಪತ್ರಿಕೆಯಲ್ಲಿನ, ಕವನವೊಂದನ್ನು ಅವಹೇಳನಕಾರಿ ಎಂದು ಪ್ರತಿಪಾದಿಸಿ, ಕೋರ್ಟ್ ತಡೆಯಾಜ್ಞೆಗೆ ಕೋಮುವಾದಿಗಳು ಮೊರೆಹೋದದ್ದು ; ಕೊಪ್ಪಳ ಸಾಹಿತ್ಯ ಸಮ್ಮೇಳನದಲ್ಲಿ ನಡೆಯಲಿರುವ ಕೋಮು ಸೌಹಾರ್ದತ ಕವಿಸಮ್ಮೇಳನದ ಬಗ್ಗೆ ಬಿ.ಜೆ.ಪಿ.ಯ ರಾಜ್ಯ ಘಟಕ ಹೊರಡಿಸಿರುವ ಸೊಕ್ಕಿನ ಹೇಳಿಕೆ).

ಸಾಮಾಜಿಕ ಬದ್ಧತೆ ತನ್ನೆಲ್ಲ ಶಕ್ತಿ ಮತ್ತು ಅರ್ಥವಂತಿಕೆಯಲ್ಲಿ ಪ್ರಕಟವಾಗಬೇಕಾದ ನಿಜವಾದ ಸಂದರ್ಭವಿದು. ಹಿಟ್ಲರ್‌ನ ನಾಝಿವಾದ ಎಷ್ಟೋ ಜನ ಸಾಹಿತಿಗಳನ್ನು ಸಿನಿಕತನದ, ಭ್ರಮಾತ್ಮಕ ಕೂಪಕ್ಕೆ ತಳ್ಳಿತು. ಅದು ಎಷ್ಟು ಪ್ರಬಲವಾಗಿ ಕೆಲಸ ಮಾಡಿತ್ತೆಂದರೆ, ಜರ್ಮನಿಯ ಖ್ಯಾತ ವಿಮರ್ಶಕ, ಚಿಂತಕ- ವಿಮರ್ಶಕ ವಿಲ್ಟ್ ಬೆಂಜಮಿನ್ ನಾಝಿಗಳ ಕೈಯಿಂದ ಕೊಲೆಯಾಗುವ ಹೆದರಿಕೆಯಿಂದಲೇ ಆತ್ಮ ಹತ್ಯೆ ಮಾಡಿಕೊಂಡ. ಆತ ಬ್ರೆಕ್ಟನ ಹತ್ತಿರದ ಸ್ನೇಹಿತನಾಗಿದ್ದ. ಈ ಆತ್ಮಹತ್ಯೆಯ ಸುದ್ದಿ ತಿಳಿದ ಬ್ರೆಕ್ಟ್ ಹೇಳಿದ ಸಾಲು ತುಂಬ ಗಾಢವಾದುದು. "ಇದು ಜಗತ್ತಿನ ಸಾಂಸ್ಕೃತಿಕ ಲೋಕಕ್ಕೆ ಹಿಟ್ಲರ್‌ನ ಕೊಟ್ಟ ಬಲವಾದ ಪೆಟ್ಟು." ಆದರೆ ಬ್ರೆಕ್ಟ್ ಮತ್ತು ಇತರ ಅನೇಕ ಸಾಹಿತಿಗಳು ನಾಝಿಗಳ ಆಕ್ರಮಣವನ್ನು ನೈತಿಕವಾಗಿ ಎದುರಿಸಿದರು ; ಜೀವನದ ಲವಲವಿ. ನಶಿಸಿ ಹೋಗದಂತೆ ದುಡಿದರು ಅಂತಹ ಕರಾಳದಿನಗಳಲ್ಲಿ ಹೊಂದಿರಬೇಕಾದ ನೈತಿಕ ಸ್ಥೈರ್ಯದ ಬಗ್ಗೆ ಬ್ರೆಕ್ಟನ ಕವನವೊಂದರಲ್ಲಿ ವಿವರಿಸಲಾಗಿದೆ. ನಾಝಿಗಳು ತಮ್ಮ ವಿರೋಧಿಯೊಬ್ಬನನ್ನು ಗಲ್ಲಿಗೇರಿಸುವ ಸಲುವಾಗಿ ಗಲ್ಲುಕಂಬಕ್ಕೆ ತರುತ್ತಾರೆ, ಗಲ್ಲಿಗೇರಿಸುವ ಮುನ್ನ ಅವನ ಕೊನೆಯ ಆಸೆ ಏನು ಎಂದು ಕೇಳಲಾಗುತ್ತದೆ. ಅವನು ಒಂದಿಷ್ಟು ಅಳುಕದೆ, 'ನಿಮ್ಮ ಮುಖಕ್ಕೆ ಉಗಿಯಬೇಕು' ಎಂದು ಹೇಳಿ ನಾಝಿ ಮುಖಕ್ಕೆ ಉಗಿಯುತ್ತಾನೆ, ಮರುಕ್ಷಣ ಅವನ ದೇಹ ನೇಣುಗಂಬದಲ್ಲಿ ನೇತಾಡುತ್ತದೆ.

ಭಯಾನಕ ವಾತಾವರಣದಲ್ಲೂ, ತಾನು ವಿರೋಧಿಸುವುದನ್ನು ವಿರೋಧಿಸಿಯೇ ತೀರುತ್ತೇನೆಂಬ ಧೈರ್ಯ ನಮ್ಮ ಸಾಹಿತಿಗಳ ಲೇಖನಿಗಿದೆ ಎಂದು ಆಶಿಸೋಣ.

-- ಘರಾಜ್

ಒರಿಸ್ಸಾ ಕಾಂಗ್ರೆಸ್(ಐ) ಬೀದಿ ಕಾಳಗ

'ಕಾಂಗ್ರೆಸ್ ಸಂಸ್ಕೃತಿ'ಯ ವಿಶ್ವರೂಪ ದರ್ಶನವಾಗಿದೆ - ಅದು ಈ ಬಾರಿ ಒರಿಸ್ಸಾದಲ್ಲಿ. ಕಾಂಗ್ರೆಸ್ ಕೆಟ್ಟ ಮುಖದ ಎಲ್ಲಾ ಮಜಲುಗಳೂ ಇಲ್ಲಿ ನಗ್ನ ನರ್ತನ ಮಾಡಿವೆ. ರಾಜ್ಯ ಕಾಂಗ್ರೆಸ್(ಐ) ನ ಎರಡು ಬಣಗಳ ಶೀತಲ ಸಮರ ಬೀದಿ ಜಗಳವಾಗಿ ಹೊರ ಹೊಮ್ಮಿ 'ಕಾಂಗ್ರೆಸ್ ಸಂಸ್ಕೃತಿ- ಹಾಗೆಂದರೇನು?' ಎಂಬುದಕ್ಕೆ ಉತ್ತರ ದೊರಕಿದಂತಾಗಿದೆ.

ಫೆಬ್ರವರಿ 14 ರಂದು ಒರಿಸ್ಸಾ ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ರಾಜ್ಯ ಸಮಿತಿ ಸಭೆ ಸೇರಿತ್ತು. ಜೆ.ಬಿ. ಪಟ್ನಾಯಕ್ ನೇತೃತ್ವದ 'ನಿಷ್ಠಾವಂತ'ರ ಬಣ ಹಾಗೂ ಪ್ರದೇಶ ಕಾಂಗ್ರೆಸ್ ಉಪಾಧ್ಯಕ್ಷ ಬಸಂತಕುಮಾರ ಬಿಸ್ವಾಲ್ ನಾಯಕತ್ವದ 'ಭಿನ್ನಮತೀಯರ' ನಡುವಣ ಕಾಳಗಕ್ಕೆ ಅದು ರಂಗ ಸ್ಥಳವಾಗಿತ್ತು.

ಸಭೆ ಆರಂಭವಾಗುತ್ತಿದ್ದಂತೆ ಖಡ್ಗ-ಚಾಕು-ಚೂರಿಗಳನ್ನು ಹಿಡಿದ ಗುಂಪು ಕಾಂಗ್ರೆಸ್ ಭವನದ ಮುಚ್ಚಿದ ಬಾಗಿಲನ್ನು ಕಿತ್ತೆಸೆದು ಒಳನುಗ್ಗಿತ್ತು. ಆಗ ಒಳಗಿದ್ದವರು ಈ ಗುಂಪಿನವರನ್ನು ಹೊರದಬ್ಬಲು ಯತ್ನಿಸಿದರು. ಜಗಳ ಅಲ್ಲಿಗೇ ಮುಗಿಯದೇ ಬೀದಿಗೆ ಕೂಡ ಬಂದಿತು. ಪಟ್ನಾಯಕ್ ಮತ್ತು ಬಿಸ್ವಾಲ್ ಗುಂಪುಗಳ ನಡುವೆ ದೀರ್ಘಕಾಲದಿಂದ ನಡೆಯುತ್ತಿದ್ದ ಮುಸುಕಿನ ಗುದ್ದಾಟ ಈ ರೀತಿಯಲ್ಲಿ ಬೀದಿಗೆ ಬಂದಿತು. ಹೊಡೆದಾಡುತ್ತಿದ್ದ 'ಕಾಂಗ್ರೆಸಿಗರನ್ನು' ನಿಯಂತ್ರಣಕ್ಕೆ ತರಲು ಪೋಲೀಸರು ಬರಬೇಕಾಯಿತು!

ಖಡ್ಗಗಳನ್ನು ಝಳಪಿಸುತ್ತ, ಲಾಠಿಗಳನ್ನು ಬೀಸುತ್ತ, ಕಲ್ಲು ತೂರುತ್ತ ಪಕ್ಷದ ಕಚೇರಿಯೊಳಗಿನಿಂದ ಹೊಡೆದಾಡುತ್ತಲೇ ಬೀದಿಗಿಳಿದ ಈ ಗುಂಪುಗಳು ಪಕ್ಷದ ಕಚೇರಿಯ ಕಿಟಕಿಗಾಜುಗಳನ್ನು ಪುಡಿಮಾಡಿದವು. ಅವರ ದಾಂಧಲೆಗೆ ಒಳಗಾಗಿ ಅಕ್ಕಪಕ್ಕದ ಮನೆಗಳ ಕಿಟಕಿ ಗಾಜುಗಳು ಕೂಡ ಪುಡಿಯಾದವು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಬಿಸ್ವಾಲ್ ಇವರಲ್ಲಿ ಯಾರು ಶ್ರೇಷ್ಠರು ಎಂಬ ಬಗ್ಗೆ ಮಾತಿಗೆ ಮಾತು ಬೆಳೆದು ಸಭೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತು. ಹೊಡೆದಾಟ ತಾರಕಕ್ಕೇರಿತು.

ಸಾಮಾನ್ಯವಾಗಿ ಕೆಳಹಂತದ ಕಾರ್ಯಕರ್ತರ ನಡುವೆ ನಡೆಯುತ್ತಿದ್ದ ಹೇಯ ಕೈ ನಾಯಕರಿಗೂ ವಿಸ್ತರಿಸಿದ್ದು ಈ ಬಾರಿಯ ವಿಶೇಷ. ಅನೇಕ ಮುಖಂಡರ ಮೇಲೆ ದಾಳಿ ಮಾಡಲಾಯಿತು.

ತೀವ್ರ ಗಾಯಗೊಂಡ ಅನೇಕ ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಭವನದ ಹೊರಗೆ ಕುಸಿದುಬಿದ್ದರು. ಮಾಜಿ ಶಾಸಕ ರಸಾನಂದ ಸಾಹು, ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯ ಪ್ರದೀಪ್ ಬಿಸ್ವಾಲ್ ಮತ್ತು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಸುಜಿತ್ ಪಹಾಡಿಯಾ ಮೊದಲಾದವರು ತೀವ್ರವಾಗಿ ಗಾಯಗೊಂಡರು. ಥಳಿಸುತ್ತ ಬೆನ್ನಟ್ಟಿದ್ದ ಜನಜಂಗುಳಿಯಿಂದ ಪಾರಾಗಲು ರಕ್ತ ಸುರಿಯುತ್ತಿದ್ದ ಅನೇಕ ನಾಯಕರು ಓಡಿ ಹೋಗುತ್ತಿದ್ದರು. ಬಸಂತ ಕುಮಾರ ಬಿಸ್ವಾಲ್ ಮತ್ತು ಮಾಜಿ ಸಚಿವ ಬಿ.ಪಿ. ಮೊಹಂತಿ ಅವರನ್ನು ಕೆಲ ಶಸ್ತ್ರಧಾರಿಗಳು ಅಟ್ಟಿಸಿಕೊಂಡು ಹೋಗಿ ಪೈಶಾಚಿಕವಾಗಿ ಥಳಿಸಿದರಲ್ಲದೆ ನೆಲಕ್ಕೆ ಕೆಡವಿ ಬಟ್ಟೆಗಳನ್ನು ಹರಿದು ಹಾಕಿದರು. ಇನ್ನೂ ಅನೇಕ ಮಂದಿ ಗಾಯಗೊಂಡಿದ್ದಾರೆ. ಮರುದಿನ ಸುದ್ದಿಗೋಷ್ಠಿಯೊಂದರಲ್ಲಿ ಅವರೆಲ್ಲ ಬಟ್ಟೆಗಳನ್ನು ಬಿಚ್ಚಿ ತಮಗಾದ ಗಾಯಗಳನ್ನು ಸುದ್ದಿಗಾರರಿಗೆ ತೋರಿಸಿದರು.

ಈ ಎಲ್ಲಾ ದಾಂಧಲೆ, ಆಕ್ರಮಣ-ಧಾಳಿಗಳಿಗೆ ಉಭಯ ಬಣಗಳವರೂ ಪರಸ್ಪರ ದೂಷಿಸಿಕೊಂಡಿದ್ದಾರೆ. ಗೂಂಡಾಗಳನ್ನು ಬಳಸಿ ಪೂರ್ವಯೋಜಿತವಾಗಿ ಇದನ್ನು ನಡೆಸಲಾಯಿತು ಎಂದು ಆರೋಪಿಸಿದ್ದಾರೆ. ಯಾವ ಬಣವರಿಂದಲೇ ನಡೆದಿರಲಿ ಇದು ಕಾಂಗ್ರೆಸ್ಸಿಗರಿಂದ ಆಗಿರುವ ಕೃತ್ಯವಂತೂ ಹೌದು ಎನ್ನುವುದನ್ನು ಯಾರೂ ನಿರಾಕರಿಸಲಾಗದು.

ಬಡ್ತಿಯೊಂದಿಗೆ ಪುನರುಜ್ಜೀವನ!

ಸ್ವಲ್ಪ ಸಮಯದಿಂದ ತೆರೆಮರೆಗೆ ಸರಿದಿದ್ದ ಕಾಂಗ್ರೆಸ್‌ನ ಚಾಕು ಚೂರಿ ಸಂಸ್ಕೃತಿ ಒರಿಸ್ಸಾ ಪ್ರಕರಣದಿಂದ ಪುನರುಜ್ಜೀವನಗೊಂಡಂತಾಗಿದೆ. ಚೂರಿ ಸಂಸ್ಕೃತಿಗೆ ಬಡ್ತಿಯೂ ದೊರೆಯುವಂತೆ ಕಾಣುತ್ತಿದೆ. ಹಿಂದೆಲ್ಲ ಸಾಮಾನ್ಯವಾಗಿ ಕಾಂಗ್ರೆಸಿಗರ ಜಗಳಗಳಲ್ಲಿ ಚಾಕು ಚೂರಿ ಚೈನುಗಳಂಥ ಆಯುಧಗಳು ಮಾತ್ರವೇ ಬಳಕೆಯಾಗುತ್ತಿದ್ದವು. ಆದರೆ ಫೆ. 14 ರ ಪ್ರಕರಣದಲ್ಲಿ ಖಡ್ಗಗಳು-ಲಾಠಿಗಳೂ ಬಳಕೆಯಾದವು.

ಪಕ್ಷದ ಆಂತರಿಕ ಕಲಹವನ್ನು ಈ ರೀತಿಯಲ್ಲಿ ಬೀದಿ ಜಗಳವನ್ನಾಗಿಸಿ ಪರಿವರ್ತಿಸಿದ್ದು ನಿಜಕ್ಕೂ ನಾಚಿಕೆಗೇಡಿನ ವಿಷಯವಾಗಿದೆ. ಇತ್ತೀಚೆಗಷ್ಟೇ ಕೇರಳದಲ್ಲಿ ವ್ಯವಸ್ಥೆಗೊಳಿಸಿದ್ದ ಕೋಮುವಾದ ವಿರೋಧಿ ಸಮಾವೇಶದಲ್ಲಿಯೂ ರಾಜ್ಯ ಕಾಂಗ್ರೆಸಿಗರ ಅಂತಃಕಲಹ ಸ್ಫೋಟಗೊಂಡು ಸಮಾವೇಶ ರದ್ದಾದ ಬಗ್ಗೆ ನಾವು ಆಗಲೇ ಓದಿದ್ದೇವೆ. ಇದಲ್ಲದೆ ವಿವಿಧ ರಾಜ್ಯಗಳಲ್ಲಿ ಹಾಗೂ ಕೇಂದ್ರ ಮಟ್ಟದಲ್ಲಿ ಕಾಂಗ್ರೆಸ್ ಅಂತಃಕಲಹ ಜುಗುಪ್ಸೆ ಹುಟ್ಟಿಸುವ ತಿರುವುಗಳನ್ನು ಪಡೆಯುತ್ತಿರುವುದನ್ನು ಕಾಣುತ್ತಿದ್ದೇವೆ.

ಆಂತರಿಕ ಭಿನ್ನಾಭಿಪ್ರಾಯಗಳನ್ನು ಒಂದು ರಾಜಕೀಯ ಪಕ್ಷದ ಆಂತರಿಕ ವಿಚಾರವೆಂದು ಪರಿಗಣಿಸಿ ಯಾರಾದರೂ ಸುಮ್ಮನಿರಬಹುದು. ಆದರೆ ಅದು ಗೂಂಡಾಗಿರಿಯಾಗಿ ಪರಿವರ್ತನೆಗೊಂಡರೆ ಖಂಡಿತ ಅದನ್ನು ನಾಗರಿಕ ಸಮಾಜ ಖಂಡಿಸಲೇ ಬೇಕಾಗುತ್ತದೆ.

ಬೇಜವಾಬ್ದಾರಿ

ಕೋಮುವಾದಿಗಳ ಧೂರ್ತ ಆಟಗಳಿಂದ ದೇಶ ಬೆಂದು ಬೂದಿಯಾಗುತ್ತಿದೆ. ದೇಶ ತೀರಾ ಅಪಾಯದ ಅಂಚಿನಲ್ಲಿರುವಾಗ ಎಲ್ಲರೂ ಅದಕ್ಕೆ ಕಾರಣವಾಗಿರುವ ಶಕ್ತಿಗಳ ವಿರುದ್ಧ ಸೆಣಸುವ ಅಗತ್ಯ ಈಗಿದೆ. ಅದರಲ್ಲೂ ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಹಾಗೂ ತಾನೇ ಏಕೈಕ ದೊಡ್ಡ ರಾಜಕೀಯ ಪಕ್ಷ ಎಂದು ಬೀಗಿಕೊಳ್ಳುವ ಪಕ್ಷದ ಮೇಲಂತೂ ಆ ಹೊಣೆಗಾರಿಕೆ ತುಂಬಾ ಇದೆ. ಆದರೆ ಅದನ್ನು ಮರೆತು ಅದು ಬೇಜವಾಬ್ದಾರಿತನದಿಂದ ವರ್ತಿಸುತ್ತಿದೆ. ರಾಷ್ಟ್ರವಿಮೋಚನೆಗಾಗಿ ನಡೆದ ಅಧೀರ ಸಮರಕ್ಕೆ ಕಾಂಗ್ರೆಸಿಗರ ಕಚ್ಚಾಟ ಮಸಿ ಬಳಿಯುವಂತಿದೆ.

ಮಹಾರಾಷ್ಟ್ರದಲ್ಲಿ ಬಿಕ್ಕಟ್ಟು

ಈ ಮೇಲೆ ಪ್ರಸ್ತಾಪಿಸಿರುವ ಮಾರಾಮಾರಿ ಪ್ರಕರಣ ಕಾಂಗ್ರೆಸ್ (ಐ) ಅಧಿಕಾರದಲ್ಲಿ ಇಲ್ಲದ ರಾಜ್ಯದ್ದಾಗಿದೆ. ಅದು ಅಧಿಕಾರದಲ್ಲಿರುವ ರಾಜ್ಯಗಳ ಪೈಕಿ ಬಿಕ್ಕಟ್ಟು ಎದುರಿಸುತ್ತಿರುವ ಸಾಲಿಗೆ ಈಗ ಮಹಾರಾಷ್ಟ್ರ ಸೇರಿದೆ.

ಫೆ. 12 ರಂದು ನಡೆದ ಮಹಾರಾಷ್ಟ್ರ ಕಾಂಗ್ರೆಸ್(ಐ) ಶಾಸಕ ಪಕ್ಷ ಸಭೆಯಲ್ಲಿ ಕೋಲಾಹಲ ನಡೆಯಿತು. ಮುಖ್ಯಮಂತ್ರಿ ಸುಧಾಕರರಾವ್ ನಾಯಕ್ ರಾಜೀನಾಮೆ ನೀಡಬೇಕೆಂದು ಭಿನ್ನಮತೀಯರ ಬಣ ಪಟ್ಟು ಹಿಡಿದದ್ದೇ ಇದಕ್ಕೆ ಕಾರಣ. ಈ ಬಹಿರಂಗ ಬಂಡಾಯ ಪ್ರಕಟಗೊಂಡ ಬೆನ್ನಲ್ಲೇ ನಾಯಕ ತಮ್ಮ ಸಂಪುಟದಿಂದ ಆರು ಮಂದಿ ಸಚಿವರನ್ನು ವಜಾಗೊಳಿಸಿದರು. ಇವರೆಲ್ಲರೂ ಭಿನ್ನಮತೀಯರ ಬೆಂಬಲಿಗರಂತೆ.

ಮಹಾರಾಷ್ಟ್ರದಲ್ಲಿ ಕೋಮುದಳ್ಳುರಿ ಮತ್ತೆ ಭುಗಿಲೆದ್ದು ಜನಜೀವನಕ್ಕೆ ಆತಂಕ ಉಂಟಾಗುತ್ತಿದೆ. ಅದನ್ನು ನಿಯಂತ್ರಿಸುವ ದಿಸೆಯಲ್ಲಿ ಗಮನವನ್ನು ಕೇಂದ್ರೀಕರಿಸುವ ಬದಲು ಗುಂಪು ರಾಜಕೀಯದಲ್ಲಿ ತೊಡಗಿರುವ ಕಾಂಗ್ರೆಸ್‌ಗೆ ಒಂದಿಷ್ಟು ನಾಚಿಕೆಯಿಲ್ಲವೇ ಹಾಗಾದರೆ?

ಎ.ಡಿ.ಎಂ.ಕೆ.- ಕಾಂಗ್ರೆಸ್ ಮಧು ಚಂದ್ರ ಅಂತ್ಯ?

ಈ ನಡುವೆ, ತಮಿಳುನಾಡಿನಲ್ಲಿ ಕಾಂಗ್ರೆಸ್ (ಐ) ಮತ್ತು ಆಳುವ ಅಖಿಲಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎ.ಐ.ಎ.ಡಿ.ಎಂ.ಕೆ.) ನಡುವೆ ಭಾರೀ ವಿರಸ ಹುಟ್ಟಿದೆ. ಅದು ಸರಿಪಡಿಸಲಾಗದ ಮಟ್ಟವನ್ನು ಮುಟ್ಟಿರುವುದು ಸದ್ಯದ ವಿದ್ಯಮಾನಗಳಿಂದ ಗೊತ್ತಾಗುತ್ತದೆ.

ದೂರದರ್ಶನದ ಮೂಲಕ ರಾಜ್ಯದ ಮೇಲೆ ಹಿಂದಿ ಭಾಷೆಯನ್ನು ಕೇಂದ್ರ ಸರಕಾರ ಹೇರುತ್ತಿದೆ ಎಂದು ಆರೋಪಿಸಿ ರಾಜ್ಯ ಸರಕಾರ ಮಂಡಿಸಿದ್ದ ನಿರ್ಣಯಕ್ಕೆ ಅಡ್ಡಿಯುಂಟುಮಾಡಿ ಪ್ರತಿಪಕ್ಷ(ಕಾಂಗ್ರೆಸ್) ನಾಯಕ ಬಾಲಸುಬ್ರಹ್ಮಣ್ಯಂ ನೇತೃತ್ವದಲ್ಲಿ ಎಲ್ಲಾ 60 ಮಂದಿ ಕಾಂಗ್ರೆಸ್ ಸದಸ್ಯರು ಫೆಬ್ರವರಿ 10 ರಂದು ತಮಿಳುನಾಡು ವಿಧಾನಸಭೆಯಲ್ಲಿ ಕೋಲಾಹಲ ಎಬ್ಬಿಸಿದರು. ಇದುವೆ ಉಭಯ ಪಕ್ಷಗಳ ಮಧುಚಂದ್ರದ ಅಂತ್ಯಕ್ಕೆ ನಾಂದಿ ಹಾಡಿದ ಘಟನೆಯಾಯಿತು.

ಸದನದಲ್ಲಿ ಗದ್ದಲ ಎಬ್ಬಿಸಿದ ಎಲ್ಲಾ ಕಾಂಗ್ರೆಸ್ ಸದಸ್ಯರನ್ನು ಸ್ಪೀಕರ್‌ದಿನದ ಮಟ್ಟಿಗೆ ಅಮಾನತು ಮಾಡಿದರು ಹೊರ ಹೋಗಲು ನಿರಾಕರಿಸಿದವರನ್ನು ಭದ್ರತಾ ಸಿಬ್ಬಂದಿಗಳು ಎತ್ತಿ ಹೊರಗೆ ಹಾಕಿದರು.

ಕಾಂಗ್ರೆಸ್ ಜತೆ ಸಂಬಂಧವನ್ನು ಕಡಿದುಕೊಂಡಿರುವುದಾಗಿ ಎ.ಐ.ಡಿ.ಎಂ.ಕೆ.ಯ ಆರು ಮಂದಿ ಸಚಿವರು ಘೋಷಿಸಿದರು. ಈ ಘೋಷಣೆ ಅಧಿಕೃತವಾಗಿ ಪಕ್ಷದ ನಾಯಕರಿಂದ ಬಾರದಿದ್ದರೂ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಜಯಲಲಿತಾರ ಒಲವು ಕೂಡಾ ಅದೇ ಆಗಿದೆ ಎಂಬ ಹಿನ್ನೆಲೆಯಲ್ಲಿ ಈ ಘೋಷಣೆಗೆ ಮಹತ್ವ ಬಂತು.

ಸಂಬಂಧವನ್ನು ಮುಂದುವರಿಸಿಕೊಂಡು ಹೋಗುವ ಸಂಬಂಧದಲ್ಲಿ ಕಾಂಗ್ರೆಸ್ ಹೈಕಮಾಂಡ್ ಇಬ್ಬರು ದೂತರನ್ನು (ಮೋತಿಲಾಲ್ ವೋರಾ ಮತ್ತು ಕೆ.ವಿ. ತಂಗಬಾಲು) ಮದ್ರಾಸಿಗೆ ಕಳಿಸಿತು. ತಮಿಳ್ನಾಡು ಕಾಂಗ್ರೆಸ್ ನಾಯಕರನ್ನು ದೆಹಲಿಗೆ ಕರೆಸಿಕೊಂಡು ಮಾತುಕತೆ ನಡೆಸಿತು.

ಅಂತಿಮ ಫಲಿತಾಂಶ ಇನ್ನೂ ಹೊರಬಿದ್ದಿಲ್ಲ.

ಲಾಟರಿ ಹಗರಣದಲ್ಲಿ ಕಾಂಗ್ರೆಸ್ ನಾಯಕ

ತ್ರಿಪುರಾ ರಾಜ್ಯ ಲಾಟರಿ ಹೆಸರಿನಲ್ಲಿ ನಕಲಿ ಟಿಕೆಟ್‌ಗಳನ್ನು ಮಾರಾಟ ಮಾಡಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಗುಳಂ ಮಾಡಿದ ಭಾರಿ ದೊಡ್ಡ ಹಗರಣದ ಸಂದರ್ಭದಲ್ಲಿ ಸಿಕ್ಕಿಂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕುಮಾರ ಸುಬ್ಬಾ ಹಾಗೂ ಇತರ ಐದು ಜನರನ್ನು ತ್ರಿಪುರಾ ಪೋಲಿಸರು ಫೆಬ್ರವರಿ 16 ರಂದು ಬಂಧಿಸಿದರು. ಅಸ್ಸಾಮ್‌ನ ಒಬ್ಬ ಪ್ರಮುಖ ಶಾಸಕ ಕೂಡಾ ಹಗರಣದಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳಲಾಗಿದೆ.

ಈ ಲಾಟರಿ ಹಗರಣ ತ್ರಿಪುರಾದಲ್ಲಿ ಅಲ್ಲೋಲ ಕಲ್ಲೋಲವನ್ನು ಎಬ್ಬಿಸಿತು.

ಕಾಂಗ್ರೆಸ್ ನಾಯಕ ಸುಬ್ಬಾ 'ಬಿಸಿಸ್ವಾ ಲಾಟರಿ ಏಜೆನ್ಸಿ'ಯ ಮಾಲಿಕ. ತ್ರಿಪುರಾ ಲಾಟರಿಗಳಾದ ಡೆಯ್ಲಿ ಚೇಕ್, ಡೈಲಿ ಧನ್ ಮತ್ತು ಲಾಭ ಲಕ್ಷ್ಮಿಗಳ ಮಾರಾಟವನ್ನು ಆತನ ಏಜೆನ್ಸಿ ಆರಂಭಿಸಬೇಕಿತ್ತು. ಆದರೆ ಒಪ್ಪಂದ ಅಂತಿಮ ರೂಪ ಪಡೆಯುವ ಮುನ್ನವೇ ಏಜೆನ್ಸಿ ಸುಮಾರು 100 ಕೋಟಿ ರೂ. ಮೊತ್ತದ ಟಿಕೆಟ್‌ಗಳನ್ನು ದೇಶಾದ್ಯಂತ ಮಾರಾಟ ಮಾಡಿತು.

ಫೆಬ್ರವರಿ 27, ಆಜಾದ್ ಹುತಾತ್ಮದಿನ

ಫೆಬ್ರವರಿ 27 ರಂದು ದೇಶಾದ್ಯಂತ ಚಂದ್ರಶೇಖರ್ ಆಜಾದ್ ಹುತಾತ್ಮದಿನವನ್ನು ದೊಡ್ಡ ರೀತಿಯಲ್ಲಿ ಆಚರಿಸಲು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ನಿರ್ಧರಿಸಿದೆ. ರಾಷ್ಟ್ರೀಯ ಏಕತೆ, ಜಾತ್ಯತೀತತೆ ಮತ್ತು ಕೋಮು ಸೌಹಾರ್ದವನ್ನು ರಕ್ಷಿಸುವ ಹೋರಾಟದಲ್ಲಿ ಸ್ವಾತಂತ್ರ್ಯ ಸಮರದ ಕೆಚ್ಚನ್ನು ಪುನರುಜ್ಜೀವನಗೊಳಿಸುವ ಭಾಗವಾಗಿ ಈ ಕ್ರಮಕ್ಕೆ ಡಿ. ವೈ.ಎಫ್.ಐ ಮುಂದಾಗಿದೆ.

ಡಿ.ವೈ.ಎಫ್.ಐ. ಪ್ರತಿವರ್ಷ ಮಾರ್ಚ್ 23 ನ್ನು ಭಗತ್‌ಸಿಂಗ್ ಹುತಾತ್ಮದಿನವನ್ನಾಗಿ ಆಚರಿಸುತ್ತ ಬಂದಿದೆ. ಭಗತ್‌ಸಿಂಗ್, ಸುಖದೇವ, ರಾಜಗುರು ಅವರನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು 1931 ರ ಮಾರ್ಚ್ 23 ರಂದು ಲಾಹೋರಿನಲ್ಲಿ ಗಲ್ಲಿಗೇರಿಸಿದ್ದರು. ಈ ವರ್ಷ ಆಜಾದ್ ಹುತಾತ್ಮದಿನವನ್ನು ಕೂಡಾ ಆಚರಿಸಲಾಗುತ್ತದೆ ಎಂದು ಡಿ.ವೈ.ಎಫ್.ಐ. ಅಧ್ಯಕ್ಷ ಮಹಮದ್ ಸಲೀಂ ಐ. ಎನ್.ಎಸ್.ಗೆ ತಿಳಿಸಿದ್ದಾರೆ.



ಮನೆ ಮನೆ ಪ್ರಚಾರ 50 ಲಕ್ಷ ಸಹಿ ಸಂಗ್ರಹ ಬಿಹಾರದಲ್ಲಿ ಅಭಿಯಾನ

ರಾಷ್ಟ್ರೀಯ ಏಕತೆಗಾಗಿ ಮನೆಮನೆ ಪ್ರಚಾರ ಮಾಡುವ ಮೂಲಕ ರಾಜ್ಯದಲ್ಲಿ 50 ಲಕ್ಷ ಸಹಿಗಳನ್ನು ಸಂಗ್ರಹಿಸಲು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ನಿರ್ಧರಿಸಿದೆ. ಫೆಬ್ರವರಿ 2 ಮತ್ತು 3 ರಂದು ಸಮಿತಿಯ ಸಭೆ ನಡೆಯಿತು.

ಇದಕ್ಕೆ ಮುನ್ನ, ಜನವರಿ 31 ರಂದು ಎಡಪಕ್ಷಗಳು, ಜನತಾದಳ, ಮತ್ತು ಅವುಗಳ ಮಿತ್ರ ಪಕ್ಷಗಳು ಸಭೆ ನಡೆಸಿ ರಾಷ್ಟ್ರೀಯ ಏಕತಾ ಆಂದೋಲನದ ರಾಜ್ಯ ಘಟಕಗಳನ್ನು ರಚಿಸಿಕೊಂಡವು. ಜನತಾದಳ ರಾಜ್ಯಾಧ್ಯಕ್ಷ ರಾಮಯ್‌ರಾಮ್ ಸಮಿತಿಯ ಸಂಚಾಲಕರಾಗಿ ಆಯ್ಕೆಯಾದರು. ಸುಬೋಧ್‌ರಾಯ್ (ಸಿಪಿಐ(ಎಂ), ಸೂರಜ್ ಪ್ರಸಾದ್(ಸಿಪಿಐ), ರಘುವಂಶ್ ಪ್ರಸಾದ್ ಸಿಂಗ್ (ಜನತಾದಳ,) ಪಿ.ಕೆ. ಸಿನ್ಹಾ (ಎಸ್.ಜೆ.ಪಿ.) ಇವರು ಜಂಟಿ ಸಂಚಾಲಕರು.

ಡಂಕೆಲ್ ಪ್ರಸ್ತಾವ ತಿರಸ್ಕಾರಕ್ಕೆ ರೈತರಿಗೆ ಕರೆ

ಅಡಿಹುಡಿ : ವಿಜಾಪೂರ 31 ಜಮಖಂಡಿ ತಾಲೂಕ್ ಪೈಕಿ ಅಡಿಹುಡಿ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಘಟಕದ ಅಧ್ಯಕ್ಷರಾದ ಭಿಮಶಿ ಕೋಟ್ಯಾಳ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಕಾರ್ಮಿಕ ಮುಖಂಡರಾದ ಎನ್.ಕೆ. ಉಪಾಧ್ಯಾಯ ಸಭೆಯಲ್ಲಿ ಮಾತನಾಡಿದರು. ಕೇಂದ್ರ ಸರಕಾರ ರೈತ ವಿರೋಧಿ ಹೊಸ ಆರ್ಥಿಕ ನೀತಿ ರಸಗೊಬ್ಬರ ಸಬ್ಸಿಡಿ ರದ್ದು ಮಾಡಿದುದರ ಪರಿಣಾಮವಾಗಿ ಬೆಲೆ ಏರಿಕೆಯಾಗಿದೆ ಡಂಕೆಲ್ ವರದಿಯಿಂದ ಬಿತ್ತುವ ಬೀಜಗಳು ಯಾವುವು ಎಂಬುದನ್ನು ಅಮೇರಿಕಾ ನಿರ್ಧರಿಸಬೇಕಾಗಿರುತ್ತದೆ ಎಂದು ಹೇಳಿದ ಅವರು ವರದಿಯನ್ನು ಕೂಡಲೇ ಕಿತ್ತೊಗೆಯುವಂತೆ ಸರಕಾರದ ಮೇಲೆ ಒತ್ತಡ ತರಬೇಕೆಂದು ಕರೆ ನೀಡಿದರು.

ರಾಮ ಮತ್ತು ಬಾಬರಿ ಮಸೀದಿಯ ಹೆಸರು ಹೇಳಿ ಕೆಲವು ಮತೀಯವಾದಿಗಳು ರೈತರ ಕಾರ್ಮಿಕರಲ್ಲಿ ಭಿನ್ನಾಭಿಪ್ರಾಯ ಮೂಡಿಸುತ್ತವೆ. ಇದನ್ನು ವಿರೋಧಿಸಿ ರೈತರು ಕಾರ್ಮಿಕರು ಒಗ್ಗಟ್ಟಾಗಿ ಕರಾಳಶಕ್ತಿಗಳಿಂದ ದೇಶವನ್ನು ಉಳಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಇನ್ನೊಬ್ಬ ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾಧ್ಯಕ್ಷರಾದ ಭಿಮಶಿ ಕಲಾದಗಿಯವರು ರೈತರನ್ನು ಉದ್ದೇಶಿಸಿ ಮಾತನಾಡುತ್ತ ರೈತರನ್ನು ಸಾವಿರಾರು ವರ್ಷಗಳಿಂದ ಭ್ರಷ್ಟ ರಾಜಕಾರಣಿಗಳು ಪಟ್ಟಬದ್ಧ ಹಿತಾಸಕ್ತಿಗಳು ಸರಕಾರಿ ನೌಕರದಾರರು ವ್ಯಾಪಾರಸ್ಥರು ಇವರೆಲ್ಲರು ತಳದಿಂದ ಮೇಲಟ್ಟದವರೆಗೆ ಸುಲಿಗೆ ಶೋಷಣೆಗೊಳಪಡಿಸಿ ದಬ್ಬಾಳಿಕೆ ಮಾಡುತ್ತಾ ಬಂದಿದ್ದಾರೆ. ಅನ್ನ ನೀಡುವ ರೈತರಿಗೆ ದ್ರೋಹ ಬಗೆದು ಕಡೆಗಣಿಸಿದ್ದಾರೆ. ಆದ ಕಾರಣ ರೈತರು ಜಾತಿ ಮತ ಪಂಥ ಬಿಟ್ಟು ಈ ಹೇಯ ವ್ಯವಸ್ಥೆಯ ವಿರುದ್ಧ ಸಂಘಟಿತರಾಗಿ ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವದಲ್ಲಿ ಮುಂದಾಗಬೇಕೆಂದು ಕರೆ ಕೊಟ್ಟರು. ಸಭೆಯಲ್ಲಿ ಎಂ.ಬಿ. ಗುಗ್ಗರಿ, ಮುಂತಾದವರು ಉಪಸ್ಥಿತರಿದ್ದರು.

ಅಡಿಹುಡಿ ರೈತರಿಂದ ರಸ್ತೆ ತಡೆ

ಅಡಿಹುಡಿ: ಫೆಬ್ರವರಿ 1,93 ರಂದು ಮುಂಜಾನೆ 6 ಗಂಟೆಗೆ ಅಡಿಹುಡಿ ಗ್ರಾಮದ ರೈತ ಸಂಘದ ಘಟಕವು ಗ್ರಾಮದ ಹನ್ನೆರೆಡು ಬೇಡಿಕೆಗಳನ್ನು ಒತ್ತಾಯಿಸಿ ರಸ್ತೆ ಬಂದ್ ಚಳುವಳಿಯನ್ನು ನಡೆಸಿತು. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಬೇಡಿಕೆಗಳ ಒತ್ತಾಯಿಸಿ ಘೋಷಣೆ ಕೂಗುತ್ತಿದ್ದರು. ಹಸಿರು ಕಾರ್ಡ್, ಆಶ್ರಯ ಮನೆ, ಮುಂತಾದ ಬೇಡಿಕೆಗಳನ್ನು ಸರಕಾರದ ಮುಂದಿಟ್ಟಿದ್ದ ರೈತರು ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿ ತೊಲಗಲಿ ರೈತ ಕಾರ್ಮಿಕರಿಗೆ ಅಧಿಕಾರ ಕೊಡಿ ಮುಂತಾದ ಘೋಷಣೆಗಳನ್ನು ಕೂಗಿದರು.

ಮಧ್ಯಾಹ್ನ 2 ಗಂಟೆಗೆ ಜಮಖಂಡಿ ತಹಶೀಲದಾರರಾದ ಬಿ.ಡಿ.ಜ, ಆಡಳಿತಾಕಾರಿ ಜಿಲ್ಲಾ ಪರಿಷತ್ ಇಂಜಿನೀಯರ್ ಹಾಗೂ ಮಂಡಳ ಪಂಚಾಯತ ಕಾರ್ಯದರ್ಶಿ, ಕೆ. ಇ.ಬಿ. ಇಂಜಿನಿಯರ್ ಇವರೆಲ್ಲರು ಒಂದು ಪ್ರಾಂತ ರೈತ ಸಂಘದ ಹನ್ನೆರೆಡು ಬೇಡಿಕೆಗಳನ್ನು ಸಮಸ್ಯೆಗಳ ಬಗ್ಗೆ ಪರಿಹರಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟರು ಕುಡಿಯುವ ನೀರು ಬೋರ್‌ವೆಲ್ ಹಸಿರು ಕಾರ್ಡ್, ಆಶ್ರಯ ಮನೆಗಳು ದೋಭಿ ಗಾಟ, ಶರಾಬು ಅಂಗಡಿ ಎತ್ತಂಗಡಿ ಮಾಡುವುದು ಇವೇ ಮುಂತಾದ ಬೇಡಿಕೆಗಳನ್ನು ಶೀಘ್ರವೇ ಈಡೇರಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ.

ಸ್ಥಳೀಯ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮೂರು ಶರಾಬು ಅಂಗಡಿಯ ಮಾಲಿಕರನ್ನು ರೈತರ ಮಧ್ಯೆ ಕರೆಯಿಸಿ ಎರಡು ಕಿ.ಮಿ. ದೂರದಲ್ಲಿ ಅಂಗಡಿಯನ್ನು ಹಾಕಬೇಕೆಂದು ಒಪ್ಪಿಸಿದರು.

ಈ ಹೋರಾಟದಲ್ಲಿ ಪ್ರಾಂತ ರೈತ ಸಂಘ ಗ್ರಾಮ ಘಟಕದ ಅಧ್ಯಕ್ಷ ಭೀಮಶಿ ಕೊಟ್ಯಾಳದ, ರೆಪ್ಪ ಗುಗ್ಗರಿ, ಕಾರ್ಯದರ್ಶಿ ಅಡಿಯಪ್ಪ ಹಾಗೂ ಸಿದ್ದರಾಯ, ರಾಜ್ಯ ಕಾರ್ಮಿಕ ಮುಖಂಡ ಎನ್.ಕೆ. ಉಪಾಧ್ಯಾಯ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕಿ ಅನಸೂಯಾ ಶಾನೆ, ಡಿ.ವೈ.ಎಫ್.ಐ. ಡಾ. ಪರಶುರಾಮ ಇಟಕರ ಮುಂತಾದವರು ಭಾಗವಹಿಸದರು.

ಸಮಾಜವಾದದಲ್ಲಿ ನೇಪಾಳೀಯರ ವಿಶ್ವಾಸವನ್ನು ತೋರಿದ

ನೇಪಾಳಿ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ

ನೇಪಾಳಿ ಕಮ್ಯುನಿಸ್ಟ್ ಪಕ್ಷ(ಐಕ್ಯ ಮಾರ್ಕ್ಸ್‌ವಾದಿ-ಲೆನಿನ್‌ವಾದಿ)ದ ಮಹಾಧಿವೇಶನ ಜನವರಿ 27ರಿಂದ ಫೆಬ್ರವರಿ 2ರವರೆಗೆ ಜರುಗಿತು. ರಾಜಧಾನಿ ಖಾಟ್‌ಮಂಡುವಿನಲ್ಲಿ. ಹಿಮಾಲಯದ ತಪ್ಪಲಲ್ಲಿರುವ ಈ ಸಣ್ಣ ದೇಶದ ಬಡಜನರು, ಮಾರ್ಕ್ಸ್‌ವಾದ ಮತ್ತು ಸಮಾಜವಾದದಲ್ಲಿ ಇಟ್ಟಿರುವ ವಿಶ್ವಾಸದ ದ್ಯೋತಕವಾಗಿತ್ತು ಈ ಮಹಾಧಿವೇಶನ.

ಮಹಾಧಿವೇಶನದ ಉದ್ಘಾಟನೆ ಸಂದರ್ಭದಲ್ಲಿ ಖಾಟಮಂಡು ಹಿಂದೆಂದೂ ಕಾಣದಿದ್ದ ಭಾರಿ ರ್‍ಯಾಲಿ ನಡೆಯಿತು. ಸುಮಾರು 60 ಸಾವಿರ ಜನ ಇದ್ದ ರ್‍ಯಾಲಿ ನೇಪಾಳದ ದೃಷ್ಟಿಯಿಂದ ಅತಿ ದೊಡ್ಡ ರ್‍ಯಾಲಿ ಎಂದೇ ಹೇಳಬೇಕು. ದುರ್ಗಮ ರಸ್ತೆಗಳನ್ನು ಹೊಂದಿದ ಈ ಪುಟ್ಟ ದೇಶದಲ್ಲಿ ಇದು ದೊಡ್ಡ ರ್‍ಯಾಲಿ ಎಂದೇ ಪರಿಗಣಿತವಾಗುತ್ತದೆ.

ಉದ್ಘಾಟನಾ ರ್‍ಯಾಲಿಗೂ, ಮಹಾಧಿವೇಶನಕ್ಕೂ ಹಲವಾರು ಸೋದರ ಪಕ್ಷಗಳನ್ನು ಆಹ್ವಾನಿಸಲಾಗಿತ್ತು. ಚೀನಾ, ಕೊರಿಯಾ, ಬಾಂಗ್ಲಾದೇಶ, ದೆಲ್ಲಿಯಂತ ಕಮ್ಯುನಿಸ್ಟ್ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು. ಭಾರತದಿಂದ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಐಪಿಎಫ್ ಅಲ್ಲದೆ ಕಾಂಗ್ರೆಸ್, ಸಮಾಜವಾದಿ ಜನತಾಪಕ್ಷ, ಜನತಾದಳದ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು. ಸಿಪಿಐ(ಎಂ) ಪರವಾಗಿ ಪಾಲಿಟ್ ಬ್ಯೂರೋ ಸದಸ್ಯರುಗಳಾದ ಕಾಂ.ಸುರ್ಜಿತ್, ಸೀತಾರಾಂ ಯೆಚೂರಿ ಭಾಗವಹಿಸಿದ್ದರು.

36 ಸಾವಿರ ಸದಸ್ಯತ್ವ ಹೊಂದಿರುವ ನೇಪಾಳಿ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನದಲ್ಲಿ 850 ಪ್ರತಿನಿಧಿಗಳು ಮತ್ತು 150 ವೀಕ್ಷಕರು ಭಾಗವಹಿಸಿದ್ದರು. ನೇಪಾಳದ ಕಾಂಗ್ರೆಸ್ ಪಕ್ಷವನ್ನು ಮಹಾಧಿವೇಶನಕ್ಕೆ ಆಹ್ವಾನಿಸಲಾಗಿತ್ತು.

ಕಾಂ.ಸುರ್ಜಿತ್ ಮಹಾಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ರ್‍ಯಾಲಿಗೆ ಸೇರಿದ್ದ ಜನತೆ 'ಕಮ್ಯುನಿಸಂ ಸತ್ತಿದೆ' ಎಂಬ ಪ್ರಚಾರದ ಪೊಳ್ಳುತನವನ್ನು ಬಯಲುಪಡಿಸಿದೆ. ಸಮಾಜವಾದಕ್ಕಾಗಿ ಹೋರಾಡುವ ನೇಪಾಳಿ ದುಡಿಯುವ ಜನತೆಯ ದೃಢ ಸಂಕಲ್ಪವನ್ನು ತೋರಿಸಿಕೊಟ್ಟಿದೆ. ನೇಪಾಳಿ ಕಮ್ಯುನಿಸ್ಟ್ ಪಕ್ಷದ ಜನಬೆಂಬಲ ದೊಡ್ಡ ಪ್ರಮಾಣದಲ್ಲಿ ಹೆಚ್ಚಲು ಎರಡು ಚಾರಿತ್ರಿಕ ಕಾರಣಗಳಿವೆ ಎಂದು ಸುರ್ಜಿತ್ ವಿಶ್ಲೇಷಿಸಿದರು. ಒಂದನೆಯದಾಗಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಪುನಃಸ್ಥಾಪನೆಗೆ ನೇಪಾಳಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರು ನಡೆಸಿದ ಜಂಟಿ ಹೋರಾಟ.

ಎರಡನೆಯದಾಗಿ, ನೇಪಾಳದ ಹಲವು ಕಮ್ಯುನಿಸ್ಟ್ ಗುಂಪುಗಳು ಸಾಧಿಸಿದ ಐಕ್ಯತೆ. ಇವೆರಡರಲ್ಲೂ ತಾವು ಮತ್ತು ತಮ್ಮ ಪಕ್ಷ ಸಿಪಿಐ(ಎಂ) ಸಲ್ಲಿಸಿದ ನಮ್ರ ಕೊಡುಗೆಯನ್ನು ನೆನಪಿಸಿಕೊಂಡು ಮೂರನೇ ಜಗತ್ತಿನ ದೇಶಗಳು ಆರ್ಥಿಕ ಸಹಕಾರಕ್ಕಾಗಿ ಮತ್ತು ಸಾಮ್ರಾಜ್ಯಶಾಹಿ ಒತ್ತಡ ಎದುರಿಸಲು ಐಕ್ಯಮತ್ಯ ಸಾಧಿಸಬೇಕೆಂದು ಅವರು ಕರೆಯಿತ್ತರು. ಇಂತಹ ಸಂದರ್ಭದಲ್ಲಿ ಕಮ್ಯುನಿಸ್ಟ ಪಕ್ಷಗಳ ವಿಶಿಷ್ಟ ಪಾತ್ರದ ಬಗ್ಗೆ ಗಮನ ಸೆಳೆದರು.

ಇರಾಕ್‌ನ ಆರ್ಥಿಕ ಚೇತರಿಕೆ

ಆರ್ಥಿಕ ದಿಗ್ಬಂಧನ, ಸದ್ದಾಂ ಹುಸೇನ್ ಸರಕಾರ ಉರುಳಿಸಲು ಅಮೇರಿಕ ಮತ್ತಿತರ ಪಾಶ್ಚಿಮಾತ್ಯ ದೇಶಗಳು ಮಸಲತ್ತು ನಡೆಸುತ್ತಿದ್ದಾಗ್ಯೂ ಕೊಲ್ಲಿ ಯುದ್ಧದ ಎರಡು ವರ್ಷಗಳ ನಂತರ ಇರಾಕ್ ಆರ್ಥಿಕವಾಗಿ ಹೆಚ್ಚು ಕಡಿಮೆ ಪೂರ್ತಿಯಾಗಿ ಚೇತರಿಕೆ ತೋರಿಸುತ್ತಿದೆ.

ಇರಾಕ್ ಯುದ್ಧದಲ್ಲಿ ನಾಶವಾಗಿದ್ದ ಹೆಚ್ಚು ಕಡಿಮೆ ಎಲ್ಲಾ 134 ಸೇತುವೆಗಳನ್ನು ಮೂರು ನಿರ್ಮಿಸಿದೆ. ಯುದ್ಧದಲ್ಲಿ ನಷ್ಟವಾಗಿದ್ದ ಹೆಚ್ಚಿನ ರಸ್ತೆಗಳು, ರೈಲ್ವೇದಾರಿಗಳು, ವಿದ್ಯುತ್ ಪೂರೈಕೆ ಗ್ರಿಡ್‌ಗಳು, ದೂರ ಸಂಚಾರ ಮತ್ತು ಪ್ರಸಾರ ಮಾಧ್ಯಮಗಳನ್ನು ಪುನಃಸ್ಥಾಪಿಸಲಾಗಿದೆ.

ಯುದ್ಧಾನಂತರದ ಚೇತರಿಕೆಯ ಅತ್ಯಂತ ಸಮರ್ಥ ಪ್ರತೀಕವೆಂದರೆ, ಮೂರನೆಯ ನದಿ-ಇದು ಇರಾಕಿನ ಪ್ರಮುಖ ನದಿಗಳಾದ ಯುಫ್ರೆಟಿಸ್ ಮತ್ತು ಟೈಗ್ರಿಸ್ ನಡುವಣ 565 ಕಿ.ಮೀ. ಉದ್ದದ ಕಾಲುವೆ. ಕಳೆದ ಒಂದು ವರ್ಷದಲ್ಲಿ ಇರಾಕಿ ಜನ ಈ ಕಾಲುವೆ ಕಟ್ಟಲು ಹಗಲು-ರಾತ್ರಿ ದುಡಿಯುತ್ತಿದ್ದಾರೆ. ಈ ಕಾಲುವೆಯಿಂದಾಗಿ ಸುಮಾರು 3-4 ದಶಲಕ್ಷ ಎಕ್ರೆಯಷ್ಟು ಲವಣ ನೀರನ್ನು ಖಾಲಿ ಮಾಡಿ, ಅದನ್ನು ಕೃಷಿಯೋಗ್ಯ ಮಾಡುತ್ತದೆ.

ಆರ್ಥಿಕ ದಿಗ್ಬಂಧನದಿಂದ ಉಂಟಾಗಿರುವ ಆಹಾರ ಕೊರತೆಯಿಂದ ಸರಕಾರ ರೇಶನ್ ವ್ಯವಸ್ಥೆ ಜಾರಿಗೆ ತಂದಿತ್ತು. ಇತ್ತೀಚೆಗೆ ರೇಶನ್‌ನಲ್ಲಿ ಶೇಕಡಾ 20 ಪೂರೈಕೆ ಹೆಚ್ಚಿಸಿದ್ದು, ಸರಕಾರ ನೌಕರರಿಗೆ ವೇತನ ಏರಿಕೆ, ಸಣ್ಣ ಮಕ್ಕಳಿರುವ ಕುಟುಂಬಗಳಿಗೆ ಹೆಚ್ಚಿನ ನೆರವು- ಇದು ಆರ್ಥಿಕ ಚೇತರಿಕೆಯ ಲಕ್ಷಣಗಳೇ.

ಹೀಗೆ ಆತ್ಮಗೌರವ ಕಳೆದುಕೊಳ್ಳದೆ, ಜನರನ್ನು ಅಣಿನೆರೆಸುವ ಮೂಲಕ ಆರ್ಥಿಕ ದಿಗ್ಬಂಧನದಿಂದ ಉಂಟಾದ ಸಂಕಷ್ಟಗಳನ್ನು ಇರಾಕ್ ಎದುರಿಸುತ್ತಿದೆ.

ಮ್ಯಾಸ್‌ಟ್ರಿಕ್ಸ್ ಒಪ್ಪಂದದ ಬಗ್ಗೆ ಚರ್ಚೆ ಮುಂದಕ್ಕೆ

ಸೋಲಾಗುವ ಸಂಭವವಿರುವುದರಿಂದ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮ್ಯಾಸ್‌ಟ್ರಿಕ್ಸ್ ಒಪ್ಪಂದದ ಬಗ್ಗೆ ನಡೆಯಬೇಕಾದ ಚರ್ಚೆಯನ್ನು ಜಾನ್ ಮೇಜರ್ ಸರಕಾರ ಮುಂದಕ್ಕೆ ಹಾಕಿದೆ. ನಿಕಟ ರಾಜಕೀಯ, ಆರ್ಥಿಕ ಮತ್ತು ಹಣಕಾಸಿನ ಐಕ್ಯತೆ ಸಾಧಿಸಬಯಸುವ ಮ್ಯಾಸ್‌ಟ್ರಿಕ್ಸ್ ಒಪ್ಪಂದವನ್ನು ಬ್ರಿಟಿಷ್ ಪಾರ್ಲಿಮೆಂಟು ಚರ್ಚಿಸಿ ಒಪ್ಪಿಗೆ ನೀಡಬೇಕಾಗಿದೆ. ಆಳುವ ಟೋರಿ ಪಕ್ಷದಲ್ಲೇ, ಥ್ಯಾಚರ ಬಣದ ಇದಕ್ಕೆ ತೀವ್ರವಾಗಿ ವಿರೋಧಿಸಿದ್ದರಿಂದ ಸರಕಾರಕ್ಕೆ ಈ ಭಯ ಉಂಟಾಗಿದೆ.

ಮಾಜಿ ಸೈನ್ಯಾಧಿಪತಿ ಮೇಲೆ ಕೋರ್ಟು ನಿಂದನೆ ಆಪಾದನೆ

ಪಾಕಿಸ್ತಾನದ ಮಾಜಿ ಸೇನಾಧಿಪತಿ ಜನರಲ್ ಮಿರ್ಜಾ ಅಸ್ಲಾಂ ಬೇಗ್ ನೀಡಿದ ಒಂದು ಹೇಳಿಕೆ ಅವರನ್ನು ಪೇಚಿಗೆ ಸಿಲುಕಿಸಿದೆ. ಕೋರ್ಟು ನಿಂದನೆ ಮೊಕದ್ದಮೆ ಎದುರಿಸಲು ಹಾಜರಾಗಬೇಕೆಂದು ಪಾಕಿಸ್ತಾನದ ಸುಪ್ರಿಂ ಕೋರ್ಟ್ ಆಜ್ಞಾಪಿಸಿದೆ.

ಪ್ರಧಾನ ಮಂತ್ರಿ ಜುನೆಜೋ ಸರಕಾರವನ್ನು ವಜಾ ಮಾಡಿದ್ದನ್ನು ಪುನಃಸ್ಥಾಪಿಸುವ ಸುಪ್ರಿಂ ಕೋರ್ಟ್ ತೀರ್ಪನ್ನು ತಾನು ತಡೆಹಿಡಿದಿದ್ದೆ ಎಂದು ಜನರಲ್ ಅಸ್ಲಾಂ ಬೇಗ್ ಹೇಳಿಕೆ ನೀಡಿದ್ದರು.

ಲೋಕ ಸಮಾಚಾರ

ಅಮೇರಿಕನ್ ನಿರ್ಧಾರಕ್ಕೆ ಗೋಣು ಆಡಿಸಿದ ಭದ್ರತಾ ಸಮಿತಿ

ಇಸ್ರೇಲ್ ತೆಗೆದುಕೊಂಡ ಅರೆಬರೆ ಕ್ರಮಗಳಿಂದ ಅಮೇರಿಕಕ್ಕೆ ಆ ದೇಶ ಪ್ಯಾಲೇಸ್ತೀನ್ನರನ್ನು ದೇಶದಿಂದ ಹೊರಗಟ್ಟಿದ ಬಿಕ್ಕಟ್ಟು ಪರಿಸ್ಥಿತಿ ಪರಿಹಾರಗೊಳಿಸುವುದಕ್ಕೆ ಬೇಕಾದ ಕ್ರಮ ಕೈಗೊಳ್ಳುವುದು ಎಂಬ ಭರವಸೆ ಉಂಟಾಗಿದೆಯಂತೆ. ಅಮೇರಿಕಕ್ಕೆ ಭರವಸೆ ಮೂಡಿದ ಮೇಲೆ ಭದ್ರತಾ ಸಮಿತಿ ಗೋಣು ಆಡಿಸಬೇಕಲ್ಲವೇ? ಅದೇ ಆಗಿರುವುದು.

ಅಮೇರಿಕ ಇಸ್ರೇಲ್‌ನ ವಿರುದ್ಧ ಭದ್ರತಾ ಸಮಿತಿ ತೆಗೆದುಕೊಂಡಿರುವ ನಿರ್ಣಯ 795 ಬಗ್ಗೆ ಭದ್ರತಾ ಸಮಿತಿ ಚರ್ಚಿಸದಂತೆ ನೋಡಿಕೊಂಡಿದೆ. ಭದ್ರತಾ ಸಮಿತಿಯ ಅಧ್ಯಕ್ಷ ಸರ್ವಾನುಮತದ ನಿರ್ಣಯ ಓದುವುದನ್ನು ಅಮೇರಿಕ ನಿಲ್ಲಿಸಿತು. ಯಾಕೆಂದರೆ ಯಾವುದೇ ರೂಪದಲ್ಲಿ ಭದ್ರತಾ ಸಮಿತಿ ಚರ್ಚಿಸಿದರೆ ಇಸ್ರೇಲ್‌ಗೆ ಛೀಮಾರಿ ಅಥವಾ ಆರ್ಥಿಕ ದಿಗ್ಬಂಧನ ಖಚಿತವಾಗಿದೆ. ಆದ್ದರಿಂದ ಈ ಸರ್ಕಸ್!

ಇಂಡಿ ರೈತರ ಬೇಡಿಕೆ ಪಟ್ಟಿ

ಇಂಡಿ : ಕರ್ನಾಟಕ ಪ್ರಾಂತ ರೈತ ಸಂಘದ ಇಂಡಿ ತಾಲೂಕಾ ಘಟಕವು ಫೆಬ್ರವರಿ ಎರಡರಂದು ಸೋಮಣ್ಣಾ ಮೇತ್ರಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇಂಡಿ ತಾಲೂಕಿನ ಅನೇಕ ಸಮಸ್ಯೆಗಳನ್ನು ಕುರಿತು ದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಂಡಿತು.

ಅಲಮಟ್ಟಿ ಅಣೆಕಟ್ಟು, ಕೃಷ್ಣಾ ಎಡದಂಡೆ ಕಾಲುವೆ, ಮುಳವಾಡ ಯಾತ ನೀರಾವರಿ ಯೋಜನೆಗಳನ್ನು 2 ಸಾವಿರ ಇಸವಿಯಲ್ಲಿ ಬಚಾವತ್‌ವರದಿಯ ಪ್ರಕಾರ ಮುಗಿಸಬೇಕು. ಭೀಮಾನದಿ ಬಾಂದರವನ್ನು ತೀವ್ರವಾಗಿ ಮುಗಿಸಿ ರೈತರ ಭೂಮಿಗೆ ಹಾಗೂ ಇಂಡಿ ನಗರಕ್ಕೆ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು. ಕಡ್ನಿ ಬ್ಯಾರೇಜ್ ರಿಪೇರಿ ಮಾಡಿಸಬೇಕು ಮತ್ತು ಭೀಮಾಶಂಕರ ಸಕ್ಕರೆ ಕಾರ್ಖಾನೆಯನ್ನು ಕೂಡಲೇ ಪ್ರಾರಂಭಿಸಬೇಕು ಬಿಳಿಜೋಳ, ಹತ್ತಿ, ತೊಗರಿ, ಮುಂತಾದ ಬೆಳೆಗಳು ಕ್ರಿಮಿಕೀಟಗಳಿಂದ ನಾಶವಾಗಿದ್ದು ಸಂತ್ರಸ್ತ ರೈತರನ್ನು ಗುರುತಿಸಿ ಪರಿಹಾರ ಧನ ಕೊಡಬೇಕು. ಕೆ.ಇ.ಬಿ.ಯಲ್ಲಿ ಭ್ರಷ್ಟಚಾರ ನಡೆದಿದ್ದು ಪಂಪ್ ಸೆಟ್ಟಿಗೆ ವಿದ್ಯುತ್ ಕಡಿತ ಮಾಡಿದ್ದಾರೆ. ಬರದ ಕಾರಣ ಹಿಂದಿನ ಬಾಕಿಯನ್ನು ಮನ್ನಾ ಮಾಡುವದರ ಜೊತೆಗೆ ವಿದ್ಯುತ್ ಸರಿಯಾಗಿ ಪೂರೈಸಬೇಕು. ಸಬ್ ರಿಜಿಸ್ಟ್ರಾರ್ ಭ್ರಷ್ಟಾಚಾರ ಮಿತಿ ಮೀರಿದ್ದು ಅದನ್ನು ತನಿಖೆ ಯೋಗ್ಯ ಕ್ರಮ ಕೈಕೊಳ್ಳಬೇಕು. ನ್ಯಾಯಬೆಲೆ ಅಂಗಡಿಯಲ್ಲಿ ಬೆಲೆ ಏರಿಕೆ ಇಳಿಸಿ ಅಲ್ಲಿ ನಡೆಯುವ ಅವ್ಯವಹಾರ ತಡೆಗಟ್ಟಬೇಕು.

ಸಭೆಯಲ್ಲಿ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಪಿ.ಎಲ್. ಬನಪಟ್ಟಿ ಅಪ್ಪ ಪರಿಟ, ಶ್ರೀ ಶೈಲ ಗಬ್ಬೂರ, ಉಪಸ್ಥಿತರಿದ್ದು ಜಿಲ್ಲಾ ಅಧ್ಯಕ್ಷರಾದ ಭೀಮಶಿ ಕಲಾದಗಿ ಯವರು ಮಾರ್ಗದರ್ಶನ ಮಾಡಿದರು.

ಪ್ರಯಾಣ ದರ ಏರಿಕೆಗೆ ಖಂಡನೆ

ಬಳ್ಳಾರಿ : ಕರ್ನಾಟಕ ರಾಜ್ಯ ಸರ್ಕಾರ ಬಸ್ ಪ್ರಯಾಣದರವನ್ನು ಶೇ. 25 ರಷ್ಟು ಏರಿಕೆ ಮಾಡಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಳ್ಳಾರಿ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಫೆಬ್ರವರಿ ಎರಡರಂದು ಪಕ್ಷದ ಕಛೇರಿಯಲ್ಲಿ ಸೇರಿದ್ದ ಸರ್ವಸದಸ್ಯರ ಹಾಗೂ ಹಿತೈಷಿಗಳ ಸಭೆಯು ಬಲವಾಗಿ ಖಂಡಿಸಿತು. ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಆದಾಯ ಸೋರುತ್ತಿರುವುದನ್ನು ತಡೆಗಟ್ಟಲು ವಿಫಲವಾದ ಸರ್ಕಾರ ಜನರ ಮೇಲೆ ಭಾರವನ್ನು ಹೊರಿಸುತ್ತಿದೆ. ಈ ಬೆಲೆಯೇರಿಕೆ ಜನರು ಭರಿಸಲಾರದಷ್ಟಾಗಿದೆಯೆಂದು ಸಭೆ ಹೇಳಿದೆಯಲ್ಲದೇ, ಕೂಡಲೇ ಬೆಲೆ ಏರಿಕೆಯನ್ನು ವಾಪಾಸು ಪಡೆಯಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಂಡಿತು.

ಕೋಮು ಸೌಹಾರ್ದತೆ ಕಾಪಾಡಲು ಹಾಗೂ ದೇಶದ ಸಮಗ್ರತೆ, ಐಕ್ಯತೆ ಕಾಪಾಡಲು, ಜಾತ್ಯತೀತೆಯನ್ನು ಎತ್ತಿ ಹಿಡಿಯಲು ಸಭೆಯು ಒಕ್ಕೊರಲಿನಿಂದ ಪ್ರತಿಜ್ಞೆ ಸ್ವೀಕರಿಸಿತು. "ರಾಷ್ಟ್ರೀಯ ಏಕತಾ ಆಂದೋಳನಾ" ಸಮಿತಿಯ ತೀರ್ಮಾನದಂತೆ ಬಳ್ಳಾರಿ ನಗರದಲ್ಲಿ ಕೋಮುವಾದವನ್ನು ವಿರೋಧಿಸಿ ಕೋಮು ಸಾಮರಸ್ಯ ಕಾಪಾಡಲು, ಜಾತ್ಯತೀತತೆಯನ್ನು, ರಾಷ್ಟ್ರೀಯ ಸಮಗ್ರತೆ- ಐಕ್ಯತೆಯನ್ನು ಉಳಿಸಿ ಬೆಳೆಸಲು 10ಸಾವಿರದಷ್ಟು ಸಹಿ ಸಂಗ್ರಹಿಸಲು ತಂಡೋಪತಂಡವಾಗಿ ನಾಗರೀಕರ ಮನೆಗಳಿಗೆ ತೆರಳಲು ನಿರ್ಣಯ ಅಂಗೀಕರಿಸಿತು.

ಈ ಸಭೆಯಲ್ಲಿ ಡಿಸೆಂಬರ್ 6ರ ಮುಂಚಿನ ಹಾಗೂ ನಂತರದ ಇಲ್ಲಿವರೆಗೆ ಆದ ದೇಶದ ರಾಜಕೀಯ ಬೆಳವಣಿಗೆಗಳನ್ನು ಪರಿಶೀಲಿಸಿದ ಪಕ್ಷದ ಕೇಂದ್ರ ಸಮಿತಿ ವರದಿಯನ್ನು ಜಿಲಾ ಸಮಿತಿ ಕಾರ್ಯದರ್ಶಿ ಪ್ರಸನ್ನಕುಮಾರ್ ವಿವರಿಸಿದರು. ಮತೀಯವಾದದ ಅಪಾಯದ ಬಗ್ಗೆ ಪಕ್ಷದ ಸ್ಥಳೀಯ ಸಮಿತಿ ಕಾರ್ಯದರ್ಶಿ ಯು. ಬಸವರಾಜ್ ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ವಿ.ಬಿ. ಮಲ್ಲಿಕಾರ್ಜುನ ವಹಿಸಿದ್ದರು.

ಬ್ರಹ್ಮಾವರ ನಾಡಕಛೇರಿ ಎದುರು ಯುವಜನರ ಧರಣಿ ಮುಷ್ಕರ

ಬ್ರಹ್ಮಾವರ : ಉಡುಪಿ ತಾಲೂಕಿನ ಬ್ರಹ್ಮಾವರ ಸರಕಾರಿ ಆಸ್ಪತ್ರೆಯ ಅವ್ಯವಸ್ಥೆ, ಬ್ರಹ್ಮಾವರದ ಸರಕಾರಿ ಪ್ರೌಢಶಾಲೆಯಲ್ಲಿ ಅಧ್ಯಾಪಕರ ಕೊರತೆ, ಹಂದಾಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ರಸ್ತೆಯ ದುರವಸ್ಥೆ ಮತ್ತು ಹಂದಾಡಿ ಬಾರ್ಕೂರು ರಸ್ತೆಯ ಅವ್ಯವಸ್ಥೆ ಈ ಸಮಸ್ಯೆಗಳಿಗೆ ಶೀಘ್ರ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಸ್ಥಳೀಯ ಯುವಜನರು ಧರಣಿ ಮುಷ್ಕರ ನಡೆಸಿದರು.

ಜನವರಿ 30 ರಂದು ಬೆಳಿಗ್ಗೆ 10.30 ಕ್ಕೆ ಬ್ರಹ್ಮಾವರ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ಆಕಾಶವಾಣಿ ವೃತ್ತದ ಮೂಲಕ ಹಾದು ನಾಡಕಛೇರಿ ತಲುಪಿದ ಯುವಜನರು ಅಲ್ಲಿ ಧರಣಿ ನಡೆಸಿದರು. ಧರಣಿಯಲ್ಲಿ ಯುವಜನರೊಂದಿಗೆ ಸಾರ್ವಜನಿಕರು ಪಾಲ್ಗೊಂಡಿದ್ದರು. ಧರಣಿ ನಿರತರನ್ನುದ್ದೇಶಿಸಿ ಡಿ.ವೈ.ಎಫ್.ಐ. ತಾಲೂಕು ಸಮಿತಿ ಕಾರ್ಯದರ್ಶಿ ಪಿ. ವಿಶ್ವನಾಥ್ ಹಾಗೂ ಅಧ್ಯಕ್ಷರಾದ ಕೆ. ಪ್ರಭಾಕರ್ ಮಾತನಾಡಿದರು. ಗಾಂಧೀಜಿ ಹುತಾತ್ಮ ದಿನ ಪ್ರಯುಕ್ತ ಎರಡು ನಿಮಿಷಗಳ ಮೌನ ಆಚರಿಸಲಾಯಿತು. ಕೋಮು ಸೌಹಾರ್ದವನ್ನು ರಕ್ಷಿಸುವ ಬಗ್ಗೆ ರಾಷ್ಟ್ರೀಯ ಏಕತಾ ಆಂದೋಳನ ಅಂಗೀಕರಿಸಿದ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು. 434 ಸಹಿಗಳುಳ್ಳ ಮನವಿಯನ್ನು ಉಪತಹಶೀಲ್ದಾರರಿಗೆ ಅರ್ಪಿಸಿ ಶೀಘ್ರ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಯಿತು. ಘಟಕದ ಕಾರ್ಯದರ್ಶಿ ವಿಜಯ ಅಮಿನ್ ವಂದಿಸಿದರು.

ಡಿ.ವೈ.ಎಫ್.ಐ. ರಾಯಚೂರು ಜಿಲ್ಲಾ ಸಮ್ಮೇಳನ

ರಾಯಚೂರು : ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ 3 ನೇ ಜಿಲ್ಲಾ ಸಮ್ಮೇಳನ ದಿನಾಂಕ 23, 24 ರಂದು ಸಿಂಧನೂರಿನ ಎ.ಪಿ.ಎಂ.ಸಿ. ಸಭಾಂಗಣದಲ್ಲಿ ನಡೆಯಿತು. ದೊಡ್ಡನಗೌಡ ಪಾಲೂಕು ಜನತಾದಳ ಅಧ್ಯಕ್ಷ ಸಮ್ಮೇಳನವನ್ನು ಉದ್ಘಾಟಿಸಿದರು. ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ರಾಜಶೇಖರ ಪಾಟೀಲರು ಮತ್ತು ಎಸ್.ವೈ. ಗುರುಶಾಂತ್, (ಡಿ.ವೈ.ಎಫ್.ಐನ ರಾಜ್ಯ ಕಾರ್ಯದರ್ಶಿ) ಆಗಮಿಸಿದ್ದರು.

ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಬಂದ 84 ಪ್ರತಿನಿಧಿಗಳು ಭಾಗವಹಿಸಿದ್ದರು. ಎರಡು ದಿನ ನಡೆದ ಸಮ್ಮೇಳನವು ಸಂಘಟನೆಯ 3 ವರ್ಷದ ಚಟುವಟಿಕೆಗಳ ಕುರಿತು ಚರ್ಚಿಸಿತು. ಈ ಸಮ್ಮೇಳನವು ಡಿಸೆಂಬರ್ 6 ರಂದು ನಡೆದ ಬಾಬರಿ ಮಸೀದಿ ನೆಲಸಮಗೊಳಿಸಿದ ಕೃತ್ಯವನ್ನು ಖಂಡಿಸಿತು.

ಕೇಂದ್ರದ ಪಿ.ವಿ. ನರಸಿಂಹರಾವ್ ಸರಕಾರ ಹೊಸ ಆರ್ಥಿಕ ನೀತಿಯು ಯುವಜನರ ಪಾಲಿಗೆ ಶಾಪವಾಗಿದೆ. ಉದ್ಯೋಗಿಗಳನ್ನೇ ನಿರುದ್ಯೋಗಿಗಳಾಗಿಸುವ ಈ ಸರಕಾರದ ನೀತಿ ಯುವಜನರಿಗೆ ಉದ್ಯೋಗಾವಕಾಶ ನೀಡುವಲ್ಲಿ ವಿಫಲವಾಗಿದೆ. ಎಂದು ಸಮ್ಮೇಳನ ಟೀಕಿಸಿತು.

ಈ ಸಮ್ಮೇಳನ 19 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಗಂಗಾಧರ ಕುಷ್ಟಗಿ (ಅಧ್ಯಕ್ಷರು), ಶರಣ್ಣ ನಾಗಲಾಪೂರ, ವೆಂಕಟೇಶ ಹಿರಾ (ಉಪಾಧ್ಯಕ್ಷರು) ಸತ್ಯನಾರಾಯಣ (ಕಾರ್ಯದರ್ಶಿ) ಪರೀಫುದ್ದೀನ್, ರಾಜಬಾಗಿಲಿ (ಸಹಕಾರ್ಯದರ್ಶಿಗಳು,) ಗುರುಸ್ವಾಮಿ (ಖಜಾಂಚಿ) ಇನ್ನುಳಿದ ಜಿಲ್ಲಾ ಸಮಿತಿ ಸದಸ್ಯರು ಎಸ್.ಸಿದ್ದಪ್ಪ, ವಿಶ್ವನಾಥ ರವಿ ಸಾವಳಗಿ, ವಾಸುದೇವ, ಮೌಲಾ ಹುಸೇನ್, ಶರಣಪ್ಪ ಹುಬ್ಬಳ್ಳಿ, ಅಬ್ದುಲ್ ಘನಿ, ಹನುಮಂತಪ್ಪ ಅಕ್ಕರಕಿ, ಡಿ. ರಮೇಶ್ ಸುಬಾನ ನಾರಾಯಣ ಕಿಲ್ಲೇದ, ಅಶೋಕಗೌಡ.

ವಿಜಯನಗರ ಉಕ್ಕಿನ ಕಾರ್ಖಾನೆ ಆರಂಭಗೊಳಿಸಬೇಕು. ಕೋಮು ಸೌಹಾರ್ದ ಮತ್ತು ಶಾಂತಿಗಾಗಿ ಶ್ರಮಿಸುವುದು. ಗದ್ವಾಲ ಕೊಪ್ಪಳ ರೈಲು ಮಾರ್ಗ ಆರಂಭಿಸಬೇಕು. ಪೆಂದಲಿ ಚಿನ್ನದ ಗಣಿ ಆರಂಬಿಸಬೇಕು. ಒಪೆಕ್ ಆಸ್ಪತ್ರೆ ಕೂಡಲೇ ಆರಂಭಿಸಬೇಕು. ನೆರೆಹಾವಳಿಯಲ್ಲಿ ಸಂತ್ರಸ್ತರಿಗೆ ತೀವ್ರಗತಿಯಲ್ಲಿ ಪರಿಹಾರ ನೀಡಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕ್ರೀಡಾಂಗಣ ವ್ಯವಸ್ಥೆ ಮಾಡಬೇಕು. ಜಿಲ್ಲೆಯಲ್ಲಿ ರಸ್ತೆಗಳಿಗೆ ಡಾಂಬರೀಕರಣ ಮಾಡಿಸಬೇಕು, ಮುಂತಾದ ಪ್ರಮುಖ ಗೊತ್ತುವಳಿಗಳನ್ನು ಸಮ್ಮೇಳನ ಅಂಗೀಕರಿಸಿತು.

ದೇಶದ ಏಕತೆ ಎತ್ತಿ ಹಿಡಿಯಲು ಯುವಜನರಿಗೆ ಕರೆ

ಮಾಡೂರು : ವಿವಿಧ ಭಾಷೆ, ಜಾತಿ, ಜನಾಂಗ, ರಾಜ್ಯಗಳನ್ನು ಹೊಂದಿರುವಂತಹ ದೇಶ ವಿವಿಧತೆಯಿಂದ ಕೂಡಿದ್ದು, ಜಾತ್ಯಾತೀತತೆಯ ನೆಲೆಯಲ್ಲಿ ಏಕತೆಯನ್ನು ಪಡೆದಿದೆ. ಯುವಜನತೆ ಸ್ವಾತಂತ್ರ್ಯ ಪೂರ್ವದಲ್ಲಿ ತ್ಯಾಗ, ಬಲಿದಾನದ ಮುಖಾಂತರ ದೇಶವನ್ನು ಕಟ್ಟಿದ್ದು, ಆ ಮೌಲ್ಯಗಳನ್ನು ಎತ್ತಿ ಹಿಡಿದು ಯುವಜನತೆ ದೇಶದ ಸಮಗ್ರತೆ ಏಕತೆಯನ್ನು ರಕ್ಷಿಸಬೇಕೆಂದು ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾ(ಬೀಇಎಫ್ಐ) ನಾಯಕ ಸುಕುಮಾರ್ ಯುವಜನತೆಗೆ ಕರೆ ನೀಡಿದ್ದಾರೆ. ಅವರು ತಾ. 7.2.93ರಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿವೈಎಫ್ಐ ಮಾಡೂರು ಘಟಕವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು. ಸಮಾರಂಭದ ಅತಿಥಿಯಾಗಿ ಭಾಗವಹಿಸಿದ ಸ್ಥಳೀಯ ಶಾಂತಿ ಸಮಿತಿ ಸದಸ್ಯರಾದ ಆಲ್ಬರ್ಟ್ ಮಸ್ಕರೇನ್ಸಸ್ ಮಾತನಾಡುತ್ತಾ ಯುವಜನತೆ ಡಿವೈಎಫ್ಐ ನೇತೃತ್ವದಲ್ಲಿ ಜನರಲ್ಲಿ ಸಮಾಜ ಸೇವೆಯ ಪ್ರಜ್ಞೆಯನ್ನು ಬೆಳೆಸುತ್ತಾ, ಜಾತಿ ಭೇದವಿಲ್ಲದೆ ಬೆರೆತು ಕೋಮು ಸೌಹಾರ್ದತೆಯನ್ನು ಪ್ರದರ್ಶಿಸಬೇಕು, ಹೋರಾಡಬೇಕು ಎಂದರು.

ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷರಾದ ವಸಂತ ಆಚಾರಿ, ಡಿವೈಎಫ್ಐ ಮಾಡೂರು ಘಟಕದ ಉದ್ಘಾಟನಾ ಸಮಾರಂಭಕ್ಕೆ ಶುಭ ಕೋರಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಮುದಾಯ ಮಂಗಳೂರು ಇದರ ಕಾರ್ಯದರ್ಶಿ ಫಣಿರಾಜ್ ಭಾರತ ದೇಶ ಎಂದೂ ಒಂದೇ ಧರ್ಮ, ಜಾತಿ ಎಂಬ ನೆಲೆಯಿಂದ ಬೆಳೆದು ಬಂದಿರಲಿಲ್ಲ. ಹಲವಾರು ಜಾತಿ, ಭಾಷೆ, ಧರ್ಮ, ನಂಬಿಕೆ, ಆಚಾರ ವಿಚಾರಗಳನ್ನು ಹೊಂದಿದ್ದು ಬಹಳ ಸಂಕೀರ್ಣತೆಯಿಂದ ಕೂಡಿದೆ. ಜಾತ್ಯಾತೀತತೆಯೊಂದೇ ದೇಶವನ್ನು ಏಕತೆಯೆಡೆಗೆ ಕೊಂಡೊಯ್ಯುತ್ತಿದೆ. ಅದನ್ನು ಎತ್ತಿ ಹಿಡಿಯುವುದೇ ನಮ್ಮೆಲ್ಲರ ಧರ್ಮವಾಗಬೇಕು ಎಂದು ಅಭಿಪ್ರಾಯಪಟ್ಟರು.

ಸಮುದಾಯ ತಂಡದ ರಾಮದಾಸ್ ಅವರು ಪ್ರಾರಂಭ ಗೀತೆ ಹಾಡಿದರು. ಸಮಾರಂಭದ ನಂತರ ಜನವಿಜ್ಞಾನ ಜಾಥಾ ಸಮಿತಿಯ ಸಂಜೀವ ಬಳ್ಕೂರ್‌ರವರಿಂದ 'ಪವಾಡಗಳ ರಹಸ್ಯ ಬಯಲು' ಕಾರ್ಯಕ್ರಮ ಇತ್ತು. ಸಿರಾಜ್ ಸ್ವಾಗತಿಸಿ ರಿಝ್ವಾನ್ ವಂದಿಸಿದರು.

KRNM/BGS - 405 MAG[S] PRB DECR 319 - 78/79

ಕಾರ್ಮಿಕ ಆಂದೋಲನ: ....

ಪುಟ 2ರಿಂದ

ಮೊದಲನೆಯದಾಗಿ, ಕೆಲವು ಮುಂದುವರಿದ ರಾಜ್ಯಗಳಲ್ಲಿ, ಕೆಲವು ಮುಂದುವರಿದ ಕೇಂದ್ರಗಳಲ್ಲಿ ನಾವು ಯಶಸ್ವಿಯಾಗಿದ್ದರೂ, ನಮ್ಮ ಆಂದೋಲನ ಒಟ್ಟಾರೆಯಾಗಿ ಹಿಂದುಳಿದೇ ಇದೆ, ಅಸಮರ್ಪಕವಾಗಿಯೇ ಇದೆ. ಕೇರಳ ಮತ್ತು ಪಶ್ಚಿಮ ಬಂಗಾಳ ಉದಾಹರಣೆಗಳನ್ನು ನೀಡಿದ್ದೇವೆ. ಕೈಗಾರಿಕೇತರ ಕಾರ್ಮಿಕರ, ಸಾಂಪ್ರದಾಯಿಕ ಕೈಗಾರಿಕೆಗಳ ಕಾರ್ಮಿಕರ ಹೋರಾಟಗಳಿಂದ ಹೇಗೆ ಕಾರಮಿಕರ ಕೂಲಿಯ ಮಟ್ಟ ಏರಿದೆ, ಅದಕ್ಕನುಗುಣವಾಗಿ ಸಾಮಾಜಿಕ ಬೆಳವಣಿಗೆಯಾಗಿದೆ ಎಂದು ಕೇರಳದ ಉದಾಹರಣೆ ತೋರಿಸಿಕೊಟ್ಟರೆ ಪಶ್ಚಿಮ ಬಂಗಾಳದ ಉದಾಹರಣೆ ಸಂಘಟಿತ ಕಾರ್ಮಿಕರ ಶಕ್ತಿ ಹೇಗೆ ಪ್ರಜಾಪ್ರಭುತ್ವ ಆಂದೋಲನವನ್ನು ಮುಂದೊಯ್ದಿದೆ ಎಂದು ತೋರಿಸಿಕೊಟ್ಟು ನಮ್ಮ ಯಶಸ್ಸಿನ ಇನ್ನೊಂದು ಆಯಾಮವನ್ನು ತೋರಿಸಿದೆ.

ಎರಡನೆಯದಾಗಿ, ಕರ್ನಾಟಕದಂತಹ ರಾಜ್ಯಗಳ ಆಂದೋಲನವೂ ಮುಂಬೈ ಮತ್ತು ಪಶ್ಚಿಮ ಭಾರತದ ಆಂದೋಲನದ ಅನುಭವವೂ ನಮ್ಮ ಮುಂದಿದೆ. ಈ ಪ್ರದೇಶ ಕೈಗಾರಿಕಾ ದೃಷ್ಟಿಯಿಂದ ಬೆಳೆದಿದೆ. ಇಲ್ಲಿಯ ಉತ್ಪಾದನೆ ಹಾಗೂ ಉತ್ಪಾದಕತೆ ಕೂಡಾ ಅಖಿಲ ಭಾರತ ಮಟ್ಟದಲ್ಲಿ ಹೆಚ್ಚಿದೆ. ಬೇರೆಡೆ ಹೋಲಿಸಿದರೆ ದೊಡ್ಡ ಉದ್ದಿಮೆಗಳಲ್ಲಿ ವೇತನ ಮಟ್ಟವೂ ಹೆಚ್ಚಿದೆ. ಆದರೆ ನಮ್ಮ ಆಂದೋಲನಕ್ಕೆ ತೊಂದರೆಯಾಗಿದೆ. ಈ ಪ್ರದೇಶದಲ್ಲಿ ನಾವು ಶಕ್ತಿ ಕಳಕೊಂಡು ಮೊದಲು ಸೋಶಲಿಸ್ಟರ, ನಂತರ ಸುಧಾರಣಾವಾದಿಗಳ ಕೇವಲ ಸ್ವಾರ್ಥಸಾಧಕರ ಶಕ್ತಿ ಹೆಚ್ಚುವಂತಾಗುವಲ್ಲಿ ನಾವೇ ಎಷ್ಟು ಕಾರಣರು ಎಂಬುದನ್ನು ಪರಿಶೀಲಿಸಬೇಕಾಗಿದೆ. ಈ ಪ್ರದೇಶಗಳ ಕಾರ್ಮಿಕ ವರ್ಗ ಸುಧಾರಣಾ ವಾದಿಗಳ ಮಡಿಲಲ್ಲೇ ಇದೆ. ಅದನ್ನು ನಮ್ಮ ಮಾರ್ಗದತ್ತ ಸೆಳೆಯುವುದು ಹೇಗೆ ಎಂದು ನಾವು ಯೋಚಿಸಬೇಕಾಗಿದೆ. ನಾವು ಸಮಾಜವಾದದ ಪರವಾಗಿ ಎಂದು ಘೋಷಿಸಿಕೊಂಡರೆ, ನಾವು ಮಾತ್ರ ಕಾರ್ಮಿಕ ವರ್ಗದ, ದೇಶದ ಹಿತಾಸಕ್ತಿ ಕಾಪಾಡಬಲ್ಲೆವು ಎಂದು ಹೇಳಿಕೊಂಡರಷ್ಟೇ ಸಾಲದು. ನಮ್ಮ ಆಚರಣೆಯಲ್ಲೂ ಇದನ್ನು ತೋರಿಸಿಕೊಡಬೇಕು. ಇಲ್ಲಿಯೇ ನಮ್ಮ ಧೋರಣೆಯನ್ನು ಸ್ಪಷ್ಟವಾಗಿ ವಿವರಿಸುವ ಅಗತ್ಯ ಬರುವುದು.

ಧೋರಣೆಯ ರೂಪೀಕರಣ ಮತ್ತು ವಿಕಾಸನ

ಕಳೆದ ಎರಡು ದಶಕಗಳಲ್ಲಿ ಸಿಐಟಿಯು ಒಂದು ಸ್ಪಷ್ಟ ಧೋರಣೆಯನ್ನು ವಿಕಾಸಗೊಳಿಸಿದೆ. ಅಸಂಘಟಿತರನ್ನು ಸಂಘಟಿಸಬೇಕು, ಯುವ ಕಾರ್ಮಿಕರನ್ನು, ಹೊಸದಾಗಿ ಕೆಲಸಕ್ಕೆ ಸೇರಿದವರ, ಕಾಂಟ್ರಾಕ್ಟ್/ಕ್ಯಾಶುವಲ್ ಕಾರ್ಮಿಕರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಬೇಕು, ನಿರುದ್ಯೋಗಿಗಳಿಗಾಗಿ, ಸಾಮಾಜಿಕವಾಗಿ ದಲಿತರಾದವರಿಗಾಗಿ, ಅಲ್ಪಸಂಖ್ಯಾತರು, ಮಹಿಳೆಯರು ಇತ್ಯಾದಿ ಜನವಿಭಾಗಗಳಿಗಾಗಿ ಹೋರಾಡಬೇಕು; ರೈತ-ಕಾರ್ಮಿಕ ಸಖ್ಯತೆ ಸ್ಥಾಪಿಸಬೇಕು; ಕಾರ್ಮಿಕರು ತಮ್ಮ ಕಾರ್ಯಾಚರಣೆಗಳ ಮೂಲಕವೇ ಪ್ರಜ್ಞಾ ಮಟ್ಟ ಬೆಳೆಸಿಕೊಳ್ಳುವಂತೆ ಮಾಡಬೇಕು; ಕಾರ್ಮಿಕ ವರ್ಗದ ಪ್ರಜ್ಞೆ, ಚಟುವಟಿಕೆ, ಸಂಘಟನೆಯಿಂದ ಮಾತ್ರವೇ ದೇಶದ ಭವಿಷ್ಯವಾಗಿರುತ್ತದೆ - ಇವು ಈ ಸ್ಪಷ್ಟ ಧೋರಣೆಯ ಅಂಶಗಳು.

ಈ ಧೋರಣೆಗಳನ್ನು ಇನ್ನಷ್ಟು ವಿವರವಾಗಿ ತಿಳಿಸಬೇಕು. ನಮ್ಮ ಮುಂದಿರುವ ಕರ್ತವ್ಯಗಳನ್ನು ಪಟ್ಟಿ ಮಾಡಬೇಕು, ಮುಖ್ಯವಾಗಿ ಆಳುವ ವರ್ಗದ ವೇತನ ನೀತಿಯನ್ನು ಸೋಲಿಸುವ ಸಾಮರ್ಥ್ಯ ಪಡೆಯುವುದು ಹೇಗೆ ಎಂಬ ಮಹತ್ವದ ಕರ್ತವ್ಯದ ಬಗ್ಗೆಗಮನ ನೀಡಬೇಕು. ಈರಂಗದಲ್ಲಿ ನಮಗಿನ್ನೂ ಒಂದಾದರೂ ಯಶಸ್ಸು ಗಳಿಸಲು ಸಾಧ್ಯವಾಗಿಲ್ಲ. ಕೇರಳದಲ್ಲಿ ಕನಿಷ್ಟ ಕೂಲಿ ಹೆಚ್ಚಿಸುವುದು ಸಾಧ್ಯವಾಗಿದೆ. ಯುನಿಶಾಯ್ ಮತ್ತು ಸರಕಾರದ ನಡುವಿನ ಪ್ರಖ್ಯಾತ ನ್ಯಾಯ ತೀರ್ಪಿನ ಮೂಲಕ ಈ ರಾಜ್ಯದ ಹೋರಾಟ ಕನಿಷ್ಟ ಕೂಲಿಯ ಪರಿಕಲ್ಪನೆಯಲ್ಲೇ ಒಂದು ಗಮನಾರ್ಹ ಘಟ್ಟ ನಿರ್ಮಿಸಿತು. ನವದೆಹಲಿ ಹೋರಾಟದ ಫಲವಾಗಿ ಇಡೀ ಉತ್ತರಭಾರತದಲ್ಲಿ ಕನಿಷ್ಟ ಕೂಲಿ 1200 ರೂಗೇರಿದೆ. ನಮ್ಮ ರಾಜ್ಯದಲ್ಲಿ ನಾವೂ ಇಂತಹ ದಾರಿ ಹಿಡಿಯಲು ಹೆಣಗುತ್ತಿದ್ದೇವೆ. ಅಖಿಲ ಭಾರತ ಮಟ್ಟದಲ್ಲಿ ನಾವು ಅಗತ್ಯ ಆಧಾರಿತ ಕನಿಷ್ಟ ಕೂಲಿಗಾಗಿ ಹೋರಾಡುವ ಒಂದು ಧೋರಣೆ ಅನುಸರಿಸಬೇಕು. ಸರಕಾರದ ನೀತಿ ಈಗ ಉತ್ಪಾದನಾ ಖರ್ಚನ್ನು ಕಡಿಮೆ ಮಾಡುವ ಹೆಸರಲ್ಲಿ ಖರ್ಚನ್ನ ಹೆಚ್ಚಿಸುತ್ತಿದೆ. ಅದೇ ವೇಳೆಗೆ ಅಗತ್ಯ ಆಧಾರಿತ ಕನಿಷ್ಟ ಕೂಲಿಯನ್ನು ಹೆಚ್ಚಿಸದಿದ್ದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಅಸಂಘಟಿತರ ಸಂಘಟನೆ ಇದನ್ನು ಆಧರಿಸಿರಬೇಕು. ಆದರೆ ಪ್ರತಿಯೊಂದು ಉದ್ದಿಮೆಯ /ವಲಯದ ವಿಶಿಷ್ಟತೆಗಳನ್ನು ಗಮನಿಸಬೇಕು.

ಉದಾಹರಣೆಗೆ, ಬಟ್ಟೆ ಉದ್ಯಮದಲ್ಲಿ ನಾವು ಕಾಂ.ಬಿಟಿಆರ್ ಸಮ್ಮುಖದಲ್ಲಿ ಕೈಮಗ್ಗ, ಪವರ್‌ಲೂಮ್ ಹಾಗೂ ಗಿರಣಿ ವಲಯದ ಬಗ್ಗೆ ನಿರ್ದಿಷ್ಟವಾಗಿ ಪರಿಶೀಲಿಸಿದೆವು. ಗಿರಣಿ ವಲಯದಲ್ಲಿ ಎನ್.ಟಿ.ಸಿ. ಬಗ್ಗೆ ನಿರ್ದಿಷ್ಟವಾಗಿ ಪರಿಶೀಲಿಸಿದೆವು ಏಕೆಂದರೆ ಎನ್‌ಟಿಸಿ ಮಿಲ್ ವಲಯದ ಅತೀ ದೊಡ್ಡ ಕೇಂದರ. ಮೂರು ಸಮಾವೇಶಗಳನ್ನು ನಡೆಸಿದೆವು ಮೂರು ಸಮಿತಿಗಳನ್ನು ಆರಿಸಿದೆವು. ಇವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಬದಲಾಗಿ ಬಟ್ಟೆ ಉದ್ಯಮದ ಕುರಿತಾದ ಒಂದೇ ಸಮಿತಿ ಸಭೆ ಸೇರುತ್ತದೆ. ಏಕೆಂದರೆ ಅಲ್ಲಿ ಚರ್ಚೆ ವಿವಿಧ ವಲಯಗಳ ವಿಶಿಷ್ಟತೆಗಳನ್ನು ಗಮನಿಸುವುದೇ ಇಲ್ಲ.

ಅಖಿಲ ಭಾರತ ಮಟ್ಟದಲ್ಲಿ ಕೂಲಿಯ ಮಟ್ಟವನ್ನು ಒಟ್ಟಾರೆಯಾಗಿ ನಿರ್ಧರಿಸಿ ಆಳುವ ವರ್ಗದ ನೀತಿಗಳನ್ನು ಸೋಲಿಸಲು ಹೋರಾಟ ಸಂಘಟಿಸುವ ಹಾಗೂ ಅದೇ ವೇಳೆಗೆ ಕೈಗಾರಿಕಾ, ವಲಯವಾರು ಹಾಗೂ ಪ್ರಾದೇಶಿಕ ಮಟ್ಟಗಳಲ್ಲಿ ಅವುಗಳ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳುವುದರ ಮಹತ್ವವನ್ನು ಒತ್ತಿ ಹೇಳಲು ಈ ಉದಾಹರಣೆ ನೀಡಲಾಯಿತಷ್ಟೇ. ಒಂದೆಡೆ ಒಂದು ಧೋರಣೆಯನ್ನು ರೂಪಿಸುವುದೇ ಒಂದು ಕೆಲಸವಾದರೆ ಇನ್ನೊಂದೆಡೆ ಅದನ್ನು ವಿಕಾಸಗೊಳಿಸುವುದು ಅಗತ್ಯ

ಒಂದು ಧೋರಣೆಯನ್ನು ವಿಕಾಸಗೊಳಿಸುವಾಗ ವಾಸ್ತವದಲ್ಲಿ ಆ ಧೋರಣೆಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳೇನೆಂದೂ ತಿಳಿದು ಬರುತ್ತದೆ. ನಮ್ಮ ರಾಜ್ಯದಲ್ಲಿ ನಾವು ಧೋರಣೆಗಳನ್ನು ರೂಪಿಸುವಲ್ಲಿ ಯಾರಿಂದಲೂ ಹಿಂದಿಲ್ಲ. ವಿಕಾಸಗೊಳಿಸುವುದು ಮಾತ್ರ ಇನ್ನೂ ದೂರದ ಸಂಗತಿ. ಮತ್ತೆ ಮತ್ತೆ ಈ ಧೋರಣೆಯ ಪುನರಾವರ್ತನೆ ಮಾಡಿದ್ದೇವೆ. ಆದರೆ ಅದನ್ನು ಅನುಸರಿಸುವತ್ತ ಸಾಕಷ್ಟು ಗಮನ ನೀಡಿಲ್ಲ. ಅಂದರೆ ನಾವಾಗಿಯೇ ಧೋರಣೆಯನ್ನು ಅಂಗೀಕರಿಸಿ ವಿಕಾಸಗೊಳಿಸಲಿಲ್ಲ. ಸ್ವಾರ್ಥ ಸಾಧನೆಯ, ವೈಯಕ್ತಿಕವಾದದ ಪ್ರವೃತ್ತಿಗಳೇ ನಮ್ಮ ದಾರಿಯಲ್ಲಿನ ಅಡ್ಡಿಗಳು. ನಾವು ಮುಂದುವರಿಯಬೇಕಾದರೆ ಅವನ್ನು ಬದಿಗೆ ತಳ್ಳಲೇಬೇಕು.

ಕನಿಷ್ಟ ಕೂಲಿ ಕಾರ್ಮಿಕರ ಬಗ್ಗೆ ಅಖಿಲ ಭಾರತ ಧೋರಣೆಯ ಮಹತ್ವವನ್ನು ಒತ್ತಿ ಹೇಳಿದಂತೆ ಸಾರ್ವಜನಿಕ ವಲಯದಲ್ಲಿ ಸರಕಾರದ ಅಖಿಲ ಭಾರತ ಧೋರಣೆಯನ್ನು ಎದುರಿಸುವುದು ನಮ್ಮ ಆಂದೋಲನಕ್ಕೆ ಮಹತ್ವದ ಸಂಗತಿ. ಇಲ್ಲಿಯೂ ಆಂದೋಲನ ಅಗತ್ಯವನ್ನು ಮೈಗೂಡಿಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. ಈ ರಂಗದಲ್ಲಿ ರೂಪಿಸಿದ ಧೋರಣೆಗಳಿಗೇನೂ ಬರವಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಅದನ್ನು ವಿಕಾಸಗೊಳಿಸುವುದರಲ್ಲಿ ಬಹಳ ಹಿಂದೆ ಇದ್ದೇವೆ. ಸಂಘಟನೆಯ ಮುಖ್ಯ ಪ್ರಶ್ನೆಯೆಂದರೆ ಒಂದು ಧೋರಣೆಯನ್ನು ರೂಪೀಕರಿಸಿದ ಮೇಲೆ ಅದನ್ನು ವಿಕಾಸಗೊಳಿಸುವುದು ಹೇಗೆ ಎಂಬುದು. ಅದಕ್ಕೆ ಸೂಕ್ತ ಸಂಘಟನೆಯಿಲ್ಲದೆ ಇಂತಹ ವಿಕಾಸನ ಮೂಡಿಬರಲಾರದು. ಇಂತಹ ವಿಕಾಸನವಿಲ್ಲದಿದ್ದರೆ ಕೇವಲ ಧೋರಣೆ ರೂಪಿಸುವುದಕ್ಕೆ ಅರ್ಥವಿರುವುದಿಲ್ಲ. ಮುನ್ನಡೆಯ ದಾರಿಯನ್ನು ನಿರ್ಧರಿಸುವಂತದ್ದು ಸಂಘಟನೆಯೇ. •

ಕಾವಿಪಡೆಗಳ ಶುದ್ಧ ಸುಳ್ಳು

ಪುಟ 5ರಿಂದ

ಎಸ್. ತಮ್ಮ ಸಂಕುಚಿತ ಕಾರ್ಯಕ್ರಮವನ್ನು ಸಮರ್ಥಿಸಿಕೊಳ್ಳಲು ಕಾಶ್ಮೀರದಲ್ಲಿ ದೇವಸ್ಥಾನಗಳಿಗೆ ನಷ್ಟವಾಗಿದೆ ಎಂಬ ಉತ್ಪ್ರೇಕ್ಷಿತ, ಆಧಾರರಹಿತ ಆಪಾದನೆಗಳನ್ನು ಮಾಡಿವೆ. ಈ ಮೋಸವನ್ನು ಬಯಲಿಗೆಳೆಯಬೇಕು. ಒಂದು ಪೂರ್ವನಿಧಾರಿತ ಸಿದ್ಧಾಂತಕ್ಕೆ ವಾಸ್ತಾವಂಶಗಳು ಹೊಂದಿಕೊಳ್ಳುವಂತೆ ಮಾಡುವ ಪ್ರಯತ್ನ ಸಲ್ಲದು.

ಬೀಡಿ ಕಾರ್ಮಿಕರ ವಾರ್ಷಿಕ ಮಹಾಸಭೆ

ಕುಪ್ಪೆಪದವು : ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ ತಾ. 7.2.93ರಂದು ಕುಪ್ಪೆಪದವುನಲ್ಲಿ ಸುಂದರನಾಯ್ಕರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಗತವರ್ಷದ ವರದಿಯನ್ನು ಸಂಘದ ಕಾರ್ಯದರ್ಶಿ ವಾಸುದೇವ ಆಚಾರಿ ಮಂಡಿಸಿದರು. ಲೆಕ್ಕಪತ್ರವನ್ನು ಸಂಘದ ಕೋಶಾಧಿಕಾರಿ ಮಂಡಿಸಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿದ್ದ ದ.ಕ. ಜಿಲ್ಲಾ ಸಿಐಟಿಯು ಅಧ್ಯಕ್ಷ ಬಿ. ಮಾಧವ ಬೀಡಿ ಕಾರ್ಮಿಕರು ತಮ್ಮ ಸವಲತ್ತುಗಳನ್ನು ಪಡೆಯಲು ಹೋರಾಟ ಮಾಡುವುದರೊಟ್ಟಿಗೆ ದೇಶದ ಏಕತೆ ಸಮಗ್ರತೆಗಾಗಿ ಹೋರಾಟ ಮಾಡಬೇಕಾಗಿದೆ. ಕೇಂದ್ರ ಸರಕಾರ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ಸಾಲಕ್ಕಾಗಿ ಅವರ ಷರತ್ತುಗಳನ್ನು ಜ್ಯಾರಿಗೊಳಿಸಿ ದೇಶದ ಆರ್ಥಿಕ ಸ್ವಾವಲಂಬನೆ ಸ್ವಾತಂತ್ರ್ಯವನ್ನು ಮಾರುತ್ತಿದ್ದಾರೆ. ಕಾರ್ಮಿಕ ವರ್ಗ ಸರಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸಿ ಹಲವಾರು ಪ್ರತಿಭಟನೆಗಳನ್ನು ಈಗಾಗಲೇ ಮಾಡಿದೆ. ಈಗ ಕೇಂದ್ರ ಸರಕಾರ ಮತ್ತು ಕೋಮುವಾದಿ ಶಕ್ತಿಗಳು ತಮ್ಮ ರಾಜಕೀಯ ಲಾಭಕ್ಕಾಗಿ ರಾಜಕೀಯದೊಂದಿಗೆ ಧರ್ಮವನ್ನು ಬೆರೆಸಿ ದೇಶದ ಜಾತ್ಯಾತೀತ ಪ್ರಜಾಪ್ರಭುತ್ವ ಸಂವಿಧಾನ ನ್ಯಾಯಾಲಯವನ್ನು ಬಹಿಷ್ಕರಿಸಿ, ಬಾಬರಿ ಮಸೀದಿಯನ್ನು ಕೆಡವಿದರು. ಇದರಿಂದ ಕೋಮು ಗಲಭೆಗೆ ಕಾರಣರಾದರು. ಈ ಶಕ್ತಿಗಳನ್ನು ಬಯಲಿಗೆ ಎಳೆಯಲು ಕಾರ್ಮಿಕ ವರ್ಗ ಅಣಿಯಾಗಬೇಕೆಂದು ಕರೆ ನೀಡಿದರು.

ದ.ಕ. ಜಿಲ್ಲಾ ಬೀಡಿ ಫೇಡರೇಶನ್ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಮಾತನಾಡುತ್ತಾ ಅಸಂಘಟಿತ ಕಾರ್ಮಿಕರಿಗೆ 1,050-00 ರೂಪಾಯಿ ಕನಿಷ್ಟ ಕೂಲಿಗಾಗಿ ನಡೆಯುವ ಹೋರಾಟಕ್ಕೆ ಮುಂದಾಗಲು ಬೀಡಿ ಕಾರ್ಮಿಕರಿಗೆ ಕರೆ ನೀಡಿದರು.

ಡಿವೈಎಫ್ಐ ಜಿಲ್ಲಾ ಅಧ್ಯಕ್ಷ ವಸಂತ ಆಚಾರಿಯವರು ಶುಭ ಕೋರಿ ಮಾತನಾಡಿದರು. ಮಹಾಸಭೆಯು ಕೋಮು ಸೌಹಾರ್ದತೆ ಕಾಪಾಡುವ, ರಾಷ್ಟ್ರೀಯ ಕನಿಷ್ಟ ಕೂಲಿ ವೆಲ್‌ಫೇರ್ ಫಂಡಿನಿಂದ ಸಿಗುವ ಸವಲತ್ತಿಗಾಗಿ ಬೆಲೆಯೇರಿಕೆ ತಡೆಗಟ್ಟಬೇಕೆಂಬುದರ ಸಹಿತ ಒಟ್ಟು ಒಂಭತ್ತು ನಿರ್ಣಯಗಳನ್ನು ಅಂಗೀಕರಿಸಿರುತ್ತದೆ.

ಮುಂದಿನ ಸಾಲಿಗೆ ಕೆ.ಸುಂದರನಾಯ್ಕ ಅಧ್ಯಕ್ಷರಾಗಿ, ಭವಾನಿ, ಸುಂದರ ಪೂಜಾರಿ, ನೋಣಯ ಗೌಡ ಉಪಾಧ್ಯಕ್ಷರಾಗಿ, ಕೆ.ವಾಸುದೇವ ಆಚಾರಿ ಕಾರ್ಯದರ್ಶಿಯಾಗಿ, ಸರೋಜಿನಿ, ಲಕ್ಷ್ಮಿ ಸುಂದರಿದಾಸ್ ಸಹ ಕಾರ್ಯದರ್ಶಿಯಾಗಿ ಸದಾಶಿವ ದಾಸ್ ಕೋಶಾಧಿಕಾರಿಯಾಗಿರುವ 27 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ವಾಸುದೇವ ಆಚಾರಿ ಸ್ವಾಗತಿಸಿ ಸದಾಶಿವ ದಾಸ್ ವಂದಿಸಿದರು.

ಬಾಗಲಕೋಟೆಯಲ್ಲಿ ಮಾನವ ಸರಪಳಿ

ಬಾಗಲಕೋಟೆ : ರಾಷ್ಟ್ರೀಯ ಏಕತಾ ಆಂದೋಳನದ ಕರೆಯಂತೆ ದಿ. 26-1-93ರಂದು ಬಾಗಲಕೋಟೆಯಲ್ಲಿ ಕೋಮು ಸೌಹಾರ್ದತಾ ದಿನಾಚರಣೆಯನ್ನು ಆಚರಿಸಲಾಯಿತು. ದಿ. 26-1-93ರಂದು ಮುಂಜಾನೆ 12 ಗಂಟೆ ಸುಮಾರಿಗೆ ಜನತಾದಳ ಕಾರ್ಯಾಲಯದಿಂದ ಸಿಪಿಐ(ಎಂ), ಜನತಾದಳ ಹಾಗೂ ಸಮಾಜವಾದಿ ಜನತಾ ಪಕ್ಷದ ಕಾರ್ಯಕರ್ತರು ಬಹುಸಂಖ್ಯೆಯಲ್ಲಿ ಕೋಮು ಸೌಹಾರ್ದತೆ, ರಾಷ್ಟ್ರದ ಐಕ್ಯತೆಗಳಿಗೆ ಸಂಬಂಧಿಸಿದ ಘೋಷಣೆಗಳೊಂದಿಗೆ ಮೆರವಣಿಗೆಯಲ್ಲಿ ಹೊರಟು ನಗರದ ಕೇಂದ್ರ ಸ್ಥಳವಾದ ವಲ್ಲಭಾಯಿಚೌಕಿನಲ್ಲಿ ಮಾನವ ಸರಪಳಿಯನ್ನು ನಿರ್ಮಿಸಿದರು.

ಸುಮಾರು 10 ನಿಮಿಷಗಳ ಮಾನವ ಸರಪಳಿ ಕಾರ್ಯಕ್ರಮದ ನಂತರ ಸಿಪಿಐ(ಎಂ) ಮುಖಂಡ ಡಿ.ಎಂ.ಖಿಲಾಸಿ ಮಾತನಾಡಿದರು.

ಜನತಾ ದಳದ ತಾಲೂಕಾ ಅಧ್ಯಕ್ಷ ಎಸ್.ಬಿ. ಹಲಗಪ್ಪನವರ ಮಾತನಾಡಿದರು.

ಫೆ. 22ರಿಂದ ಪಂಚಾಯತ್ ನೌಕರರ ಸಾಮೂಹಿಕ ಧರಣೆ ಆರಂಭ

ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ ಎಂಪ್ಲಾಯಿಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಉಪಾಧ್ಯಾಯರವರು 11-2-93ರಂದು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಹೇಳಿಕೆ.

9-3-93ರಂದು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದ ಮಂಡಲ ಪಂಚಾಯ ನೌಕರರು ತಮ್ಮ ಬೇಡಿಗಳ ಸಲುವಾಗಿ ಒತ್ತಾಯಿಸಿ ಕಬ್ಬನ್ ಪಾರ್ಕ್‌ನಲ್ಲಿ ದರಣೆ ನಡೆಸುತ್ತಿದ್ದಾಗ ಆಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಯಾದ ಮಲ್ಲಿಕಾರ್ಜುನ ಖರ್ಗೆಯವರು ಮತ ಪ್ರದರ್ಶನಕಾರರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಗುಲ್ಬರ್ಗಾ ಜಿಲ್ಲಾ ಪರಿಷತ್ ತನ್ನ ಮಂಡಲ ಪಂಚಾಯಿತಿ ನೌಕರರಿಗೆ ರೂ. 500-00 ರಿಂದ 780 ಮತ್ತು 960 ವೇತನ ಮತ್ತು ರಜಾ ಸೌಲಭ್ಯಗಳನ್ನು ಕೊಡುತ್ತಿರುವಾಗ ಇತರ ಜಿಲ್ಲೆಗಳ ನೌಕರರಿಗೂ ಅದು ಯಾಕೆ ಸಿಗಬಾರದೆಂದು ಪ್ರಶ್ನೆ ಕೇಳಿ, ಅದನ್ನು ಜಾರಿಯಲ್ಲಿ ತರಲಾಗುವುದೆಂಬ ಆಶ್ವಾಸನೆ ನೀಡಿ ಸೇವಾ ನಿಯಮಕ್ಕೆ ಒಪ್ಪಿಗೆ ಪಡೆಯುವ ಆಶ್ವಾಸನೆ ನೀಡಿದರು. ಆದರೆ ಮಂತ್ರಿಗಳು ತಮ್ಮ ಆಶ್ವಾಸನೆಯನ್ನು ಕಾರ್ಯಗತಗೊಳಿಸದೆ ಮೋಸ ಮಾಡಿದ್ದಾರೆ ಅದು ಖಂಡನೀಯ.

1-4-87ರಿಂದ ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿ ಅಸ್ತಿತ್ವದಲ್ಲಿ ಬಂದಂದಿನಿಂದ ಸಾಧಾರಣ 2000 ಮಂಡಲ ಪಂಚಾಯತಿಯಲ್ಲಿ ದುಡಿಯುತ್ತಿರುವ 15000ದಷ್ಟು ನೌಕರರ ಪರಿಸ್ಥಿತಿ ಗಂಭೀರವಾಗಿದೆ. ಅವರಿಗೆಲ್ಲಾ ನೌಕರಿ ಭದ್ರತೆಯಿಲ್ಲದೆ ಹಲವಾರು ಜನ ನೌಕರಿ ಕಳಕೊಂಡಿದ್ದಾರೆ. ಅವರಿಗೆ ಸೇವಾ ನಿಯಮಗಳಿಲ್ಲ. ಸರಿಸಮಾನ ವೇತನವಿಲ್ಲ. ರಜಾ ಸೌಲಭ್ಯಗಳಿ, ನಿವೃತ್ತ ವೇತನದಲ್ಲಿ ಹಳೇ ಪಂಚಾಯಿತಿಗಳಿಲ್ಲ. 20-30 ವರ್ಷಗಳಿಂದ ದುಡಿಯುತ್ತಿರುವ ನೌಕರರಿಗೆ ನಿವೃತ್ತಿ ವೇತನವಾಗಲಿ, ಮರಣ ಹೊಂದಿದರೆ ಕುಟುಂಬ ಪರಿಹಾರವಾಗಲಿ ಸಿಗುತ್ತಿಲ್ಲ.

1988ರಿಂದಲೂ ನಾವು ಹೋರಾಡುತ್ತಾ ಬಂದರೂ ಸರಕಾರ ಕಣ್ಣು ತೆರೆಯುತ್ತಿಲ್ಲ. ಆದ್ದರಿಂದ ನಮ್ಮ ಬೇಡಿಕೆಗಳ ಈಡೇರಿಕೆ ಸಲುವಾಗಿ 22-2-93ರಿಂದ ಕಬ್ಬನ್ ಪಾರ್ಕ್‌ನಲ್ಲಿ ಸಾಮೂಹಿಕ ಧರಣೆ ನಡೆಸಲಾಗುವುದು. 23ರಂದು ಸಾಮೂಹಿಕ ಉಪವಾಸ, 24ರಿಂದ ಸ್ವಾತಂತ್ರ್ಯಯೋಧರು, ಸ್ವಾತಂತ್ರ್ಯಕ್ಕಾಗಿ ಕರ್ನಾಟಕ ಏಕೀಕರಣಕ್ಕಾಗಿ 7 ವರ್ಷ ಜೈಲುವಾಸ ಅನುಭವಿಸಿದವರೂ, ಸಿಪಿಐ(ಎಂ) ಸೆಕ್ರೆಟಾರಿಯೆಟ್ ಸದಸ್ಯರು, ಸಿಐಟಿಯು ಕಾರ್ಯದರ್ಶಿಗಳೂ, ಮಂಡಲ ಪಂಚಾಯತ್ ಯೂನಿಯನ್ ಪ್ರಧಾನ ಕಾರ್ಯದರ್ಶಿಯವರಾದ ಎಸ್.ಕೆ.ಉಪಾಧ್ಯಾಯ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಿದ್ದಾರೆ. ಕುರ್ತಾಗಿ ಸರಕಾರದವರು ಸದ್ಯ ಗುಲ್ಬರ್ಗಾ ಮಂಡಲ ಪಂಚಾಯತ್ ನೌಕರರಿಗೆ ಸಿಗುವ ಎಲ್ಲಾ ಸವಲತ್ತುಗಳನ್ನು ಮಂಜೂರ ಮಾಡಬೇಕು. ಸೇವಾ ನಿಯಮಗಳು ತಯಾರಾಗಿದ್ದು ಅದಕ್ಕೆ ಮಂಜೂರಾತಿ ನೀಡಬೇಕು. ನಿವೃತ್ತರಾದ, ಮೃತರಾದ ನೌಕರರಿಗೆ ನಿವೃತ್ತಿ ವೇತನ, ಪರಿಹಾರ ಧನ, ಮಕ್ಕಳಿಗೆ ನೌಕರಿ ಸಿಗಬೇಕು, ಮಂಡಲ ಪಂಚಾಯಿತಿ ನೌಕರರಿಗೆ ನಗರಸಭೆ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳು ಹಾಗೆ ಎಲ್ಲಾ ಇತರ ಬೇಡಿಕೆಗಳ ಕುರಿತು ಚರ್ಚಿಸಿ ಪರಿಹಾರ ಒದಗಿಸಲು ಅಧಿಕಾರಿಗಳ ಯೂನಿಯನ್ ಪ್ರತಿನಿಧಿಗಳ ಜಂಟಿ ಸಮಿತಿ ನೇಮಿಸಬೇಕು.

ಫೆಬ್ರವರಿ 23ರಂದು ರಾಜ್ಯ ಸರಕಾರಿ ನೌಕರರಿಂದ ಕೋಮು ಸಾಮರಸ್ಯ ದಿನಾಚರಣೆ

ಬೆಂಗಳೂರು : ಇಂದು ನಮ್ಮ ದೇಶದ ಜನರ ಮನಸ್ಸನ್ನು ಮತೀಯವಾಗಿ ಕಲುಷಿತಗೊಳಿಸಲು ಕೆಲವು ಶಕ್ತಿಗಲು ಶತಾಯಗತಾಯ ಪ್ರಯತ್ನಿಸುತ್ತಿರುವುದರಿಂದ ದೇಶದ ಐಕ್ಯತೆ ಮತ್ತು ಸಮಗ್ರತೆ ಹಾಗೂ ಕೋಮು ಸಾಮರಸ್ಯಕ್ಕೆ ತೀವ್ರ ಧಕ್ಕೆಯುಂಟಾಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ದೇಶದ ಸಂವಿಧಾನ ಜಾತ್ಯಾತೀತ ಮೌಲ್ಯಗಳನ್ನು ಎತ್ತಿ ಹಿಡಿದು, ಕೋಮು ಸಾಮರಸ್ಯಕ್ಕಾಗಿ ಶ್ರಮಿಸುವುದು ರಾಜ್ಯ ಸರಕಾರಿ ನೌಕರರೂ ಸೇರಿದಂತೆ ಪ್ರತಿಯೊಬ್ಬ ದೇಶಪ್ರೇಮಿಯ ಆದ್ಯ ಕರ್ತವ್ಯವಾಗಿದೆ.

ಈ ಉದ್ದೇಶಕ್ಕಾಗಿ ಫೆಬ್ರವರಿ 23ರಂದು ದೇಶಾದ್ಯಂತ ಎಲ್ಲಾ ಹಂತಗಳಲ್ಲೂ ಸಭೆ ಮತ್ತು ಮತ ಪ್ರದರ್ಶನಗಳನ್ನು ನಡೆಸುವುದರ ಮೂಲಕ ಅಖಿಲ ಭಾರತ ಕೋಮು ಸಾಮರಸ್ಯ ದಿನವನ್ನು ಆಚರಿಸುವಂತೆ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ದೇಶದ 60 ಲಕ್ಷ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರಿಗೆ ಕರೆ ನೀಡಿದೆ.

ಈ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಯಶಸ್ವಿಗೊಳಿಸುಂತೆ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ(ಐಕ್ಯತಾ ವೇದಿಕೆ) ಎಲ್ಲಾ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರಲ್ಲಿ ಮನವಿ ಮಾಡಿದೆ. ಆ ದಿನದ ಸಭೆಗಳಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ದೇಶದ ಪ್ರಧಾನ ಮಂತ್ರಿಗಳಿಗೂ ರಾಜ್ಯದ ಮುಖ್ಯಮಂತ್ರಿಗಳಿಗೂ ಕಳುಹಿಸಿಕೊಡಲಾಗುವುದು ಎಂದು ಐಕ್ಯತಾ ವೇದಿಕೆ ತಿಳಿಸಿದೆ.

ಕೇಂದ್ರ ಸರಕಾರದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನು ಹಿಮ್ಮೆಟ್ಟಿಸಲು ಸುಕೋಮಲ್ ಸೇನ್ ಕರೆ

ಬೆಂಗಳೂರು : ಕೇಂದ್ರ ಸರಕಾರವು ಅನುಸರಿಸುತ್ತಿರುವ ಜನವಿರೋಧಿ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನು ಹಿಮ್ಮೆಟ್ಟಿಸಲು ನೌಕರರು ಮತ್ತು ಕಾರ್ಮಿಕರು ಐಕ್ಯ ಹೋರಾಟ ನಡೆಸಬೇಕೆಂದು ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳೂ, ರಾಜ್ಯಸಭಾ ಸದಸ್ಯರೂ ಆಗಿರುವ ಕಾಂ.ಸುಕೋಮಲ್ ಸೇನ್‌ರವರು, ಫೆಬ್ರವರಿ 3ರಂದು ಸಂಜೆ ಬೆಂಗಳೂರಿನ ಯುವಜನ ಕೇಂದ್ರದಲ್ಲಿ ನಡೆದ ರಾಜ್ಯ ಸರಕಾರಿ ನೌಕರರ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕರೆ ನೀಡಿದರು.

ಡಿಸೆಂಬರ್ 6ರಂದು ನಡೆದ ಅಯೋಧ್ಯೆಯ ಘಟನೆಯ ನಂತರ ಜನರ ಮನಸ್ಸನ್ನು ಮತೀಯವಾಗಿ ಕಲುಷಿತಗೊಳಿಸಲು ಕೆಲವು ಶಕ್ತಿಗಳು ಪ್ರಯತ್ನಿಸುತ್ತಿದ್ದು, ಸರಕಾರದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳ ವಿರುದ್ಧ ರೂಪುಗೊಳ್ಳಬೇಕಾಗಿದ್ದ ಪ್ರಬಲಾಂದೋಲನಕ್ಕೆ ಈ ಬೆಳವಣಿಗೆಯಿಂದ ಸದ್ಯಕ್ಕೆ ಹಿನ್ನಡೆ ಉಂಟಾಗಿದೆ. ಆದರೆ ನೌಕರರು, ಕಾರ್ಮಿಕರು ಮತ್ತು ಜನಸಾಮಾನ್ಯರ ಮುಂದಿರುವ ಇಂದಿನ ಪ್ರಶ್ನೆ ಮಂದಿರವಾಗಲಿ, ಮಸೀದಿಯಾಗಲಿ ಆಗಿರುವುದಿಲ್ಲ. ಬದಲಾಗಿ ಸೇವಾ ಭದ್ರತೆ, ಬೆಲೆಯೇರಿಕೆಗೆ ತಕ್ಕಂತೆ ವೇತನ ಹೆಚ್ಚಳ, ನಿರುದ್ಯೋಗಿಗಳಿಗೆ ಉದ್ಯೋಗ ಇವುಗಳು ಮುಖ್ಯವಾಗಿವೆ.

ಆದ್ದರಿಂದ ರಾಜ್ಯ ಸರಕಾರಿ ನೌಕರರು ಇತರ ಕಾರ್ಮಿಕ ಸಂಘಗಳೊಂದಿಗೆ ಸೇರಿ ಐಕ್ಯ ಹೋರಾಟ ನಡೆಸಬೇಕೆಂದೂ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟನೆಯನ್ನು ಬಲಪಡಿಸಬೇಕೆಂದೂ ಒತ್ತಿ ಹೇಳಿದರು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ(ಐಕ್ಯತಾ ವೇದಿಕೆ) ಅಧ್ಯಕ್ಷರಾದ ಎಲ್.ದೊರೆಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೆ.ರಾಮಯ್ಯ ಹೆಗ್ಡೆ ಸ್ವಾಗತಿಸಿದರು. ಖಜಾಂಚಿ ಎಸ್.ರೇಣುಕಾರಾಧ್ಯ ವಂದನೆ ಸಲ್ಲಿಸಿದರು.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462.
ಸಂಪಾದಕರು : ಪಿ.ರಾಮಚಂದ್ರರಾವ್